ಅನುಷ್ಕಾಗೆ ಪದಕ



ಕರ್ನಾಟಕದ ಅನುಷ್ಕಾ ತೋಕೂರ್ ಅವರು ನವದೆಹಲಿಯಲ್ಲಿ ನಡೆಯುತ್ತಿರುವ ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಜೂನಿಯರ್ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಕಂಚು ಗೆದ್ದರು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ ಸ್ಕ್ಯಾನ್ ಮಾಡಿ

ಸೆನ್ಸೆಕ್ಸ್ 84,273 | ನಿಫ್ಟಿ 25,935 | $/₹ 90.56 | ಚಿನ್ನ (Std. 10g) ₹1,62,650 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,76,500 (ಬೆಂಗಳೂರು)

ಕೃಷಿ ಉತ್ಪನ್ನ ಸುಂಕ ಕಡಿತ?

ಭಾರತ-ಅಮೆರಿಕ ವ್ಯಾಪಾರ ಒಪ್ಪಂದ ಫ್ಯಾಕ್ಟ್ ಶೀಟ್ ಪ್ರಕಟಿಸಿದ ಶ್ವೇತಭವನ

ಪ್ರಜಾವಾಣಿ ವಾರ್ತೆ/ಪಿಟಿಐ

ವಾಷಿಂಗ್ಟನ್/ನವದೆಹಲಿ: 'ಕೆಲವು ದ್ವಿದಳ ಧಾನ್ಯಗಳು ಸೇರಿದಂತೆ ಅಮೆರಿಕದಿಂದ ಆಮದು ಮಾಡಿಕೊಳ್ಳುವ ವಿಶಾಲ ಶ್ರೇಣಿಯ ಆಹಾರ ಮತ್ತು ಕೃಷಿ ಉತ್ಪನ್ನಗಳ ಮೇಲಿನ ಸುಂಕವನ್ನು ಕಡಿತ ಮಾಡಲು ಅಥವಾ ಶೂನ್ಯಕ್ಕಿಳಿಸಲು ಭಾರತ ಮುಂದಾಗಿದೆ' ಎಂದು ಶ್ವೇತಭವನ ಸೋಮವಾರ ಬಿಡುಗಡೆ ಮಾಡಿರುವ ಫ್ಯಾಕ್ಟ್ ಶೀಟ್ ವರದಿ ಹೇಳಿದೆ.



ಭಾರತ ಮತ್ತು ಅಮೆರಿಕ ನಡುವಿನ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದ (ಬಿಟಿಎ) ರೂಪುರೇಷೆ, ನಿಬಂಧನೆಗಳನ್ನು ಒಳಗೊಂಡ ಫ್ಯಾಕ್ಟ್ ಶೀಟ್‌ಅನ್ನು, 'ಮುಂದಿನ ಸಮೃದ್ಧ ಹಾದಿ' ಎಂದೇ ಬಣ್ಣಿಸಲಾಗಿದೆ. ಇದರಲ್ಲಿರುವ ಅಂಶಗಳು ಯಥಾವತ್ ಜಾರಿಗೊಂಡರೆ, ಅದು ಭಾರತ ಕೃಷಿ ವಲಯದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು.

ಈಗಾಗಲೇ ಭಾರತ-ಅಮೆರಿಕ ನಡುವೆ ಫೆಬ್ರುವರಿ 6ರಂದು ಮಧ್ಯಂತರ ಒಪ್ಪಂದದ ಚೌಕಟ್ಟನ್ನು ರೂಪಿಸಲಾಗಿದೆ. ಇದಾದ ಮೂರು ದಿನಗಳಲ್ಲೇ ಫ್ಯಾಕ್ಟ್ ಶೀಟ್ ಬಿಡುಗಡೆಗೊಂಡಿದೆ. ಕೃಷಿ, ಆಹಾರ ಉತ್ಪನ್ನಗಳ ಸುಂಕ ಕಡಿತಕ್ಕೆ ಸಂಬಂಧಿಸಿದಂತೆ ಫೆ.6ರಂದು ಉಭಯ ದೇಶಗಳು ನೀಡಿದ ಹೇಳಿಕೆಗೂ, ಫ್ಯಾಕ್ಟ್ ಶೀಟ್‌ನಲ್ಲಿರುವ ಅಂಶಗಳಿಗೂ ವ್ಯತ್ಯಾಸ ಕಂಡುಬಂದಿದೆ.

ಅಮೆರಿಕದೊಂದಿಗಿನ ವ್ಯಾಪಾರ ಒಪ್ಪಂದದ ವೇಳೆ ಆಹಾರ ಮತ್ತು ಕೃಷಿ ಕ್ಷೇತ್ರಗಳ ಹಿತಾಸಕ್ತಿ ಕಾಪಾಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕೆ ಸಚಿವ ಪೀಯೂಷ್ ಗೋಯಲ್ ಸಂಸತ್‌ಗೆ ಭರವಸೆ ನೀಡಿದ್ದರು. ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಕೂಡ, 'ಗೋಧಿ, ಜೋಳ, ಅಕ್ಕಿ, ರಾಗಿ, ಆಲೂಗಡ್ಡೆ, ಈರುಳ್ಳಿ, ಬಟಾಣಿ, ಬೀನ್ಸ್, ಸೌತೆಕಾಯಿ, ಅಣಬೆ, ದ್ವಿದಳ ಧಾನ್ಯಗಳು ಅಮೆರಿಕದಿಂದ ಭಾರತಕ್ಕೆ ಬರುವುದಿಲ್ಲ' ಎಂದು ಹೇಳಿದ್ದರು.

ಆದರೆ, ಫ್ಯಾಕ್ಟ್ ಶೀಟ್‌ನಲ್ಲಿ ಮುಖ್ಯವಾಗಿ, ಅಮೆರಿಕದಿಂದ ಆಮದು ಮಾಡಿಕೊಳ್ಳುವ ಮತ್ತು ಸುಂಕ ಕಡಿತಕ್ಕೆ ಒಳಗಾಗುವ ಸರಕುಗಳಲ್ಲಿ 'ಮಸೂರ್ ಬೇಳೆ'ಯನ್ನು ಉಲ್ಲೇಖಿಸಲಾಗಿದೆ. ಸದ್ಯ ಮಸೂರ್ ಬೇಳೆಗೆ ಶೇ 10ರಷ್ಟು ಸುಂಕ ಇದೆ. ಇದರ ಜತೆಗೆ 'ಕೆಂಪು ಜೋಳ'ವನ್ನು ಮೇವು ಎಂದು ಮೊದಲು ಹೇಳಲಾಗಿತ್ತು. ಫ್ಯಾಕ್ಟ್ ಶೀಟ್‌ನಲ್ಲಿ ಎಲ್ಲ ಬಗೆಯ ಕೆಂಪು ಜೋಳವನ್ನೂ ಸುಂಕ ಕಡಿತಕ್ಕೆ ಒಳಗಾಗುವ ಸರಕುಗಳ ಪಟ್ಟಿಗೆ ಸೇರಿಸಲಾಗಿದೆ.

▶10

ಸುಂಕ ಇಳಿಕೆ ಸಾಧ್ಯತೆ

ಧಾನ್ಯಗಳು, ಬೇಳೆಕಾಳುಗಳು, ಕೆಂಪು ಜೋಳ, ಡ್ರೈಫ್ರೂಟ್‌ಗಳು, ತಾಜಾ ಮತ್ತು ಸಂಸ್ಕರಿಸಿದ ಹಣ್ಣು, ದ್ವಿದಳ ಧಾನ್ಯಗಳು, ಸೋಯಾಬೀನ್ ಎಣ್ಣೆ, ವೈನ್ ಮತ್ತು ಮದ್ಯ

ಭಾರತದ ಒಪ್ಪಿಗೆ



ಅಮೆರಿಕದಿಂದ ಇಂಧನ, ಮಾಹಿತಿ ತಂತ್ರಜ್ಞಾನ, ಸಂವಹನ, ಕಲ್ಲಿದ್ದಲು, ಕೃಷಿ ಮತ್ತು ಇತರೆ ವಲಯಗಳ ಉತ್ಪನ್ನಗಳು ಸೇರಿ ಒಟ್ಟು 500 ಬಿಲಿಯನ್ ಡಾಲರ್‌ಗಿಂತ (ಸರಿಸುಮಾರು ₹45.28 ಲಕ್ಷ ಕೋಟಿ) ಹೆಚ್ಚಿನ ಮೊತ್ತದ ಸರಕಗಳನ್ನು ಖರೀದಿಸಲು ಭಾರತ ಒಪ್ಪಿಕೊಂಡಿದೆ.

ಅಮೆರಿಕದ ಆದ್ಯತೆ

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈ ಒಪ್ಪಂದದ ಮೂಲಕ ಅಮೆರಿಕದ ರಾಷ್ಟ್ರೀಯ ಮತ್ತು ಆರ್ಥಿಕ ಭದ್ರತೆ ರಕ್ಷಿಸಲು ಮತ್ತು ಅಲ್ಲಿನ ರಫ್ತುದಾರರಿಗೆ ಮಾರುಕಟ್ಟೆ ಪ್ರವೇಶಕ್ಕೆ ಪ್ರೋತ್ಸಾಹ ನೀಡುತ್ತಿದ್ದಾರೆ. ಸುಂಕ ಮತ್ತು ಸುಂಕ ರಹಿತ ಸರಕುಗಳ ನಡುವಿನ ವ್ಯಾಪಾರ ಅಡೆತಡೆ ನಿವಾರಿಸಲು ಯತ್ನಿಸುತ್ತಿದ್ದಾರೆ.

ಭಾರತದ ರಕ್ಷಣಾತ್ಮಕ ಸುಂಕ ನೀತಿ

ಭಾರತವು ಅಮೆರಿಕದ ಮೇಲೆ ಗರಿಷ್ಠ ಸುಂಕ ದರವನ್ನೇ ಕಾಯ್ದುಕೊಂಡಿದೆ. ಕೃಷಿ ಉತ್ಪನ್ನಗಳ ಮೇಲೆ ಶೇ 37ರಷ್ಟು, ಕೆಲವು ವಾಹನಗಳಿಗೆ ಶೇ 100ರಷ್ಟು ತೆರಿಗೆ ವಿಧಿಸಲಾಗುತ್ತಿದೆ. ಭಾರತವು ಹೆಚ್ಚು ರಕ್ಷಣಾತ್ಮಕವಾದ ಸುಂಕ ವಿಧಿಸುವ ಇತಿಹಾಸವನ್ನು ಹೊಂದಿದೆ. ಇದರಿಂದ ಅಮೆರಿಕದಿಂದ ಭಾರತಕ್ಕೆ ಹಲವು ಸರಕುಗಳ ರಫ್ತು ನಿಷೇಧಿಸಲಾಗಿದೆ ಎಂದು ಫ್ಯಾಕ್ಟ್ ಶೀಟ್ ಹೇಳಿದೆ. ಅಂತಿಮ ಒಪ್ಪಂದದ ಮೂಲಕ ಭಾರತ ಮತ್ತು ಅಮೆರಿಕದ ಮುಂದೆ ಸ್ಪಷ್ಟವಾದ ಮಾರ್ಗ ತೆರೆದುಕೊಳ್ಳುತ್ತದೆ. ಪ್ರಮುಖ ವ್ಯಾಪಾರ ಪಾಲುದಾರ ದೇಶವಾಗಿರುವ ಭಾರತದೊಂದಿಗೆ ಸಮತೋಲಿತ, ಪರಸ್ಪರ ಸಹಕಾರದ ವ್ಯಾಪಾರ ಒಪ್ಪಂದ ಸಾಕಾರಗೊಳ್ಳಲು ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಬದ್ಧತೆ ಕಾರಣ ಎಂದೂ ಶ್ವೇತಭವನ ಹೇಳಿದೆ.

ಬೊಕ್ಕಸದ ಹೊರೆ ತಗ್ಗಿಸಿದ ಸುಪ್ರೀಂ ಕೋರ್ಟ್ ತೀರ್ಪು

● ಮಂಜುನಾಥ ಹೆಬ್ಬಾರ್



ನವದೆಹಲಿ: 'ಭೂಸ್ವಾಧೀನಕ್ಕಾಗಿ ನೀಡಲಾದ ಪರಿಹಾರದ ವಿರುದ್ಧ ಸಲ್ಲಿಕೆಯಾಗಿರುವ ಮೇಲ್ಮನವಿಗಳು ಲಿಮಿಟೇಷನ್ (ಮಿತಿ) ಕಾಯ್ದೆಯ ವ್ಯಾಪ್ತಿಗೆ ಬರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಮೇಲ್ಮನವಿ ಸಲ್ಲಿಸುವುದು ವಿಳಂಬವಾದಲ್ಲಿ ಹೈಕೋರ್ಟ್‌ಗಳು ಅದನ್ನು ಕ್ಷಮಿಸಬಹುದು' ಎಂದು ಸುಪ್ರೀಂ ಕೋರ್ಟ್ ಮಹತ್ವದ ತೀರ್ಪು ನೀಡಿದೆ.

ತೀರ್ಪಿನಿಂದಾಗಿ, ಕರ್ನಾಟಕ ಸರ್ಕಾರಕ್ಕೆ ₹60 ಸಾವಿರ ಕೋಟಿಯಷ್ಟು ಭೂ ಪರಿಹಾರದ ಹೊರೆ ತಗ್ಗಿದಂತಾಗಿದೆ. 2013ರ ಭೂಸ್ವಾಧೀನ ಕಾಯ್ದೆಯ ಸೆಕ್ಷನ್ 74 ಮತ್ತು 1963ರ ಮಿತಿ ಕಾಯ್ದೆಯ ನಿಯಮಗಳ ನಡುವಿನ ಸಂಕೀರ್ಣ ಕಾನೂನಾತ್ಮಕ ಪ್ರಶ್ನೆಗೆ ನ್ಯಾಯಮೂರ್ತಿಗಳಾದ ಎಂ.ಎಂ.ಸುಂದರೇಶ್ ಮತ್ತು ಸತೀಶ್ ಚಂದ್ರ ಶರ್ಮಾ ಅವರಿದ್ದ ನ್ಯಾಯಪೀಠ ಉತ್ತರ ನೀಡಿದೆ.

2013ರ ಕಾಯ್ದೆಯ ಸೆಕ್ಷನ್ 74 ರ ಅಡಿಯಲ್ಲಿ ನಿಗದಿಪಡಿಸಿದ 120 ದಿನಗಳ ಮಿತಿಯನ್ನು ಮೀರಿದ ಪ್ರಕರಣಗಳನ್ನು ಮಿತಿ ಕಾಯ್ದೆಯ ಸೆಕ್ಷನ್ 5 ರ ಮೂಲಕ ಕ್ಷಮಿಸಬಹುದು ಎಂದು ನ್ಯಾಯಾಲಯ ಸ್ಪಷ್ಟಪಡಿಸಿದೆ. 2013ರ ಕಾಯ್ದೆಯ ಸೆಕ್ಷನ್ 74ರ ಪ್ರಕಾರ, ಮೇಲ್ಮನವಿ ಸಲ್ಲಿಸಲು ಮಿತಿ ಅವಧಿ 60 ದಿನಗಳಾಗಿದ್ದು, ಇದನ್ನು ಮತ್ತೆ 60 ದಿನಗಳವರೆಗೆ ವಿಸ್ತರಿಸಲು ಅವಕಾಶ ಇದೆ.

▶5

ಬಿರ್ಲಾ ಪದಚ್ಯುತಿ: ವಿಪಕ್ಷಗಳಿಂದ ನೋಟಿಸ್

ನವದೆಹಲಿ(ಪಿಟಿಐ): ಲೋಕಸಭಾ ಸ್ಪೀಕರ್ ಸ್ಥಾನದಿಂದ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಲು ನಿರ್ಣಯ ಕೈಗೊಂಡಿರುವ ವಿರೋಧ ಪಕ್ಷಗಳು ಈ ಕುರಿತ ನೋಟಿಸ್ ಅನ್ನು ಲೋಕಸಭೆಯ ಪ್ರಧಾನ ಕಾರ್ಯದರ್ಶಿಗೆ ಮಂಗಳವಾರ ಸಲ್ಲಿಸಿವೆ.

ಸುದ್ದಿ ವಿವರ ▶11

ಕೆಎಸ್‌ಡಿಎಲ್ ಪ್ರಚಾರಕ್ಕಿಳಿದ ತಮನ್ನಾ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆಎಸ್‌ಡಿಎಲ್) ನೂತನ ರಾಯಭಾರಿ ನಟಿ ತಮನ್ನಾ ಭಾಟಿಯಾ ಅವರು, ನಿಗಮದ 57 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

ಸುದ್ದಿ ವಿವರ ▶10

'ನಾನು, ಸಿ.ಎಂ ಕದ್ದು ಮುಚ್ಚಿ ಮಾತನಾಡಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮತ್ತು ಸಿದ್ದರಾಮಯ್ಯ ಅವರು ಕದ್ದು ಮುಚ್ಚಿ ಮಾತನಾಡಿಲ್ಲ. ನಮ್ಮ ಪಕ್ಷದ ವರಿಷ್ಠರು ಸೇರಿಕೊಂಡೇ ಮಾತನಾಡಿದ್ದೆವು' ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸ್ಪಷ್ಟಪಡಿಸಿದರು.



ಡಿ.ಕೆ. ಶಿವಕುಮಾರ್


ಅಧಿಕಾರ ಹಂಚಿಕೆಯ ಗೊಂದಲವನ್ನು ಹೈಕಮಾಂಡ್ ಬೇಗ ಇತ್ಯರ್ಥ ಮಾಡಬೇಕು ಎಂದು ಕೆಲವು ಸಚಿವರು ನೀಡಿರುವ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, 'ನನಗೆ ಯಾವ ಗೊಂದಲವೂ ಇಲ್ಲ. ಗೊಂದಲ ಬೇರೆಯವರಿಗೆ ಇರಬಹುದು. ನಾನು ಹಾಗೂ ಸಿದ್ದರಾಮಯ್ಯ ಅವರು ಏನು ಮಾತನಾಡಿದ್ದೇವೆ ಎಂಬುದು ನಮಗೆ ಗೊತ್ತು. ಬೇರೆಯವರೆಲ್ಲ ಇದಕ್ಕೆ ಟೆನ್ಶನ್ ತೆಗೆದುಕೊಳ್ಳುವುದು, ಹೇಳಿಕೆ ನೀಡುವುದರಿಂದ ಯಾರಿಗೂ ಪ್ರಯೋಜನವಾಗುವುದಿಲ್ಲ' ಎಂದರು.

'ದೆಹಲಿಗೆ ಹೋದ ಮೇಲೆ ಯಾರು ಸಿಗುತ್ತಾರೋ ಆ ನಾಯಕರನ್ನು ಭೇಟಿ ಮಾಡಲಾಗುವುದು. ಜನರ ಕಷ್ಟಗಳನ್ನು ಬಗೆಹರಿಸಲು ಹಲವು ಕಷ್ಟ ಕಾರ್ಪಣ್ಯಗಳು, ಅಡಚಣೆಗಳು, ತೊಡಕುಗಳು ಇದ್ದೇ ಇರುತ್ತವೆ. ಟೀಕೆಗಳು ಬರುತ್ತಲೇ ಇರುತ್ತವೆ. ನಮ್ಮ ಕೆಲಸವನ್ನು ಮುಂದುವರಿಸಬೇಕು' ಎಂದರು.

'ಎಲ್ಲರೂ ಬಾಯಿ ಮುಚ್ಚಿಕೊಂಡು ಇದ್ದರೆ ಒಳ್ಳೆಯದು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಹೇಳಿದ್ದಾರೆ. ಅದನ್ನು ಎಲ್ಲರೂ ಪಾಲನೆ ಮಾಡಬೇಕು. ನನ್ನ ಪರ, ವಿರುದ್ಧ ಸಚಿವರು, ಶಾಸಕರು ನೀಡುತ್ತಿರುವ ಹೇಳಿಕೆಗಳು ಪಕ್ಷಕ್ಕೆ ಹಾನಿ ಮಾಡುತ್ತವೆಯೇ ಹೊರತು, ಒಳ್ಳೆಯದನ್ನು ಮಾಡುವುದಿಲ್ಲ' ಎಂದು ಹೇಳಿದರು.

'ನಾವು ಮಾತನಾಡಿದರೆ ನೋಟಿಸ್ ನೀಡುತ್ತಾರೆ. ಯತೀಂದ್ರ ಮಾತನಾಡಿದರೆ ಏಕೆ ನೀಡುವುದಿಲ್ಲ' ಎಂದು ಶಾಸಕ ಇಕ್ಬಾಲ್ ಹುಸೇನ್ ಅವರ ಮಾತಿಗೆ ಪ್ರತಿಕ್ರಿಯಿಸಿದ ಶಿವಕುಮಾರ್, 'ಈ ಬಗ್ಗೆ ಹೈಕಮಾಂಡ್ ನಾಯಕರನ್ನೇ ಕೇಳೋಣ' ಎಂದರು.

ಅವರನ್ನೇ ಕೇಳಿ: ಸಿದ್ದರಾಮಯ್ಯ



'ಸಿದ್ದರಾಮಯ್ಯ, ವರಿಷ್ಠರು ಸೇರಿಕೊಂಡೇ ಮಾತುಕತೆ ನಡೆಸಿದ್ದೆವು' ಎಂಬ ಶಿವಕುಮಾರ್ ಮಾತಿಗೆ ಪ್ರತಿಕ್ರಿಯಿಸಲು ನಿರಾಕರಿಸಿದ ಸಿದ್ದರಾಮಯ್ಯ 'ಈ ಕುರಿತು ಅವರನ್ನೇ ಕೇಳಿ' ಎಂದರು.

ಸುದ್ದಿಗಾರರ ಪ್ರಶ್ನೆಗಳಿಗೆ ತುಸು ಸಿಟ್ಟಾದ ಸಿದ್ದರಾಮಯ್ಯ, 'ಎಷ್ಟು ಬಾರಿ ನೀವು ಈ ಪ್ರಶ್ನೆ ಕೇಳುತ್ತೀರಿ. ಈ ವಿಚಾರದಲ್ಲಿ ಹೈಕಮಾಂಡ್ ಮಾತೇ ಅಂತಿಮ ಎಂದು ಹೇಳಿದ್ದೇನೆ. ಹೈಕಮಾಂಡ್ ಏನು ಹೇಳುತ್ತದೆಯೇ ಹಾಗೆ ನಡೆದುಕೊಳ್ಳಲಾಗುವುದು' ಎಂದು ಹೇಳಿದರು.

'ದೆಹಲಿಗೆ ಬರುವಂತೆ ಈಗ ನನ್ನನ್ನು ಯಾರೂ ಕರೆದಿಲ್ಲ. ಅಧಿಕಾರ ಹಂಚಿಕೆ ವಿಷಯದ ಪ್ರಶ್ನೆಗೆ ಉತ್ತರ ಕೊಡುವುದಿಲ್ಲ. ನನಗೆ ಬಜೆಟ್ ಪೂರ್ವ ಸಿದ್ಧತಾ ಕೆಲಸಗಳಿವೆ. ಸದ್ಯಕ್ಕೆ ನಾನು ದೆಹಲಿಗೆ ಹೋಗುವುದಿಲ್ಲ. ವರಿಷ್ಠರು ಬಯಸಿದರೆ ಮಾತ್ರ ತೆರಳುವೆ' ಎಂದು ಹೇಳಿದರು.

ಬಜೆಟ್ ಸಿದ್ಧತಾ ಸಭೆಗೂ ಡಿಕೆಶಿ ಗೈರು: 'ಅಸ್ಸಾಂನಲ್ಲಿ ನಡೆಯುವ ಸಭೆಯಲ್ಲಿ ಭಾಗವಹಿಸಲು ತೆರಳುತ್ತಿರುವ ಕಾರಣ ಬಜೆಟ್ ಸಿದ್ಧತಾ ಸಭೆಯಲ್ಲಿ ಭಾಗವಹಿಸಲು ಆಗುವುದಿಲ್ಲವೆಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ' ಎಂದು ಸಿದ್ದರಾಮಯ್ಯ ಹೇಳಿದರು.

ಶಾಸಕ ಬೈರತಿಗೆ ನಿರೀಕ್ಷಣಾ ಜಾಮೀನು ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ ರಾಜಕೀಯ ಅಧಿಕಾರ ಹೊಂದಿದ ಅತ್ಯಂತ ಪ್ರಭಾವಿ ವ್ಯಕ್ತಿಯಾಗಿದ್ದು ಈ ಪ್ರಕರಣದಲ್ಲಿ ತನಿಖೆಯ ವಿಧಾನದ ನಿರ್ಧಾರವನ್ನು ತನಿಖಾ ಪ್ರಾಧಿಕಾರದ ವಿವೇಚನೆಗೆ ಬಿಡಲಾಗಿದೆ. ಹೀಗಾಗಿ, ಅವರಿಗೆ ನಿರೀಕ್ಷಣಾ ಜಾಮೀನು ನೀಡಲಾಗದು' ಎಂದು ಹೈಕೋರ್ಟ್ ಸ್ಪಷ್ಟವಾಗಿ ಹೇಳಿದೆ.



ಬೈರತಿ ಬಸವರಾಜ

ನಿರೀಕ್ಷಣಾ ಜಾಮೀನು ಕೋರಿ ಬಸವರಾಜ ಅವರು ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ಆದೇಶವನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ಪ್ರಕಟಿಸಿತು.

▶6

ಚಿನಕುರುಳಿ ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ

ನಗರದಲ್ಲಿ ಇಂದು

ಸ್ವಾಸ್ಥ್ಯ ಭಾರತ ಶ್ರೇಷ್ಠ ಭಾರತ, ನಶಾ ಮುಕ್ತ ಭಾರತ, ನಶಾ ಮುಕ್ತ ಕರ್ನಾಟಕ, ನಶಾ ಮುಕ್ತ ಕ್ಯಾಂಪಸ್, ಅಂಗಾಂಗ ದಾನ ಅಭಿಯಾನ ಹಾಗೂ ಉಪಕ್ರಮಗಳ ಉದ್ಘಾಟನಾ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಯು.ಟಿ. ಖಾದರ್, ಬಸವರಾಜ ಎಸ್. ಹೊರಟ್ಟಿ, ಅತಿಥಿಗಳು: ಜಿ. ಪರಮೇಶ್ವರ, ದಿನೇಶ್ ಗುಂಡೂರಾವ್, ಡಾ. ಶರಣಪ್ರಕಾಶ ಪಾಟೀಲ, ಅಧ್ಯಕ್ಷತೆ: ರಿಜ್ವಾನ್ ಅರ್ಷದ್, ಆಯೋಜನೆ: ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ದಿಶಾಬೋಧ್ ಫೌಂಡೇಷನ್ ಮತ್ತು ನಾರ್ಕೋಟಿಕ್ಸ್ ಕಂಟ್ರೋಲ್ ಬ್ಯೂರೊ, ಸ್ಥಳ: ಬ್ಯಾಂಕ್ವೆಟ್ ಸಭಾಂಗಣ, ವಿಧಾನಸೌಧ, ಬೆಳಿಗ್ಗೆ 11

ತೊ. ನಂಜುಂಡಸ್ವಾಮಿ ನೆನಪಿನ ಪ್ರಶಸ್ತಿ ಪ್ರದಾನ: ಪ್ರಶಸ್ತಿ ಸ್ವೀಕರಿಸುವವರು: ಬಿ. ವಿಠ್ಠಲ ರಾವ್ (ಅಪ್ಪಯ್ಯ), ಅಧ್ಯಕ್ಷತೆ: ಶ್ರೀನಿವಾಸ್ ಜಿ. ಕಪ್ಪಣ್ಣ, ಅತಿಥಿಗಳು: ವಿಜಯಾ, ಟಿ.ಎನ್. ಸೀತಾರಾಂ, 'ಮುಖ್ಯಮಂತ್ರಿ' ಚಂದ್ರು, ಆಯೋಜನೆ: ತೊ. ನಂಜುಂಡಸ್ವಾಮಿ ಗೆಳೆಯರ ಬಳಗ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 4.30ರಿಂದ

'ಸೌರಭ' ರಾಜ್ಯಮಟ್ಟದ ಅಂತರ ಕಾಲೇಜು ರಂಗ ಸ್ಪರ್ಧೆ-2026: ಉದ್ಘಾಟನೆ: ಬಿ. ಜಯಶ್ರೀ, ಅತಿಥಿಗಳು: ರವಿ ಹೆಗಡೆ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಡಿ.ಎನ್. ವೆಂಕಟರಾವ್, ಆಯೋಜನೆ: ರಂಗಸೌರಭ, ಸ್ಥಳ: ಸಂಸ ಬಯಲು ರಂಗ ಮಂದಿರ, ಸಂಜೆ 5.30ರಿಂದ

'ಸರಸ ಭಾರತಿ ವಿಲಾಸ' ಧಾರ್ಮಿಕ ಪ್ರವಚನ: ಐತರೇಯ ಆಚಾರ್ಯ, ಆಯೋಜನೆ ಮತ್ತು ಸ್ಥಳ: ರಾಘವೇಂದ್ರ ಸ್ವಾಮಿ ಮಠ, ಸುಧೀಂದ್ರನಗರ, ಮಲ್ಲೇಶ್ವರ, ಬೆಳಿಗ್ಗೆ 7

***

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

'ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಿ'

ಬೆಂಗಳೂರು: ರಾಜ್ಯ ಬಜೆಟ್‌ನಲ್ಲಿ ಈ ಬಾರಿ ಪತ್ರಿಕಾ ವಿತರಕರಿಗೆ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸಬೇಕು ಎಂದು ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಸದಸ್ಯರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು.

ಪತ್ರಿಕಾ ವಿತರಕರ ಸಂಕಷ್ಟಗಳನ್ನು ಆಲಿಸಿದ ಸಿದ್ದರಾಮಯ್ಯ, ಬಜೆಟ್‌ನಲ್ಲಿ ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವ ಭರವಸೆ ನೀಡಿದರು.

ಮುಖ್ಯಮಂತ್ರಿಯವರ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಅವರಿಗೂ ಮನವಿ ಸಲ್ಲಿಸಲಾಯಿತು.

ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಕೆ ಶಂಭುಲಿಂಗ, ಪ್ರಧಾನ ಕಾರ್ಯದರ್ಶಿ ಸಂಗಂ ಸುರೇಶ್, ಗಾಂಧಿನಗರದ ಶಿವಶಾಂತ್ ಕುಮಾರ್, ಸಂಘಟನಾ ಕಾರ್ಯದರ್ಶಿ ನಾದೋರು ವಾಸುದೇವ, ತುಮಕೂರು ಜಿಲ್ಲಾ ದಿನಪತ್ರಿಕೆ ಹಂಚಿಕೆದಾರರ ಸಂಘದ ಅಧ್ಯಕ್ಷರಾದ ಚಲುವರಾಜು, ನಿರ್ದೇಶಕರಾದ ಗಂಗ ಮುತ್ತಯ್ಯ, ಹನುಮಂತರಾಜು, ಮೈಸೂರು ಪತ್ರಿಕಾ ವಿತರಕರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಜೆ.ಎಸ್. ಹೋಮದೇವ, ನಿರ್ದೇಶಕರಾದ ನಾಗೇಶ್, ಶ್ರೀಕಾಂತ್, ಗೋವಿಂದು, ಹರಿರಾವ್, ದಾವಣಗೆರೆ ಕೃಷ್ಣಮೂರ್ತಿ ಉಪಸ್ಥಿತರಿದ್ದರು.



ಪತ್ರಿಕಾ ವಿತರಕರಿಗೆ ಕ್ಷೇಮಾಭಿವೃದ್ಧಿ ನಿಧಿ ಸ್ಥಾಪಿಸುವಂತೆ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ಸದಸ್ಯರು, ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದರು

ಮೆಟ್ರೊ ಮಾಲೀಕತ್ವ ಕೇಂದ್ರದ್ದೇ: ಕಾಂಗ್ರೆಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಯಾದರೂ, ಮಾಲೀಕತ್ವ ಕೇಂದ್ರಕ್ಕೇ ಸೇರಿದೆ. ಇಂತಹ ವಿಷಯಗಳ ಮಾಹಿತಿ ಇಲ್ಲದವರನ್ನು ವಿರೋಧ ಪಕ್ಷದ ನಾಯಕರನ್ನಾಗಿ ಬಿಜೆಪಿ ನೇಮಿಸಿದೆ' ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಬೆಂಗಳೂರು ಮೆಟ್ರೊ ರೈಲು ನಿಗಮದ (ಬಿಎಂಆರ್‌ಸಿಎಲ್) ಮಾಲೀಕರು ಯಾರು ಎಂದು 2023ರಲ್ಲಿ ಹೈಕೋರ್ಟ್ ಕೇಳಿತ್ತು. ಬಿಎಂಆರ್‌ಸಿಎಲ್ ಮಾಲೀಕತ್ವ ಕೇಂದ್ರ ಸರ್ಕಾರದ್ದೇ ಎಂದು ಮಾಹಿತಿ ನೀಡಲಾಗಿದೆ' ಎಂದು ಮಾಹಿತಿ ನೀಡಿದರು.

'ಸಂಸದ ತೇಜಸ್ವಿ ಸೂರ್ಯ ಚೆನ್ನಾಗಿ ನಟನೆ ಮಾಡುತ್ತಾರೆ. ಬಿಜೆಪಿ ನಾಯಕರು ನಟನೆ ಮಾಡುವುದರಲ್ಲಿ ಪೈಪೋಟಿಗೆ ಇಳಿದಿದ್ದಾರೆ. ನಮ್ಮ ಮೆಟ್ರೊ ಯೋಜನೆಯ ಹಲವು ಮಾಹಿತಿಗಳು ಬಿಜೆಪಿಗೆ ಗೊತ್ತಿಲ್ಲ. ಈಗ ಮೆಟ್ರೊ ಪ್ರಯಾಣ ದರ ಹೆಚ್ಚಳಕ್ಕೆ ಕೇಂದ್ರ ತಡೆ ನೀಡಿದೆ ಎಂದು ಹೇಳುತ್ತಿದ್ದಾರೆ' ಎಂದು ದೂರಿದರು.

ಮೆಟ್ರೊದಲ್ಲಿ ದಿನಕ್ಕೆ ಸರಾಸರಿ ಎಂಟು ಲಕ್ಷ ಜನರು ಪ್ರಯಾಣ ಮಾಡುತ್ತಾರೆ. 2025-26ರಲ್ಲಿ ಮೆಟ್ರೊಗೆ ₹229 ಕೋಟಿ ಬಂದಿತ್ತು. ₹624 ಕೋಟಿ ನಷ್ಟವಾಗಿತ್ತು. ಇದುವರೆಗೆ ₹20,222 ಕೋಟಿ ಯೋಜನೆಗೆ ಖರ್ಚಾಗಿದೆ. ಆದರೆ, ಕೇಂದ್ರದಿಂದ ಬಿಡಿಗಾಸು ಬಂದಿಲ್ಲ. ರಾಜ್ಯ ಸರ್ಕಾರ ಸಾಲ ಸೇರಿದಂತೆ ವಿವಿಧ ರೂಪದಲ್ಲಿ ಸಂಪನ್ಮೂಲ ಸಂಗ್ರಹ ಮಾಡುತ್ತಿದೆ ಎಂದು ಹೇಳಿದರು.

ಇದೇ ವೇಳೆ ಕಾಂಗ್ರೆಸ್ ಮುಖಂಡರು ಖಾಲಿ ಟ್ರಂಕ್ ಹಾಗೂ ಚೊಂಬು ಹಿಡಿದು ನೃತ್ಯದ ಮೂಲಕ ಸಂಸದ ತೇಜಸ್ವಿಸೂರ್ಯ ವಿರುದ್ಧ ಪ್ರತಿಭಟನೆ ನಡೆಸಿದರು.

ಚಿಟಿಕೆ ಸುದ್ದಿ

ಕ್ಲಾರೆನ್ಸ್ ಶಾಲೆಯಿಂದ ‘ವಿಶೇಷ ಕವರ್’



ಬೆಂಗಳೂರು: ರಿಚ್ಮಂಡ್ ಟೌನ್‌ನಲ್ಲಿರುವ ಕ್ಲಾರೆನ್ಸ್ ಹೈಸ್ಕೂಲ್ ತನ್ನ 111ನೇ ವಾರ್ಷಿಕೋತ್ಸವದ ಅಂಗವಾಗಿ, ಭಾರತೀಯ ಅಂಚೆ ಇಲಾಖೆ ಸಹಯೋಗದಲ್ಲಿ ‘ವಿಶೇಷ ಪೋಸ್ಟಲ್ ಕವರ್’ ಅನ್ನು ಬಿಡುಗಡೆ ಮಾಡಿದೆ.

ಸಮಾರಂಭದಲ್ಲಿ ಹಾಜರಿದ್ದ, ಶಾಲೆಯ ಹಳೆಯ ವಿದ್ಯಾರ್ಥಿ ದೊಡ್ಡಬಳ್ಳಾಪುರ ವಿಧಾನಸಭೆ ಕ್ಷೇತ್ರದ ಧೀರಜ್ ಮುನಿರಾಜು, ತಮ್ಮ ಶಾಲಾ ದಿನಗಳನ್ನು ಸ್ಮರಿಸಿಕೊಂಡರು. ಬೆಂಗಳೂರು ಜಿಪಿಒದ ಮುಖ್ಯ ಪೋಸ್ಟ್ ಮಾಸ್ಟರ್ ಸಿ. ಸೆಲ್ವಿ ಅವರು ಭಾಗವಹಿಸಿದ್ದರು.

ಮಾರ್ಚ್ 15ರಂದು ‘ನಮ್ಮ ಪವರ್ ರನ್’

ಬೆಂಗಳೂರು: ಸೂತ್ರ ಫಿಟ್‌ನೆಸ್ ವತಿಯಿಂದ ಡಾ. ಪುನೀತ್ ರಾಜ್‌ಕುಮಾರ್ ಚಾರಿಟಬಲ್ ಟ್ರಸ್ಟ್ ಸಹಯೋಗದಲ್ಲಿ ನಟ ಪುನೀತ್ ರಾಜ್‌ಕುಮಾರ್ ಸ್ಮರಣಾರ್ಥ ‘ನಮ್ಮ ಪವರ್ ರನ್’ ಅನ್ನು ಮಾರ್ಚ್ 15ರಂದು ಆಯೋಜಿಸಲಾಗಿದೆ.


ಪುನೀತ್ ರಾಜ್‌ಕುಮಾರ್

ಇದು ನಾಲ್ಕನೇ ಆವೃತ್ತಿಯಾಗಿದ್ದು, 5ಕೆ, 10ಕೆ ಓಟ ಹಾಗೂ 21.1ಕೆ ಹಾಫ್ ಮ್ಯಾರಥಾನ್ ವರ್ಗಗಳಿವೆ. ಹೊಸಕೆರೆಹಳ್ಳಿ ಬಳಿಯ ನೈಸ್ ಜಂಕ್ಷನ್‌ನಿಂದ ಓಟ ಆರಂಭವಾಗಲಿದೆ.

ನೋಂದಣಿ, ವಿವರಗಳಿಗೆ: https://nammapowerrun.com/ ಸಂಪರ್ಕಿಸಬಹುದು.

ಹೂವಿನ ಕರಗ ಉತ್ಸವ

ಬೆಂಗಳೂರು: ರಾಜಾಜಿನಗರದ ನಾಗಪ್ಪ ಬ್ಲಾಕ್‌ನಲ್ಲಿರುವ ಅಂಗಾಳ ಪರಮೇಶ್ವರಿ ದೇವಸ್ಥಾನದಲ್ಲಿ ಇದೇ 15ರಂದು ಸಂಜೆ ಹೂವಿನ ಕರಗ ಉತ್ಸವ ನಡೆಯಲಿದೆ. ಇದೇ 13ರಿಂದ ಉತ್ಸವ ಆರಂಭವಾಗಲಿದೆ. ಅದೇ ದಿನ ಗಂಗೆ ಪೂಜೆ, 15ರಂದು ಹೂವಿನ ಕರಗದ ಜತೆಗೆ ಶಕ್ತಿ ಕರಗ, ಅಗ್ನಿ ತುಳಿಯುವ ಕಾರ್ಯಕ್ರಮವಿದೆ. 16ರಂದು ಕಾಳಿವೇಷಧಾರಿಯಿಂದ ರುದ್ರತಾಂಡವ ಕಾರ್ಯಕ್ರಮ ನಡೆಯುತ್ತದೆ. 17ರಂದು ಲಲಿತಾ ಸಹಸ್ರನಾಮ, ಲಕ್ಷಾರ್ಚನೆ, ವಸಂತೋತ್ಸವ ಮತ್ತು ಸುಮಂಗಲಿ ಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಶ್ರೀನಿಧಿ ಸೌಹಾರ್ದ ಸಹಕಾರಿ ಬ್ಯಾಂಕ್‌ನ 2026–2031ನೇ ಸಾಲಿನ ಆಡಳಿತ ಮಂಡಳಿಗೆ ಸೋಮವಾರ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಸದಾಶಿವರೆಡ್ಡಿ, ಉಪಾಧ್ಯಕ್ಷರಾಗಿ ಸಿ. ಚನ್ನಾರೆಡ್ಡಿ ಆಯ್ಕೆಯಾಗಿದ್ದಾರೆ.

ನಿರ್ದೇಶಕರಾಗಿ ಎಚ್.ಎ. ಅಮರ್, ಪಿ. ಜಗನ್ನಾಥ ರೆಡ್ಡಿ, ಪಿ.ಎನ್. ನಂಜಾರೆಡ್ಡಿ, ಜಿ. ರಮೇಶ, ಎಚ್.ಎಲ್. ಸೋಮಶೇಖರ್, ಪರಮೇಶ ನಾಯ್ಕ, ಕೆ. ನರಸಿಂಹ, ಎಂ. ವೆಂಕಟಸ್ವಾಮಿ, ಎ. ಪಾಪಣ್ಣ, ಕೆ. ಮಾಲ, ವಿನುತಾ ಅಶ್ವತ್ಥ್ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಯುಪಿಐ ಪಾವತಿ ಸೇವೆಯಲ್ಲಿ ವ್ಯತ್ಯಯ

ಬೆಂಗಳೂರು: ದೇಶದ ಹಲವು ಕಡೆಗಳಲ್ಲಿ ಯುಪಿಐ ಆಧಾರಿತ ಪಾವತಿ ಸೇವೆಗಳಲ್ಲಿ ಮಂಗಳವಾರ ಸಂಜೆ ಸಮಸ್ಯೆ ಎದುರಾಗಿತ್ತು ಎಂದು ಬಳಕೆದಾರರು ದೂರಿದ್ದಾರೆ.

ಇಂಟರ್ನೆಟ್ ಆಧಾರಿತ ಸೇವೆಗಳಲ್ಲಿನ ಅಡಚಣೆಯನ್ನು ದಾಖಲಿಸುವ ಡೌನ್‌ಡಿಟೆಕ್ಟರ್ ಕೂಡ ಈ ಸೇವೆಗಳಲ್ಲಿ ವ್ಯತ್ಯಯ ಆಗಿದ್ದನ್ನು ದಾಖಲಿಸಿದೆ. ಹಣ ವರ್ಗಾವಣೆ, ಪಾವತಿಗಳಲ್ಲಿ ಸಮಸ್ಯೆ ಆಗಿರುವುದನ್ನು ಬಳಕೆದಾರರು ತಿಳಿಸಿದ್ದಾರೆ.

ಬೆಂಗಳೂರು, ಚೆನ್ನೈ, ಹೈದರಾಬಾದ್, ಮುಂಬೈನಲ್ಲಿ ಬಳಕೆದಾರರು ಸಮಸ್ಯೆ ಎದುರಿಸಿದ್ದನ್ನು ಹೇಳಿಕೊಂಡಿದ್ದಾರೆ.

‘ಮೆಟ್ರೊ’ದಲ್ಲೂ ಪರದಾಟ: ‘ನಮ್ಮ ಮೆಟ್ರೊ’ ನಿಲ್ದಾಣಗಳಲ್ಲಿಯೂ ಕ್ಯೂಆರ್ ಕೋಡ್ ಸ್ಕ್ಯಾನ್ ಮೂಲಕ ಹಣ ಪಾವತಿ ಮಾಡಲು ಆಗದೆ ಇದ್ದುದರಿಂದ ನಗದು ನೀಡಿ ಟಿಕೆಟ್ ಪಡೆಯಬೇಕಾಗಿತ್ತು. ಇದರಿಂದಾಗಿ, ಮಂಗಳವಾರ ಸಂಜೆ 6ರಿಂದ ಸುಮಾರು ಮೂರು ಗಂಟೆ ನಿಲ್ದಾಣಗಳಲ್ಲಿ ಪ್ರಯಾಣಿಕರು ಸಾಲುಗಟ್ಟಿ ನಿಂತಿದ್ದರು ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದರು.

ವರ್ತೂರು ಕೆರೆ: ಪಾಲಿಕೆಗೆ ಪಡೆಯಲು ಸೂಚನೆ

ಮಳೆಗಾಲದೊಳಗೆ ಬೆಳ್ಳಂದೂರು ಕೆರೆಯ ಹೂಳು ತೆಗೆಯಲು ಬಿಡಿಎ ಎಂಜಿನಿಯರ್‌ಗಳಿಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರ್ತೂರು ಕೆರೆಯನ್ನು ಬಿಡಿಎಯಿಂದ ಪೂರ್ವ ನಗರ ಪಾಲಿಕೆಗೆ ಹಸ್ತಾಂತರಿಸಿಕೊಳ್ಳಬೇಕು ಎಂದು ಬೆಂಗಳೂರು ಪೂರ್ವ ನಗರ ಪಾಲಿಕೆ ಆಯುಕ್ತ ಡಿ.ಎಸ್.ರಮೇಶ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಬೆಳ್ಳಂದೂರು ಹಾಗೂ ವರ್ತೂರು ಕೆರೆಗಳ ಪುನಶ್ಚೇತನ ಕಾಮಗಾರಿಗಳನ್ನು ಮಂಗಳವಾರ ಪರಿಶೀಲಿಸಿ ಅವರು ಮಾತನಾಡಿದರು.

ಕೆರೆಗಳಿಗೆ ಒಳಬರುವ ಮಲಿನ ನೀರಿನ ನಿಯಂತ್ರಣ ಮತ್ತು ತಡೆ ಕ್ರಮಕ್ಕಾಗಿ ವಿವಿಧ ಇಲಾಖೆಗಳ ನಡುವೆ ಸಮನ್ವಯ ಸಾಧಿಸಲು ನಗರ ಪಾಲಿಕೆ ಎಂಜಿನಿಯರ್, ಬಿಡಿಎ ಎಂಜಿನಿಯರ್, ಜಲಮಂಡಳಿ ಎಂಜಿನಿಯರ್ ಹಾಗೂ ಘನ ತ್ಯಾಜ್ಯ ನಿರ್ವಹಣೆ ವಿಭಾಗದ ಅಧಿಕಾರಿಗಳೊಂದಿಗೆ ಜಂಟಿ ಪರಿಶೀಲನೆ ನಡೆಸಿದರು.

ಬೆಳ್ಳಂದೂರು ಕೆರೆಯನ್ನು ಬಿಡಿಎ ನಿರ್ವಹಣೆ ಮಾಡುತ್ತಿದೆ. ಕೆರೆಯಲ್ಲಿನ ಹೂಳು ಎತ್ತುವ ಕಾರ್ಯವನ್ನು ಮಳೆಗಾಲಕ್ಕೂ ಮೊದಲೇ ಪೂರ್ಣಗೊಳಿಸಬೇಕು. ಕೆರೆಯ ಗಡಿಗೋಡೆ, ಕಾಂಪೌಂಡ್‌ಗಳನ್ನು ಪರಿಶೀಲನೆ ನಡೆಸಿ ಕೆರೆ ಒತ್ತುವರಿ ಬಗ್ಗೆ ಸಮಗ್ರ ಮಾಹಿತಿಯನ್ನು ಪಡೆದುಕೊಂಡು, ಒತ್ತುವರಿ ತೆರವಿಗೆ ಕ್ರಮವಹಿಸುವಂತೆ ಸೂಚಿಸಿದರು.


ಕೆರೆಯ ಒಳ ಹಾಗೂ ಹೊರ ಹರಿವುಗಳನ್ನು ನಿರ್ವಹಣೆ ಮಾಡಿ, ಪುನಶ್ಚೇತನ ಅಭಿವೃದ್ಧಿ ಕಾಮಗಾರಿಯನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸಲು ಹೇಳಿದರು.

ವರ್ತೂರು ಕೆರೆ ಪುನಶ್ಚೇತನ ಕಾರ್ಯ ಈಗಾಗಲೇ ಪೂರ್ಣಗೊಂಡಿದೆ ಎಂದು ಬಿಡಿಎ ಎಂಜಿನಿಯರ್‌ಗಳು ಮಾಹಿತಿ ನೀಡಿದರು. ಒಳಚರಂಡಿ ಸಂಸ್ಕರಣಾ ಘಟಕದಿಂದ ಶುದ್ಧೀಕರಿಸಿದ ನೀರನ್ನು ಕೆರೆಗೆ ಹರಿಸಲಾಗುತ್ತಿದೆ ಎಂದು ಜಲಮಂಡಳಿ ಎಂಜಿನಿಯರ್‌ಗಳು ಹೇಳಿದರು.

ಕೆರೆ ಏರಿ, ಒಳಹರಿವು, ಗಡಿ ಬೇಲಿ ಹಾಗೂ ತೂಬು ಪರಿಶೀಲನೆ ಗೇಟ್ ಪರಿಶೀಲನೆ ನಡೆಸಿ, ಉತ್ತಮ ನಿರ್ವಹಣೆಗೆ ಆಯುಕ್ತರು ಸೂಚಿಸಿದರು. ಬಿಡಿಎಯೊಂದಿಗೆ ಸಮನ್ವಯ ಸಾಧಿಸಿ, ಕೆರೆಯ ಹಸ್ತಾಂತರ ಪ್ರಕ್ರಿಯೆಗೆ ಸಂಬಂಧಿಸಿದ ವರದಿಯನ್ನು ಒಂದು ವಾರದೊಳಗೆ ಸಲ್ಲಿಸುವಂತೆ ಪೂರ್ವ ನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಭೂಸ್ವಾಧೀನ: ಹೊರವರ್ತುಲ ರಸ್ತೆಯಿಂದ ಸೀತಾರಾಂಪಾಳ್ಯದ ಮೂಲಕ ಸತ್ಯಸಾಯಿ ಆಸ್ಪತ್ರೆವರೆಗೆ ಪರಿಷ್ಕೃತ ಮಹಾಯೋಜನೆ-2015ಯಂತೆ 24 ಮೀಟರ್ ಅಗಲದ ರಸ್ತೆಯನ್ನು ಅಭಿವೃದ್ಧಿಪಡಿಸುವ ಯೋಜನೆ ಇದೆ. ಇದರ ಮೊದಲ ಹಂತದಲ್ಲಿ ಹೊರ ವರ್ತುಲ ರಸ್ತೆಯಿಂದ ಸೀತಾರಾಂಪಾಳ್ಯ ಕೆರೆವರೆಗೆ ಸುಮಾರು 2.2 ಕಿ.ಮೀ. ಉದ್ದದ ರಸ್ತೆ ವಿಸ್ತರಣೆಗೆ ಅಗತ್ಯವಿರುವ ಭೂಸ್ವಾಧೀನ ಅಧಿಸೂಚನೆ ಹೊರಡಿಸಲು ಪೂರ್ವ ನಗರ ಪಾಲಿಕೆಯ ಅಭಿವೃದ್ಧಿಯ ಹೆಚ್ಚುವರಿ ಆಯುಕ್ತ ಲೋಖಂಡೆ ಸ್ನೇಹಲ್ ಸುಧಾಕರ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಉದ್ಯಾನ ಒತ್ತುವರಿ ತೆರವು


ಗುಬ್ಬಲಾಳದ ಉದ್ಯಾನದಲ್ಲಿನ ಒತ್ತುವರಿಯನ್ನು ನಗರ ಪಾಲಿಕೆ ಸಿಬ್ಬಂದಿ ಮಂಗಳವಾರ ತೆರವುಗೊಳಿಸಿದರು

ದಕ್ಷಿಣ ನಗರ ಪಾಲಿಕೆ ಅಧಿಕಾರಿಗಳು ಗುಬ್ಬಲಾಳದ ಉದ್ಯಾನದಲ್ಲಿ ಒತ್ತುವರಿಯನ್ನು ಮಂಗಳವಾರ ತೆರವು ಮಾಡಿ ವಶಕ್ಕೆ ಪಡೆದುಕೊಂಡರು.

ಉತ್ತರಹಳ್ಳಿ ಉಪ ವಿಭಾಗದ ಗುಬ್ಬಲಾಳ ಗ್ರಾಮದ ಸರ್ವೆ ನಂಬರ್ 1, ಜಯನಗರ ಕೋ ಅಪರೇಟೀವ್ ಸೊಸೈಟಿ 1ನೇ ಹಂತದಲ್ಲಿ 26,831 ಚದರ ಮೀಟರ್ ಪಾರ್ಕ್ ಜಾಗವಿದ್ದು, ಅದರಲ್ಲಿ ಸುಮಾರು 3,000 ಚದರ ಮೀಟರ್ ಪಾರ್ಕ್ ಜಾಗವನ್ನು ಒತ್ತುವರಿ ಮಾಡಿ, ಬೇಲಿ ಹಾಕಲಾಗಿತ್ತು.

ದಕ್ಷಿಣ ನಗರ ಪಾಲಿಕೆಯ ಉತ್ತರಹಳ್ಳಿ ಉಪ ವಿಭಾಗದಿಂದ ಪೊಲೀಸ್ ಬಂದೋಬಸ್ತ್‌ನೊಂದಿಗೆ ಒತ್ತುವರಿಯಾಗಿರುವ ಜಾಗವನ್ನು ತೆರವುಗೊಳಿಸಲಾಯಿತು ಎಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ರಮೇಶ್ ಅವರು ತಿಳಿಸಿದರು.

ಕಸ ಎಸೆತ: ₹30 ಲಕ್ಷ ದಂಡ ವಸೂಲಿ

ಬೆಂಗಳೂರು ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ಎಲ್ಲೆಂದರಲ್ಲಿ ಕಸ ಎಸೆಯುವವರಿಗೆ ದಂಡ ವಿಧಿಸಲಾಗುತ್ತಿದ್ದು, ಮೂರು ತಿಂಗಳಲ್ಲಿ ₹30 ಲಕ್ಷ ದಂಡ ವಸೂಲಿ ಮಾಡಲಾಗಿದೆ ಎಂದು ಆಯುಕ್ತ ಕೆ.ಎನ್. ರಮೇಶ್ ತಿಳಿಸಿದರು.

ಸಾರ್ವಜನಿಕರ ಸ್ಥಳ ಹಾಗೂ ಸರ್ಕಾರಿ ಸ್ವತ್ತುಗಳಲ್ಲಿ ಕಸ ಎಸೆಯುವುದನ್ನು, ಶೇಖರಿಸುವುದನ್ನು ಅಥವಾ ಬ್ಲ್ಯಾಕ್ ಸ್ಪಾಟ್ ತಡೆಗಟ್ಟುವ ಸಲುವಾಗಿ ಸಾರ್ವಜನಿಕರಲ್ಲಿ ಜಾಗೃತಿ ಮತ್ತು ಅರಿವು ಮೂಡಿಸಲಾಗುತ್ತಿದೆ.

ಕಿರಿಯ ಆರೋಗ್ಯ ಪರಿವೀಕ್ಷಕರು. ಲಿಂಕ್ ವರ್ಕರ್ ಹಾಗೂ ಪೌರಕಾರ್ಮಿಕರ ಮೇಲ್ವಿಚಾರಕರು ವಾರ್ಡ್ ವ್ಯಾಪ್ತಿಯಲ್ಲಿನ ನಿವಾಸಿಗಳನ್ನು ವಿಚಾರಿಸಿದಾಗ, ಕೆಲವು ನಿವಾಸಿಗಳು ಕಸವನ್ನು ಸಂಗ್ರಹಿಸುವ ಆಟೊಗಳು ನಿಗದಿತ ವೇಳೆಯಲ್ಲಿ ಬರುತ್ತಿಲ್ಲ. ಆಟೊಗಳು ಬರುವ ವೇಳೆಯಲ್ಲಿ ನಿವಾಸಿಗಳು ಕೆಲಸ ಕಾರ್ಯಗಳಿಗೆ ತೆರಳುವುದಾಗಿ ತಿಳಿಸಿರುತ್ತಾರೆ. ಇಂತಹ ನಿವಾಸಿಗಳಿಗೆ, ತ್ಯಾಜ್ಯವನ್ನು ಪ್ರತ್ಯೇಕಿಸಿ ಮನೆಯ ಬಾಗಿಲಿನ ಬಳಿ ಇಡಲು ಹಾಗೂ ಮನೆಯ ಬಾಗಿಲಿನ ಬಳಿ ಇಟ್ಟಿರುವ ಕಸಗಳನ್ನು ಸಂಗ್ರಹಿಸಲು ತ್ಯಾಜ್ಯ ಸಂಗ್ರಹಣೆದಾರರಿಗೆ ಸೂಚಿಸಲಾಗಿರುತ್ತದೆ ಎಂದರು.

3,802 ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ

ಬೆಂಗಳೂರು ದಕ್ಷಿಣ ನಗರ ಪಾಲಿಕೆಯ ವ್ಯಾಪ್ತಿಯಲ್ಲಿ 3,802 ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ನೀಡುವ ಕಾರ್ಯಕ್ಕೆ ಆಯುಕ್ತ ಕೆ.ಎನ್. ರಮೇಶ್ ಅವರು ಮಂಗಳವಾರ ಚಾಲನೆ ನೀಡಿದರು. ಸಾಂಕೇತಿಕವಾಗಿ 15 ಮಂದಿ ಬೀದಿ ಬದಿ ವ್ಯಾಪಾರಿಗಳಿಗೆ ಗುರುತಿನ ಚೀಟಿ ವಿತರಿಸಲಾಯಿತು.

ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ವ್ಯಾಪಾರ ನಿಯಂತ್ರಣ) ಕಾಯ್ದೆ 2014 ಮತ್ತು ಕರ್ನಾಟಕ ಬೀದಿ ಬದಿ ವ್ಯಾಪಾರಿಗಳ (ಜೀವನೋಪಾಯ ಸಂರಕ್ಷಣೆ ಮತ್ತು ಬೀದಿ ಬದಿ ವ್ಯಾಪಾರದ ನಿಯಂತ್ರಣ ಮತ್ತು ಪರವಾನಗಿ) ಯೋಜನೆ 2020ಯಂತೆ, ಬೀದಿ ಬದಿ ವ್ಯಾಪಾರಿಗಳ ಸಮೀಕ್ಷೆಯನ್ನು 2024ರ ಸೆ.20ರಿಂದ 2025ರ ಜ.6ವರೆಗೆ ನಡೆಸಲಾಗಿದೆ ಎಂದರು.

ದಕ್ಷಿಣ ನಗರ ಪಾಲಿಕೆ ಗುರುತಿಸಿರುವ ಇನ್ನುಳಿದ ಬೀದಿ ಬದಿ ವ್ಯಾಪಾರಿಗಳಿಗೆ ವ್ಯಾಪಾರಿಗಳಿಗೆ ಅವರು ವ್ಯಾಪಾರ ಮಾಡುವ ಸ್ಥಳದಲ್ಲೇ ಗುರುತಿನ ಚೀಟಿಗಳನ್ನು ನೀಡಲಾಗುತ್ತದೆ ಎಂದು ತಿಳಿಸಿದರು.

ಗುರುತಿನ ಚೀಟಿ ಪಡೆದಿರುವಂಥ ಬೀದಿಬದಿ ವ್ಯಾಪಾರಿಗಳಿಗೆ ಮಾತ್ರ ವ್ಯಾಪಾರಕ್ಕೆ ಅವಕಾಶ ನೀಡುತ್ತಿದ್ದು, ವ್ಯಾಪಾರ ಮಾಡುವಾಗ ಗುರುತಿನ ಚೀಟಿ ಧರಿಸಿರಬೇಕು. ಗುರುತಿನಚೀಟಿ ಹೊಂದಿಲ್ಲದೇ ವ್ಯಾಪಾರ ಮಾಡುವುದು ಅಕ್ರಮವಾಗಿದ್ದು, ಅಂತಹ ವ್ಯಾಪಾರಿಗಳ ಮಾಹಿತಿಯನ್ನು ಪಾಲಿಕೆಗೆ ನೀಡುವಂತೆ ಹೇಳಿದರು.

ಸುತ್ತೋಲೆ ವಾಪಸ್‌ಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ 40 ಅಡಿಗಿಂತ ಕಡಿಮೆ ಅಗಲದ ರಸ್ತೆ ಇರುವ ಪ್ರದೇಶದಲ್ಲಿ ಉದ್ದಿಮೆ ಪರವಾನಗಿ ತಡೆಹಿಡಿಯುವ ಆದೇಶವನ್ನು ಕೂಡಲೇ ವಾಪಸ್ ಪಡೆದು, ಬಡ ಮತ್ತು ಮಧ್ಯಮ ವರ್ಗದ ವ್ಯಾಪಾರಿಗಳಿಗೆ ಅನುಕೂಲ ಕಲ್ಪಿಸಬೇಕು ಎಂದು ಶಾಸಕ ಎಸ್. ಸುರೇಶ್ ಕುಮಾರ್ ಮನವಿ ಮಾಡಿಕೊಂಡಿದ್ದಾರೆ.


ಸುರೇಶ್ ಕುಮಾರ್

ಜಿಬಿಎ ಮುಖ್ಯ ಆಯುಕ್ತರಿಗೆ ಪತ್ರ ಬರೆದಿರುವ ಅವರು, ‘ಜನವರಿ 31ರಂದು ಜಿಬಿಎ ಸುತ್ತೋಲೆ ಹೊರಡಿಸಿ 40 ಅಡಿ ಅಗಲಕ್ಕಿಂತ ಕಡಿಮೆ ಪ್ರದೇಶದಲ್ಲಿ ಉದ್ದಿಮೆ ಪರವಾನಗಿಯನ್ನು ತಡೆಹಿಡಿಯುಂತೆ ಹೇಳಲಾಗಿದೆ. ಈ ಸುತ್ತೋಲೆಯು ಆಘಾತಕಾರಿಯಾಗಿದ್ದು, ಬೀದಿ ಬದಿಯ ವ್ಯಾಪಾರವನ್ನೇ ನಂಬಿಕೊಂಡಿರುವ ಮಧ್ಯಮ ವರ್ಗದ ಜನರನ್ನು ಅಕ್ಷರಶಃ ಬೀದಿಗೆ ತಳ್ಳುವಂತೆ ಮಾಡುತ್ತದೆ’ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

‘ವ್ಯವಸ್ಥಿತವಲ್ಲದ ನಗರ ಯೋಜನೆಯಿಂದ ಹಾಗೂ ಅನಧಿಕೃತ ಬಡಾವಣೆಗಳು ಇರುವೆಡೆ 40 ಅಡಿ ರಸ್ತೆ ಇರುವುದಿಲ್ಲ. ಇದಕ್ಕೆ ಕಾರಣ, ಅಂದು ಬಿಡಿಎ ಮತ್ತು ಬಿಬಿಎಂಪಿಗಳು ಕಣ್ಣುಮುಚ್ಚಿ ಕುಳಿತಿದ್ದೇ ಆಗಿದೆ. ಪರಿಸ್ಥಿತಿ ಹೀಗಿರುವಾಗ ಜಿಬಿಎ ಸುತ್ತೋಲೆ ಪ್ರತಿಗಾಮಿ ಧೋರಣೆಯನ್ನು ಹೊಂದಿದ್ದು, ಮಧ್ಯಮ ವರ್ಗದ ಬೀದಿ ಬದಿ ವ್ಯಾಪಾರಿಗಳು ಮತ್ತು ಕಿರಾಣಿ ಅಂಗಡಿ ಮಾಲೀಕರ ಕುಟುಂಬಗಳನ್ನು ಬೀದಿಗೆ ತಳ್ಳುವಂತೆ ಮಾಡಿದೆ’ ಎಂದು ಹೇಳಿದ್ದಾರೆ.

ರಾಜ್ಯ ಸಹಕಾರ ಚುನಾವಣಾ ಆಯೋಗಕ್ಕೆ ಮಹಾಮಂಡಳ ಪ್ರಸ್ತಾವನೆ

ಮಾರ್ಚ್ 6ಕ್ಕೆ ಅಧ್ಯಕ್ಷರ ಚುನಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 20 ತಿಂಗಳ ಹಿಂದೆಯೇ ಅಧಿಕಾರ ಅವಧಿ ಮುಗಿದಿದ್ದರೂ ಕಾನೂನು ತೊಡಕುಗಳ ಕಾರಣದಿಂದ ಮುಂದೆ ಹೋಗುತ್ತಲೇ ಇದ್ದ ಕರ್ನಾಟಕ ಹಾಲು ಮಹಾಮಂಡಳದ (ಕೆಎಂಎಫ್) ಅಧ್ಯಕ್ಷರ ಚುನಾವಣೆ ಮಾರ್ಚ್ 6ರಂದು ನಡೆಯುವ ಸಾಧ್ಯತೆ ಇದೆ.

ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಚುನಾವಣೆಯು ಮುಗಿದಿರುವುದರಿಂದ ಮತದಾನದ ದಿನಾಂಕ ಅಂತಿಮಗೊಳಿಸುವಂತೆ ಕರ್ನಾಟಕ ರಾಜ್ಯ ಸಹಕಾರ ಚುನಾವಣಾ ಆಯೋಗಕ್ಕೆ ಪ್ರಸ್ತಾವವನ್ನು ಸಲ್ಲಿಸಲಾಗಿದೆ. ಬಹುತೇಕ ಅದೇ ದಿನ ಅಧ್ಯಕ್ಷರ ಆಯ್ಕೆ ಪ್ರಕ್ರಿಯೆ ನಡೆಯಬಹುದು.

‘ಸಹಕಾರ ಚುನಾವಣಾ ಆಯೋಗದ ಆಯುಕ್ತರಾಗಿರುವ ಎಂ.ನಾಗಲಾಂಬಿಕಾ ದೇವಿ ಅವರು ಮುಂದಿನ ವಾರದೊಳಗೆ ಚುನಾವಣೆ ದಿನಾಂಕವನ್ನು ಅಂತಿಮಗೊಳಿಸುವ ನಿರೀಕ್ಷೆಯಿದ್ದು, ಆನಂತರ ಪ್ರಕ್ರಿಯೆಗಳು ಶುರುವಾಗಲಿವೆ’ ಎಂದು ಒಕ್ಕೂಟದ ಹಿರಿಯ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ಕೆಎಂಎಫ್‌ನ ಹಿಂದಿನ ಆಡಳಿತ ಮಂಡಳಿಯ ಅವಧಿ 2024ರ ಜುಲೈ 7ಕ್ಕೆ ಮುಕ್ತಾಯಗೊಂಡಿತ್ತು. ಆಗ, ಲೋಕಸಭಾ ಚುನಾವಣೆ ಎದುರಾಗಿದ್ದರಿಂದಾಗಿ, ಆಡಳಿತಾಧಿಕಾರಿ ನೇಮಕ ಮಾಡದೆ ಹಾಲಿ ಆಡಳಿತ ಮಂಡಳಿಯನ್ನೇ ಮುಂದುವರಿಸಲಾಗಿತ್ತು.

ಆಡಳಿತ ಮಂಡಳಿಯ ಅಧಿಕಾರಾವಧಿ ಮುಗಿದ ನಂತರ, ಸಹಕಾರ ಸಂಘಗಳ ನಿಬಂಧಕ ಟಿ.ಎಚ್.ಎಂ. ಕುಮಾರ್ ಅವರನ್ನು ಆರು ತಿಂಗಳ ಅವಧಿಗೆ ಆನಂತರ 2025ರ ಜೂನ್ 4ರಂದು ಆಡಳಿತಾಧಿಕಾರಿಯಾಗಿ ನೇಮಿಸಲಾಗಿತ್ತು. ಆಗಲೂ ಚುನಾವಣೆ ಪ್ರಕ್ರಿಯೆ ಮುಂದುವರಿದಿದ್ದರಿಂದ ಇನ್ನಷ್ಟು ಅವಧಿಗೆ ವಿಸ್ತರಣೆ ಮಾಡಲಾಗಿತ್ತು. ಒಕ್ಕೂಟದ ಅಧ್ಯಕ್ಷ ಸ್ಥಾನಕ್ಕೆ ಕರ್ನಾಟಕದಲ್ಲಿರುವ 16 ಹಾಲು ಒಕ್ಕೂಟಗಳ ಚುನಾವಣೆ ನಂತರ ಪ್ರತಿನಿಧಿ ಆಯ್ಕೆ ಪ್ರಕ್ರಿಯೆಯನ್ನೂ ಹಿಂದಿನ ವರ್ಷವೇ ನಡೆಸಲಾಗಿತ್ತು. ಆದರೆ, ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ನೇಮಕ ವಿವಾದ ನ್ಯಾಯಾಲಯ ಮೆಟ್ಟಿಲು ಏರಿದ್ದರಿಂದ ಇಡೀ ಪ್ರಕ್ರಿಯೆ ಮುಂದಕ್ಕೆ ಹೋಗುತ್ತಲೇ ಇತ್ತು.

ಬೇಗನೇ ಚುನಾವಣೆ ಮುಗಿಸುವಂತೆ ನ್ಯಾಯಾಲಯ ಸೂಚನೆ ನೀಡಿದ ನಂತರ ಈ ತಿಂಗಳ ಮೊದಲ ವಾರದಲ್ಲಿ ಪ್ರಕ್ರಿಯೆ ಮುಗಿದು ಫಲಿತಾಂಶ ಘೋಷಣೆಯೂ ಆಗಿದೆ. ಫೆ.16ರಂದು ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಚುನಾವಣೆ ನಡೆಯಲಿದೆ. ಜತೆಗೆ ಮಹಾಮಂಡಳ ನಿರ್ದೇಶಕರ ಆಯ್ಕೆಯೂ ಆಗಲಿದೆ. ಈ ಪ್ರಕ್ರಿಯೆ ಪೂರ್ಣಗೊಂಡರೆ ಮಹಾಮಂಡಳ ಅಧ್ಯಕ್ಷರ ಚುನಾವಣೆ ಸುಲಭವಾಗಲಿದೆ.

ಮಹಾಮಂಡಳದ ಅಧ್ಯಕ್ಷರ ಚುನಾವಣೆಯಲ್ಲಿ 20 ಮಂದಿ ಮತ ಹಾಕಲಿದ್ದಾರೆ. 16 ಹಾಲು ಒಕ್ಕೂಟಗಳ ನಾಮ ನಿರ್ದೇಶಿತ ಸದಸ್ಯರು, ಸರ್ಕಾರದಿಂದ ನಾಮನಿರ್ದೇಶನಗೊಂಡ ಒಬ್ಬರು, ಸಹಕಾರ ಸಂಘಗಳ ನಿಬಂಧಕರ ಪ್ರತಿನಿಧಿ, ಪಶುಪಾಲನಾ ಇಲಾಖೆ ಪ್ರತಿನಿಧಿ ಹಾಗೂ ಎನ್‌ಡಿಡಿಬಿ ಪ್ರತಿನಿಧಿ ಮತದಾನ ಮಾಡಲು ಅರ್ಹರು. ಯಲಬುರ್ಗದ ಹಂಪಯ್ಯ ಸ್ವಾಮಿ ಅವರನ್ನು ಸರ್ಕಾರದ ಪ್ರತಿನಿಧಿಯಾಗಿ ನೇಮಿಸಲಾಗಿದೆ.



ಕೆಎಂಎಫ್

ಮುಖ್ಯಾಂಶಗಳು

- ಹಿಂದಿನ ಆಡಳಿತ ಮಂಡಳಿಯ ಅವಧಿ 2024ರಲ್ಲಿ ಮುಕ್ತಾಯ
- ಚಿಕ್ಕಬಳ್ಳಾಪುರ ಹಾಲು ಒಕ್ಕೂಟದ ನೇಮಕ ವಿವಾದದಿಂದ ವಿಳಂಬ

ಮೂವರ ನಡುವೆ ಸ್ಪರ್ಧೆ

ಹಾಲು ಮಹಾಮಂಡಳದ ಅಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನ ಮೂವರ ನಡುವೆ ತುರುಸಿನ ಸ್ಪರ್ಧೆ ಏರ್ಪಟ್ಟಿದೆ.

ಬೆಂಗಳೂರು ಹಾಲು ಒಕ್ಕೂಟದ (ಬಮೂಲ್) ಅಧ್ಯಕ್ಷ ಡಿ.ಕೆ.ಸುರೇಶ್, ಬಳ್ಳಾರಿ, ಕೊಪ್ಪಳ–ರಾಯಚೂರು ಒಕ್ಕೂಟದ ಅಧ್ಯಕ್ಷ, ಕೊಪ್ಪಳ ಶಾಸಕ ರಾಘವೇಂದ್ರ ಹಿಟ್ನಾಳ, ಕೋಲಾರ ಹಾಲು ಒಕ್ಕೂಟ ಅಧ್ಯಕ್ಷ, ಮಾಲೂರು ಶಾಸಕ ಕೆ.ವೈ.ನಂಜೇಗೌಡ ಅವರು ಪ್ರಮುಖ ಆಕಾಂಕ್ಷಿಗಳು.

ಹಿಂದಿನ ಅವಧಿಯಲ್ಲಿ ನಿಮ್ಮ ಬೆಂಬಲಿಗರಿಗೆ ಅವಕಾಶ ಮಾಡಿಕೊಟ್ಟಿದ್ದರಿಂದ ಈ ಅವಧಿಗೆ ನಮ್ಮ ಕಡೆಯವರಿಗೆ ಅಧ್ಯಕ್ಷ ಸ್ಥಾನ ಬಿಟ್ಟು ಕೊಡಿ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಒತ್ತಡ ಹೇರಿದ್ದಾರೆ.

ಲೋಕಸಭಾ ಚುನಾವಣೆಯಲ್ಲಿ ಸೋತಿರುವ ಸಹೋದರ ಡಿ.ಕೆ.ಸುರೇಶ್ ಅವರಿಗೆ ಕೆಎಂಎಫ್ ಚುಕ್ಕಾಣಿ ಕೊಡಿಸುವ ಇರಾದೆ ಶಿವಕುಮಾರ್ ಅವರದ್ದಾಗಿದೆ. ಸಿದ್ದರಾಮಯ್ಯ ಅವರು ತಮ್ಮ ಆಪ್ತ ರಾಘವೇಂದ್ರ ಹಿಟ್ನಾಳ ಪರ ಗಟ್ಟಿಯಾಗಿ ನಿಂತಿದ್ದಾರೆ. ಸೋಮವಾರ ಹಿಟ್ನಾಳ ಅವರು ಮುಖ್ಯಮಂತ್ರಿ ಅವರನ್ನು ಭೇಟಿ ನೀಡಿ ಮಾತುಕತೆ ನಡೆಸಿದ್ದಾರೆ.

ಹಿಂದಿನ ಅವಧಿಯಲ್ಲಿ ಅವಕಾಶ ತಪ್ಪಿದ್ದರಿಂದ ನನಗೂ ಒಂದು ಅವಕಾಶ ಮಾಡಿಕೊಡಿ ಎಂದು ನಂಜೇಗೌಡ ಅವರು ಬೇಡಿಕೆ ಇಟ್ಟಿದ್ದಾರೆ.


ಡಿ.ಕೆ.ಸುರೇಶ್


ಹಿಟ್ನಾಳ


ಕೆ.ವೈ. ನಂಜೇಗೌಡ



ಪುರಭವನದಲ್ಲಿ ಮಂಗಳವಾರ ನಡೆದ ಕಾರ್ಮಿಕ ನಾಯಕ ಎಚ್.ವಿ.ಅನಂತಸುಬ್ಬರಾವ್ ಅವರ ನುಡಿ ನಮನ ಕಾರ್ಯಕ್ರಮದಲ್ಲಿ ಪಿ.ವಿ.ಲೋಕೇಶ್, ನಿಕೇತ್ ರಾಜ್ ಮೌರ್ಯ, ಸಿದ್ದನಗೌಡ ಪಾಟೀಲ್, ಜಿ.ರಾಮಕೃಷ್ಣ, ಡಿ. ರಾಜಾ, ಸಿ.ಎಚ್.ವೆಂಕಟಾಚಲಂ ಮತ್ತು ಕೆ.ವಿ.ಭಟ್ ಅವರು ಭಾವಚಿತ್ರಕ್ಕೆ ನಮನ ಸಲ್ಲಿಸಿದರು

ಕೇಳಚಂದ್ರ ಕೇಂದ್ರದಲ್ಲಿ ತರಬೇತಿ

ಬೆಂಗಳೂರು: ಸರ್ವಜ್ಞನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕೆ.ಜಿ. ಹಳ್ಳಿಯಲ್ಲಿರುವ ಕೇಳಚಂದ್ರ ಕೌಶಲ ಅಭಿವೃದ್ಧಿ ಕೇಂದ್ರದಲ್ಲಿ ವಿವಿಧ ಕೌಶಲಗಳ ತರಬೇತಿ ಪೂರ್ಣಗೊಳಿಸಿದ ಮಹಿಳೆಯರಿಗೆ ಕೇಳಚಂದ್ರ ಫೌಂಡೇಶನ್‌ನ ವ್ಯವಸ್ಥಾಪಕ ಟ್ರಸ್ಟಿ ಸುಜಾ ಕೆ.ಜೆ. ಜಾರ್ಜ್ ಮಂಗಳವಾರ ಪ್ರಮಾಣಪತ್ರ ವಿತರಿಸಿದರು.

‘ಕೆ.ಜೆ.ಜಾರ್ಜ್ ಅವರ ಬೆಂಬಲದೊಂದಿಗೆ ಕೌಶಲ ಅಭಿವೃದ್ಧಿ ಕೇಂದ್ರ ಸ್ಥಾಪಿಸಿ ಕಲೆ ಮತ್ತು ಕರಕುಶಲತೆ, ಕಸೂತಿ ಮತ್ತು ಟೈಲರಿಂಗ್ ಮತ್ತು ಕಂಪ್ಯೂಟರ್ ತರಬೇತಿ ನೀಡಲಾಗುತ್ತಿದೆ. ಮಹಿಳೆಯರಲ್ಲಿ ಆತ್ಮವಿಶ್ವಾಸ ಮೂಡಿ ಸ್ವಾವಲಂಬನೆ ಮತ್ತು ಹೊಸ ಆರಂಭದತ್ತ ದಿಟ್ಟ ಹೆಜ್ಜೆ ಇಡಲು ಸಾಧ್ಯವಾಗಿದೆ’ ಎಂದು ಸುಜಾ ತಿಳಿಸಿದರು.

ಫೌಂಡೇಶನ್‌ನ ನಿರ್ದೇಶಕಿ ತಿವೇಣಿ ಮಾತನಾಡಿ, ‘ಕ್ಷೇತದ ಮಹಿಳೆಯರಿಗೆ ಶಕ್ತಿ ನೀಡಿ ಅವರನ್ನು ಸ್ವಾವಲಂಬಿಗಳನ್ನಾಗಿ ಮಾಡಬೇಕು ಎಂಬ ಉದ್ದೇಶದಿಂದ ಇಲ್ಲಿನ ಡಯಾಲಿಸಿಸ್ ಕೇಂದ್ರದಲ್ಲಿ ಕೌಶಲ ತರಬೇತಿ ಕೇಂದ್ರ ಆರಂಭಿಸಲಾಗಿದೆ. ಇಲ್ಲಿ ಸಾವಿರಾರು ಮಂದಿ ತರಬೇತಿ ಪಡೆಯುತ್ತಿದ್ದಾರೆ’ ಎಂದರು.

ಶೇ 50ರಷ್ಟು ಸಚಿವರ ಕೈಬಿಡಿ: ಸಲೀಂ

ನವದೆಹಲಿ: ಬಜೆಟ್ ಅಧಿವೇಶನದ ಬಳಿಕ ಸಚಿವ ಸಂಪುಟ ಪುನರ್ ರಚನೆಯಾಗಲಿದೆ ಎಂದು ವಿಧಾನ ಪರಿಷತ್ ಸದಸ್ಯ ಸಲೀಂ ಅಹ್ಮದ್ ವಿಶ್ವಾಸ ವ್ಯಕ್ತಪಡಿಸಿದರು.

ಮಂಗಳವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ‘ಈ ಮೊದಲೇ ಸಚಿವ ಸಂಪುಟ ಪುನರ್ ರಚನೆಯಾಗಬೇಕಿತ್ತು. ಕಾರಣಾಂತರಗಳಿಂದ ಮುಂದೂಡಲಾಗಿತ್ತು. ಸಂಪುಟದ ಶೇ 50ರಷ್ಟು ಸಚಿವರನ್ನು ಕೈಬಿಟ್ಟು ಹೊಸಬರಿಗೆ ಅವಕಾಶ ನೀಡಬೇಕು’ ಎಂದರು.

ಸಕ್ರಿಯ ರಾಜಕಾರಣಕ್ಕೆ- ರೋಷನ್ ಬೇಗ್: ‘ನಾನು ರಾಜಕಾರಣದಿಂದ ನಾಪತ್ತೆಯಾಗಿಲ್ಲ. ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸುತ್ತೇನೆ. ನಿಧಾನವಾಗಿ ಎಲ್ಲ ಪ್ರಕರಣಗಳಿಂದ ಮುಕ್ತನಾಗುತ್ತಿದ್ದೇನೆ’ ಎಂದು ಮಾಜಿ ಸಚಿವ ಆರ್.ರೋಷನ್ ಬೇಗ್ ತಿಳಿಸಿದರು.

ಎಡ ವಿದ್ಯಾರ್ಥಿ ಸಂಘಟನೆಗಳ ಪ್ರತಿಭಟನಾ ಸಮಾವೇಶ

‘ಕೆಪಿಎಸ್ ಮ್ಯಾಗ್ನೆಟ್‌ಗೆ ವಿರೋಧ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಪಿಎಸ್ ಮ್ಯಾಗ್ನೆಟ್ ಯೋಜನೆ ಹೆಸರಿನಲ್ಲಿ ರಾಜ್ಯದಲ್ಲಿ 25 ಸಾವಿರಕ್ಕೂ ಹೆಚ್ಚು ಸರ್ಕಾರಿ ಶಾಲೆಗಳನ್ನು ಮುಚ್ಚಲಾಗುತ್ತಿದೆ’ ಎಂದು ಎಡ ವಿದ್ಯಾರ್ಥಿ ಸಂಘಟನೆಗಳ ಪ್ರತಿಭಟನಾ ಸಮಾವೇಶದಲ್ಲಿ ಆರೋಪಿಸಲಾಯಿತು.

ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿಯ ರಾಜ್ಯ ಉಪಾಧ್ಯಕ್ಷ ವಿ.ಎನ್. ರಾಜಶೇಖರ ಮಾತನಾಡಿ, ‘ಎಲ್ಲರಿಗೂ ಶಿಕ್ಷಣ ಸಿಗಬೇಕೆಂಬ ಉದ್ದೇಶದಿಂದ ಹಳ್ಳಿ-ಹಳ್ಳಿಗಳಲ್ಲಿ ಸರ್ಕಾರಿ ಶಾಲೆಗಳನ್ನು ಪ್ರಾರಂಭಿಸಲಾಗಿದೆ. ಇದರ ವಿರುದ್ಧವಾಗಿ ಕೆಪಿಎಸ್ ಶಾಲೆ ಹೆಸರಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚುತ್ತಿರುವುದು ಖಂಡನೀಯ. ಕಾಂಗ್ರೆಸ್ಸಿನ ರಾಜೀವ್ ಗಾಂಧಿ ಸರ್ಕಾರದ 1986 ಶಿಕ್ಷಣ ನೀತಿಯಿಂದ ಹಿಡಿದು ಬಿಜೆಪಿಯ ಮೋದಿ ಸರ್ಕಾರದ ರೂಪಿಸಿ ಶಿಕ್ಷಣ ನೀತಿ ಬಂಡವಾಳಿಗರ ಲಾಭದ ಸರಕಾಗಿಸುವ ಹುನ್ನಾರ’ ಎಂದು ದೂರಿದರು.

ಕರ್ನಾಟಕ ರಾಜ್ಯ ಅಕ್ಷರ ದಾಸೋಹ ಸಂಘಟನೆಯ (ಸಿಐಟಿಯು) ರಾಜ್ಯ ಕಾರ್ಯದರ್ಶಿ ಮಾಲಿನಿ ಮೇಸ್ತ ಮಾತನಾಡಿ. ‘ಕೆಪಿಎಸ್ ಮ್ಯಾಗ್ನೆಟ್ ಹೆಸರಲ್ಲಿ ಸರ್ಕಾರಿ ಶಾಲೆಗಳನ್ನು ಮುಚ್ಚಿದರೆ, ಲಕ್ಷಾಂತರ ವಿದ್ಯಾರ್ಥಿಗಳು ಶಾಲೆಯಿಂದ ಹೊರಗುಳಿಯುವ ಅಪಾಯ ಇದೆ’ ಎಂದು ಆತಂಕ ವ್ಯಕ್ತಪಡಿಸಿದರು.

ರಾಜ್ಯದಾದ್ಯಂತ ಎಲ್ಲ ತಾಲ್ಲೂಕು, ಹಳ್ಳಿಗಳಲ್ಲಿ ವಿದ್ಯಾರ್ಥಿ ಸಂಘಟನೆಗಳು ಸರ್ಕಾರಿ ಶಾಲೆಗಳನ್ನು ಉಳಿಸಿ ಎಂಬ ಹೋರಾಟ ಕೈಗೊಳ್ಳಬೇಕು. ಬಜೆಟ್ ಅಧಿವೇಶನದ ಪೂರ್ವದಲ್ಲಿ ಎಲ್ಲಾ ಎಡ ವಿದ್ಯಾರ್ಥಿ ಸಂಘಟನೆಗಳಿಂದ ಬೃಹತ್ ಪ್ರತಿಭಟನಾ ಸಮಾವೇಶ ಹಮ್ಮಿಕೊಳ್ಳುವುದು. ರಾಜ್ಯ ಸರ್ಕಾರವು ಎಡಿಬಿಯಿಂದ ಪಡೆದಿರುವ ಸಾಲ ಮತ್ತು ಷರತ್ತುಗಳನ್ನು ಸಾರ್ವಜನಿಕವಾಗಿ ಬಹಿರಂಗಪಡಿಸಬೇಕು. ಸರ್ಕಾರಿ ಶಾಲೆಗಳನ್ನು ಬಲಪಡಿಸಬೇಕು. ಕೆಪಿಎಸ್ ಮ್ಯಾಗ್ನೆಟ್ ಯೋಜನೆಯನ್ನು ಹಿಂಪಡೆಯುವುದಾಗಿ ಬಜೆಟ್ ಭಾಷಣದಲ್ಲಿ ಘೋಷಿಸಬೇಕು ಎಂದು ಒತ್ತಾಯಿಸುವ ನಿರ್ಣಯಗಳನ್ನು ಕೈಗೊಳ್ಳಲಾಯಿತು.



ಎಡ ವಿದ್ಯಾರ್ಥಿ ಸಂಘಟನೆಗಳ ಮಂಗಳವಾರ ಆಯೋಜಿಸಿದ್ದ ಪ್ರತಿಭಟನಾ ಸಮಾವೇಶದಲ್ಲಿ ವಿ.ಎನ್. ರಾಜಶೇಖರ್ ಮಾತನಾಡಿದರು. ಎಐಡಿಎಸ್‌ಒ ರಾಜ್ಯ ಖಜಾಂಚಿ ಸುಭಾಷ್ ಬಿ.ಜೆ., ಎಐಎಸ್‌ಎಫ್ ರಾಜ್ಯ ಅಧ್ಯಕ್ಷೆ ವೀಣಾ, ಎಐಕೆಕೆಎಂಎಸ್ ರಾಜ್ಯ ಘಟಕದ ಅಧ್ಯಕ್ಷ ಶಶಿಧರ್ ಎಂ., ರಮಾ ಟಿ.ಸಿ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಸಚಿವರ ಕಚೇರಿಯಲ್ಲಿ ಚಿನ್ನಾಭರಣ ಕಳವು

ವಿಧಾನಸೌಧ: ಹಣ, ಆಭರಣದ ಬ್ಯಾಗ್ ಕಳ್ಳತನ • ನೌಕರನ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸೌಧದ ಕೊಠಡಿ ಸಂಖ್ಯೆ 316ಎ ಯಲ್ಲಿಟ್ಟಿದ್ದ ಬ್ಯಾಗ್‌ನಿಂದ 200 ಗ್ರಾಂ ಚಿನ್ನ, ₹90 ಸಾವಿರ ಮೌಲ್ಯದ ಬೆಳ್ಳಿ, ₹1.10 ಲಕ್ಷ ನಗದು ಕಳ್ಳತನ ಮಾಡಿದ್ದ 'ಡಿ' ಗ್ರೂಪ್ ನೌಕರನನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಈ ಕೊಠಡಿಯನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು (ಡಿಪಿಎಆರ್) ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್ ಅವರಿಗೆ ಹಂಚಿಕೆ ಮಾಡಿದೆ. ಆ ಕಚೇರಿಯಲ್ಲಿಯೇ ಸಚಿವರು ಕಾರ್ಯನಿರ್ವಹಿಸುತ್ತಿದ್ದಾರೆ.

ಬಂಗಾರಪೇಟೆ ನಿವಾಸಿ ನವೀನ್ ಕುಮಾರ್ ಅವರ ದೂರು ಆಧರಿಸಿ ಡಿಪಿಎಆರ್‌ನ 'ಡಿ' ಗ್ರೂಪ್‌ನ ನೌಕರ



ಥಾಮಸ್ ಅಂತೋನಿ ದಾಸ್ ಅವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

'ಲೋಕಾಯುಕ್ತ ಕಚೇರಿಗೆ ದೂರು ನೀಡಲು ಬಂಗಾರಪೇಟೆಯಿಂದ ಫೆಬ್ರುವರಿ 4ರಂದು ಬಂದಿದ್ದ ನಾನು, ಸಂಜೆ ವಿಧಾನಸೌಧದ ಕೊಠಡಿ ಸಂಖ್ಯೆ 316ಎ ಕ್ಕೆ ಹೋಗಿದ್ದೆ. ನನ್ನ ಬ್ಯಾಗ್‌ನಲ್ಲಿ ವೈದ್ಯಕೀಯ, ಕಂದಾಯ ಇಲಾಖೆ ದಾಖಲೆ, ಖಾಸಗಿ ದಾಖಲೆಗಳು, 200 ಗ್ರಾಂ ಚಿನ್ನದ ಆಭರಣ, ₹90 ಸಾವಿರ ಮೌಲ್ಯದ ಬೆಳ್ಳಿಯ ಒಡವೆ, ₹1.10 ಲಕ್ಷ ನಗದು ಇದ್ದವು. ಬ್ಯಾಗ್ ಅನ್ನು ಕೊಠಡಿ ಯಲ್ಲಿಟ್ಟು ಮುಖ್ಯ ಕಾರ್ಯದರ್ಶಿ ಕಚೇರಿಗೆ ತೆರಳಿದ್ದೆ. ರಾತ್ರಿ 9.40ಕ್ಕೆ ಬ್ಯಾಗ್ ತೆಗೆದು ಕೊಂಡು ಹೋಗಲು ವಾಪಸ್ ಬಂದಾಗ, ಕೊಠಡಿಗೆ ಬೀಗ ಹಾಕಿತ್ತು. ವಿಚಾರಿಸಿದಾಗ ಮರುದಿನ ಬರುವಂತೆ ಅಲ್ಲಿನ ಸಿಬ್ಬಂದಿ ಸಲಹೆ ನೀಡಿದರು' ಎಂದು ಆರ್. ನವೀನ್ ಕುಮಾರ್ ದೂರಿದ್ದರು.

'ಫೆ.5ರಂದು ಮಧ್ಯಾಹ್ನ 1.30ಕ್ಕೆ ಕೊಠಡಿಗೆ ತೆರಳಿ ಬ್ಯಾಗ್ ಬಗ್ಗೆ ವಿಚಾರಿಸಿದೆ. ಆಗ 'ಡಿ' ಗ್ರೂಪ್ ನೌಕರ ಕೀರ್ತಿ ಅವರು ಬ್ಯಾಗ್ ಅನ್ನು ತೆಗೆದು ರಾತ್ರಿಯೇ ಕೊಠಡಿಯ ಹೊರಗೆ ಕಿಟಕಿಯಲ್ಲಿ ಇಟ್ಟಿದ್ದಾಗಿ ತಿಳಿಸಿದರು. ಸಂಜೆ ವಿಧಾನಸೌಧ ಭದ್ರತಾ ಸಿಬ್ಬಂದಿ ಕರೆ ಮಾಡಿ, ಬ್ಯಾಗ್ ದೊರಕಿದ್ದು, ಕೊಠಡಿ ಸಂಖ್ಯೆ '37ಎ' ಗೆ ಬಂದು ಪಡೆದುಕೊಳ್ಳಲು ಸೂಚಿಸಿದರು. ಬ್ಯಾಗ್ ಪಡೆದುಕೊಂಡು ಪರಿಶೀಲಿಸಿದಾಗ ಆಭರಣ, ನಗದು ಇರಲಿಲ್ಲ. ಬ್ಯಾಗ್ ನಲ್ಲಿದ್ದ ₹34 ಲಕ್ಷ ಮೌಲ್ಯದ ಚಿನ್ನಾಭರಣ, ₹1.10 ಲಕ್ಷ ನಗದು ಪತ್ತೆ ಮಾಡಿಕೊಡಬೇಕು' ಎಂದು ದೂರಿನಲ್ಲಿ ಮನವಿ ಮಾಡಿದ್ದರು.

ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡು ಸಿ.ಸಿ.ಟಿ.ವಿ. ಕ್ಯಾಮೆರಾಗಳ ಪರಿಶೀಲನೆ ನಡೆಸಿದಾಗ, ಡಿಪಿಎಆರ್‌ನ 'ಡಿ' ಗ್ರೂಪ್‌ನ ನೌಕರರೊಬ್ಬರು ಬ್ಯಾಗ್ ತೆಗೆದುಕೊಂಡು ಹೋಗುತ್ತಿರುವುದು ಪತ್ತೆಯಾಗಿದೆ. ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಆರೋಪಿ ಥಾಮಸ್ ಅಂತೋನಿ ದಾಸ್ ಅವರನ್ನು ನ್ಯಾಯಾಲಯವು ಒಂದು ದಿನ ಕಸ್ಟಡಿಗೆ ನೀಡಿದೆ. ಈ ಬಗ್ಗೆ ವಿಚಾರಣೆ ನಡೆಸಲಾಗುತ್ತಿದೆ. ನವೀನ್ ಕುಮಾರ್ ಅವರು ಹಣ ಹಾಗೂ ಆಭರಣದ ಬ್ಯಾಗ್ ಅನ್ನು ಯಾವ ಕಾರಣಕ್ಕೆ ವಿಧಾನಸೌಧಕ್ಕೆ ತಂದಿದ್ದರು ಎಂಬುದರ ಬಗ್ಗೆ ವಿಚಾರಣೆ ನಡೆಸಬೇಕಿದೆ. ಹಾಗಾಗಿ ಅವರಿಗೆ ನೋಟಿಸ್ ಜಾರಿ ಮಾಡಲಾಗುವುದು' ಎಂದು ಪೊಲೀಸರು ತಿಳಿಸಿದರು.

₹34 ಲಕ್ಷ ಮೌಲ್ಯದ ಆಭರಣ

ಭದ್ರತಾ ಲೋಪದ ಪ್ರಶ್ನೆ

ಕಳ್ಳತನದ ಪ್ರಕರಣ ಭೇದಿಸಲಾಗಿದ್ದರೂ ಈ ಘಟನೆಯು ವಿಧಾನಸೌಧದ ಭದ್ರತಾ ವ್ಯವಸ್ಥೆಯ ಲೋಪಗಳನ್ನು ಎತ್ತಿ ತೋರಿಸಿದೆ ಎಂಬ ಚರ್ಚೆ ಶುರುವಾಗಿದೆ.

ಚಿನ್ನಾಭರಣ ಹಾಗೂ ಒಂದೂವರೆ ಲಕ್ಷ ನಗದು ಅನ್ನು ವ್ಯಕ್ತಿಯೊಬ್ಬರು ತಪಾಸಣೆ ಇಲ್ಲದೆ ಒಳಗೆ ತಂದಿದ್ದು ಹೇಗೆ? ದ್ವಾರಗಳಲ್ಲಿ ಅಳವಡಿಸಲಾದ ಮೆಟಲ್ ಡಿಟೆಕ್ಟರ್‌ಗಳು ಮತ್ತು ಸ್ಕ್ಯಾನರ್‌ಗಳು ಲೋಹದ ವಸ್ತುಗಳನ್ನು ಪತ್ತೆ ಹಚ್ಚಲಿಲ್ಲವೇ? ಅಥವಾ ಭದ್ರತಾ ಸಿಬ್ಬಂದಿ ತಪಾಸಣೆಯಲ್ಲಿ ನಿರ್ಲಕ್ಷ್ಯ ವಹಿಸಿದರೇ ಎಂಬ ಪ್ರಶ್ನೆಗಳು ವಿಧಾನಸೌಧದ ಪಡಸಾಲೆಯಲ್ಲಿ ಹರಿದಾಡುತ್ತಿವೆ.

₹16 ಕೋಟಿ ಗಾಂಜಾ ವಶ: ಮೂವರ ಬಂಧನ

ಪ್ರಜಾವಾಣಿ ವಾರ್ತೆ



ದೇವನಹಳ್ಳಿ: ಬ್ಯಾಂಕಾಕ್ ಮತ್ತು ಥಾಯ್ಲೆಂಡ್‌ನಿಂದ ಅಕ್ರಮವಾಗಿ ಕಳ್ಳಸಾಗಣೆ ಮಾಡುತ್ತಿದ್ದ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ₹16.21 ಕೋಟಿ ಮೌಲ್ಯದ ಹೈಡ್ರೊಪೋನಿಕ್ ಗಾಂಜಾವನ್ನು ಕಸ್ಟಮ್ಸ್ ಅಧಿಕಾರಿಗಳು ಸೋಮವಾರ ರಾತ್ರಿ ವಶಪಡಿಸಿಕೊಂಡಿದ್ದಾರೆ. ಕಳ್ಳಸಾಗಣೆ ಮಾಡುತ್ತಿದ್ದ ಮೂವರು ಪ್ರಯಾಣಿಕರನ್ನು ವಶಕ್ಕೆ ಪಡೆಯಲಾಗಿದೆ.

ಬ್ಯಾಂಕಾಕ್‌ನಿಂದ ಬಂದಿಳಿದ ಇಬ್ಬರು ಪ್ರಯಾಣಿಕರ ಲಗೇಜ್ ಬ್ಯಾಗ್‌ಗಳಲ್ಲಿ ಸಾಗಿಸುತ್ತಿದ್ದ ₹8.31 ಕೋಟಿ ಮೌಲ್ಯದ 23.76 ಕೆ.ಜಿ ಹೈಡ್ರೊಪೋನಿಕ್ ಗಾಂಜಾ ಪತ್ತೆಯಾಗಿದೆ. ಮತ್ತೊಂದು ಪ್ರಕರಣದಲ್ಲಿ ಥಾಯ್ಲೆಂಡ್‌ನಿಂದ ಬಂದಿಳಿದ ಮತ್ತೊಬ್ಬ ಪ್ರಯಾಣಿಕ ಆಹಾರ ಪದಾರ್ಥಗಳ ಪ್ಯಾಕೆಟ್‌ಗಳಲ್ಲಿ ₹3.70 ಕೋಟಿ ಮೌಲ್ಯದ 10.58 ಕೆ.ಜಿ ಗಾಂಜಾ ಕಳ್ಳಸಾಗಣೆ ಮಾಡುತ್ತಿದ್ದಾಗ ತಪಾಸಣೆ ವೇಳೆ ಸಿಕ್ಕಿ ಬಿದ್ದಿದ್ದಾನೆ.

ಬ್ಯಾಂಕಾಕ್‌ನಿಂದ ಮಂಗಳವಾರ ಬಂದ ಮತ್ತೊಬ್ಬ ಪ್ರಯಾಣಿಕನಿಂದ ₹4.20 ಕೋಟಿ ಮೌಲ್ಯದ 12 ಕೆ.ಜಿ ಹೈಡ್ರೊಪೋನಿಕ್ ಗಾಂಜಾ ವಶಪಡಿಸಿಕೊಂಡು, ಪ್ರಯಾಣಿಕನನ್ನು ಬಂಧಿಸಲಾಗಿದೆ.

ಬಂಧಿತರ ವಿರುದ್ಧ ಮಾದಕ ವಸ್ತುಗಳ ನಿಷೇಧ ಕಾಯ್ದೆ (ಎನ್‌ಡಿಪಿಎಸ್) ಅಡಿ ಪ್ರಕರಣ ದಾಖಲಿಸಲಾಗಿದೆ. ತನಿಖೆ ಮುಂದುವರಿದಿದೆ ಎಂದು ಕಸ್ಟಮ್ಸ್ ಮೂಲಗಳು ತಿಳಿಸಿವೆ.

18 ಅಭ್ಯರ್ಥಿಗಳ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೇನೆಯ ಗ್ರೂಪ್ 'ಸಿ' ನೇಮಕಾತಿಗೆ ಫೆ.8ರಂದು ನಡೆದ ಪರೀಕ್ಷೆ ವೇಳೆ ನಕಲು ಹಾಗೂ ಅಕ್ರಮ ಚಟುವಟಿಕೆಯಲ್ಲಿ ತೊಡಗಿದ ಆರೋಪದ ಮೇಲೆ 18 ಅಭ್ಯರ್ಥಿಗಳನ್ನು ಹಲಸೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

515 ಆರ್ಮಿ ಬೇಸ್ ವರ್ಕ್‌ಶಾಪ್‌ನ ಕಮಾಂಡಂಟ್ ಹಾಗೂ ವ್ಯವಸ್ಥಾಪಕ ನಿರ್ದೇಶಕರ ಭದ್ರತಾ ಅಧಿಕಾರಿ, ಕರ್ನಲ್ ಎಸ್.ಎಸ್. ಜ್ಯೋತಿರ್ಲಿಂಗಮ್ ಅವರ ದೂರಿನ ಮೇರೆಗೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಸುರೇಂದರ್, ಸಂದೀಪ್, ಮೊಂಟಿ, ಅಜಯ್ ಕುಮಾರ್, ಅನುಜ್, ರಾಹುಲ್, ಸುಮಿತ್, ಅಮನ್, ಅಂಕಿತ್, ಯೋಗೇಶ್, ವಿಕಾಸ್, ಅಂಕಿತ್ ಬಿನ್ ದಲ್‌ಬೀರ್, ಅಮನ್ ರೇದು, ರಜತ್, ವಿನಯ್, ಅಂಕಿತ್ ಬಿನ್ ರಾಜೇಂದರ್, ಅಮನ್ ಕುಮಾರ್, ಮನಿಶ್ ಎಂಬುವವರನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ.

ಸೇನೆಗೆ ನೇಮಕಾತಿ: ಪರೀಕ್ಷೆಯಲ್ಲಿ ನಕಲು

ಫೆಬ್ರುವರಿ 8ರಂದು 515 ಆರ್ಮಿ ಬೇಸ್ ವರ್ಕ್‌ಶಾಪ್ ವತಿಯಿಂದ ಸಿವಿಲ್ ಡಿಫೆನ್ಸ್ ಎಂಪ್ಲಾಯಿ ರೆಕ್ರ್ಯೂಟ್‌ಮೆಂಟ್‌ನ ಗ್ರೂಪ್ 'ಸಿ' ಲೋಯರ್ ಡಿವಿಷನ್ ಕ್ಲರ್ಕ್ ಹುದ್ದೆಯ ನೇಮಕಾತಿಗೆ ಲಿಖಿತ ಪರೀಕ್ಷೆ ನಡೆಯಿತು. ಈ ವೇಳೆ ಪರೀಕ್ಷೆ ಬರೆಯುವ ವೇಳೆ 18 ಅಭ್ಯರ್ಥಿಗಳು ಡಿಜಿಟಲ್ ಸಾಧನಗಳನ್ನು ಬಳಸಿ, ಸಿಕ್ಕಿಬಿದಿದ್ದಾರೆ ಎಂದು ಜ್ಯೋತಿರ್ಲಿಂಗಮ್ ದೂರಿನಲ್ಲಿ ತಿಳಿಸಿದ್ದಾರೆ.

ಅಲ್ಲದೇ ಪರೀಕ್ಷಾ ಆವರಣದಲ್ಲೂ ಎಲೆಕ್ಟ್ರಾನಿಕ್ ಸಾಧನಗಳು ಸಿಕ್ಕಿವೆ. ಈ ಪೈಕಿ ಅಮನ್ ಮತ್ತು ರಾಜೇಂದರ್ ಅವರು ಪರೀಕ್ಷಾ ಕೊಠಡಿಯ ಹೊರಗೆ ಇರಿಸಿದ್ದ ಬ್ಯಾಗ್‌ಗಳಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳು ಪತ್ತೆಯಾಗಿವೆ. ಅಭ್ಯರ್ಥಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಮನವಿ ಮಾಡಿದ್ದಾರೆ. 'ಕರ್ನಲ್ ಜ್ಯೋತಿರ್ಲಿಂಗಮ್ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿಕೊಂಡು, 18 ಮಂದಿಯನ್ನು ಬಂಧಿಸಿ, ಎಲೆಕ್ಟ್ರಾನಿಕ್ ಉಪಕರಣಗಳನ್ನು ವಶಪಡಿಸಿಕೊಳ್ಳಲಾಗಿದೆ. ಅಭ್ಯರ್ಥಿಗಳ ವಿಚಾರಣೆ ನಡೆಯುತ್ತಿದ್ದು, ತನಿಖೆ ಪ್ರಗತಿಯಲ್ಲಿದೆ' ಎಂದು ಹಿರಿಯ ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ.

ದೊಡ್ಡಮ್ಮ ಕೆಲಸ ಮಾಡುತ್ತಿದ್ದ ಮನೆಯಲ್ಲಿ ಮಗನಿಂದ ಕಳ್ಳತನ

ಬೆಂಗಳೂರು: ದೊಡ್ಡಮ್ಮ ಕೆಲಸ ಮಾಡುತ್ತಿದ್ದ ಮನೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಚಿನ್ನಾಭರಣ ಹಾಗೂ ನಗದು ಕಳ್ಳತನ ಮಾಡಿದ್ದ ವ್ಯಕ್ತಿಯನ್ನು ಬಸವನಗುಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಹಳ್ಳಿ ನಿವಾಸಿ ಶರತ್ (31) ಎಂಬಾತನನ್ನು ಬಂಧಿಸಿ, 241 ಗ್ರಾಂ ಚಿನ್ನ, 2.8 ಕೆ.ಜಿ ಬೆಳ್ಳಿ ₹1.30 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ. ತ್ಯಾಗರಾಜನಗರದ ಮನೆಯೊಂದರಲ್ಲಿ 2025ರ ಆಗಸ್ಟ್‌ನಲ್ಲಿ ಕಳ್ಳತನ ನಡೆದಿತ್ತು. ಈ ಸಂಬಂಧ ಮನೆ ಮಾಲೀಕರು ನೀಡಿದ ದೂರಿನ ಮೇರೆಗೆ ಅರೋಪಿಯನ್ನು ಬಂಧಿಸಲಾಗಿದೆ.

ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ಮನೆ ಮಾಲೀಕರು ತ್ಯಾಗರಾಜನಗರದಲ್ಲಿ ವಾಸವಾಗಿದ್ದಾರೆ. 25 ವರ್ಷಗಳಿಂದ ದೂರುದಾರರ ಮನೆಯಲ್ಲಿ ಆರೋಪಿಯ ದೊಡ್ಡಮ್ಮ ಮನೆ ಕೆಲಸ ಮಾಡುತ್ತಿದ್ದರು. ನಂಬಿಕೆಯಿಂದ ಮನೆಯ ಮತ್ತೊಂದು ಬೀಗದ ಕೀಯನ್ನು ಆಕೆಗೆ ನೀಡಿದ್ದರು ಎಂದು ಪೊಲೀಸರು ತಿಳಿಸಿದರು.

ದೊಡ್ಡಮ್ಮನಿಗೆ ಊಟ ನೀಡಲು ಆಗಾಗ್ಗೆ ದೂರುದಾರರ ಮನೆಗೆ ಹೋಗುತ್ತಿದ್ದ ಆರೋಪಿ, ಮಾಲೀಕರು ಇಲ್ಲದಿರುವುದನ್ನು ತಿಳಿದು, ಕಳ್ಳತನಕ್ಕೆ ಸಂಚು ರೂಪಿಸಿದ್ದ. ದೊಡ್ಡಮ್ಮನಿಗೂ ತಿಳಿಯದಂತೆ, ಬೀಗದ ಕೀ ಪಡೆದು ಕಳವು ಮಾಡಿದ್ದಾನೆ. ಅನುಮಾನದ ಮೇರೆಗೆ ಮನೆಗೆಲಸದಾಕೆ ಮತ್ತು ಆಕೆಯ ಸಹೋದರಿ ಪುತ್ರನನ್ನು ವಿಚಾರಣೆ ನಡೆಸಿದಾಗ ಕೃತ್ಯದ ಬಗ್ಗೆ ಗೊತ್ತಿಲ್ಲ ಎಂದಿದ್ದರು. ತಾಂತ್ರಿಕ ಆಯಾಮದಲ್ಲಿ ತನಿಖೆ ನಡೆಸಿದರೂ ಆರೋಪಿಗಳ ಸುಳಿವು ಸಿಕ್ಕಿರಲಿಲ್ಲ. ಬಳಿಕ ಮತ್ತೊಮ್ಮೆ ಮನೆಗೆಲಸದಾಕೆ ಸಹೋದರಿ ಪುತ್ರನನ್ನು ತೀವ್ರವಾಗಿ ವಿಚಾರಣೆ ನಡೆಸಿದಾಗ ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ.

8 ಮಂದಿ ವಿದೇಶಿ ಪ್ರಜೆಗಳು ವಶಕ್ಕೆ



ಬೆಂಗಳೂರು: ವೀಸಾ ಅವಧಿ ಮುಗಿದರೂ ಅಕ್ರಮವಾಗಿ ವಾಸವಾಗಿದ್ದ ಮಹಿಳೆ ಸೇರಿ ಎಂಟು ಮಂದಿ ವಿದೇಶಿ ಪ್ರಜೆಗಳನ್ನು ಸಂಜಯನಗರ ಠಾಣೆ ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

ಕ್ಯಾಮರೂನ್ ದೇಶದ ಐವರು ಹಾಗೂ ಸೂಡಾನ್ ದೇಶದ ಮೂವರನ್ನು ವಶಕ್ಕೆ ಪಡೆಯಲಾಗಿದೆ. ಸುಮಾರು ನಾಲ್ಕು ವರ್ಷಗಳ ಹಿಂದೆ ವಿದ್ಯಾರ್ಥಿ ವೀಸಾದಡಿ ನಗರಕ್ಕೆ ಬಂದಿದ್ದ ವಿದೇಶಿ ಪ್ರಜೆಗಳು, ವೀಸಾ ಅವಧಿ ಮುಕ್ತಾಯಗೊಂಡಿದ್ದರೂ ಭೂಪಸಂದ್ರದಲ್ಲಿ ವಾಸವಾಗಿದ್ದರು.

ಅಕ್ರಮ ವಾಸಿಗಳ ಬಗ್ಗೆ ನಗರದಾದ್ಯಂತ ವಿಶೇಷ ಕಾರ್ಯಾಚರಣೆ ನಡೆಯುತ್ತಿದ್ದು, ಮಂಗಳವಾರ ಎಂಟು ಮಂದಿ ಪತ್ತೆಯಾಗಿದ್ದು, ಎಲ್ಲರನ್ನೂ ಪ್ರಾದೇಶಿಕ ವಿದೇಶಿ ನೋಂದಣಿ ಕಚೇರಿಗೆ ಹಾಜರುಪಡಿಸಲಾಗುತ್ತದೆ. ಬಳಿಕ ಕಾನೂನು ಪ್ರಕ್ರಿಯೆ ಪೂರ್ಣಗೊಳಿಸಿ ಅವರ ದೇಶಕ್ಕೆ ವಾಪಸ್ ಕಳುಹಿಸಲಾಗುತ್ತದೆ ಎಂದು ಪೊಲೀಸರು ಮಾಹಿತಿ ನೀಡಿದರು.


ಕಳವು: ರೌಡಿಶೀಟರ್ ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಾಲಿ ಜಾಗದಲ್ಲಿ ನಿಲ್ಲಿಸಿದ್ದ ಟ್ರ್ಯಾಕ್ಟರ್ ಹಾಗೂ ಟ್ರಾಲಿಯನ್ನು ಕಳ್ಳತನ ಮಾಡಿ ಪರಾರಿಯಾಗಿದ್ದ ರೌಡಿಶೀಟರ್ ಸೇರಿ ಮೂವರನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊತ್ತನೂರು ನಿವಾಸಿ, ರೌಡಿ ಶೀಟರ್ ಸತೀಶ್ ಕುಮಾರ್, ರಾಯಚೂರು ಜಿಲ್ಲೆಯ ಉಮಾಲೂಟಿ ಗ್ರಾಮದ ರವಿಚಂದ್ರ ಹಾಗೂ ಕಾಚೋಹಳ್ಳಿ ನಿವಾಸಿ ಮಗನ್ ಎಚ್.ಪಟೇಲ್ ಎಂಬುವವರನ್ನು ಬಂಧಿಸಲಾಗಿದ್ದು, ಮತ್ತಿಬ್ಬರು ನಾಪತ್ತೆ ಆಗಿದ್ದಾರೆ. ಬಂಧಿತರಿಂದ ₹8 ಲಕ್ಷ ಮೌಲ್ಯದ ಟ್ರ್ಯಾಕ್ಟರ್, ಟ್ರಾಲಿ ಮತ್ತು ಕೃತ್ಯಕ್ಕೆ ಬಳಸಿದ್ದ ಎರಡು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

ಕೆಂಗೇರಿ ಉಪನಗರ ವಳಗೇರಹಳ್ಳಿ ಪೆಟ್ರೋಲ್ ಬಂಕ್ ಎದುರು ಖಾಲಿ ಜಾಗದಲ್ಲಿ ಜನವರಿ 29ರಂದು ರಾತ್ರಿ 8 ಗಂಟೆಗೆ ನಿಲ್ಲಿಸಿದ್ದ ಟ್ರ್ಯಾಕ್ಟರ್ ಹಾಗೂ ಟ್ರಾಲಿ ಕಳವಾಗಿತ್ತು. ಈ ಬಗ್ಗೆ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡರು. ಸಿ.ಸಿ.ಟಿ.ವಿ. ಕ್ಯಾಮೆರಾಗಳ ಪರಿಶೀಲನೆ ಬಳಿಕ ದೊರೆತ ಸುಳಿವಿನ ಮೇರೆಗೆ ಮೂವರನ್ನು ಬಂಧಿಸಿ, ಟ್ರ್ಯಾಕ್ಟರ್ ಅನ್ನು ವಶಪಡಿಸಿಕೊಂಡರು.



ಸತೀಶ್



ರವಿಚಂದ್ರ



ಮಗನ್

ತಲೆಮರೆಸಿಕೊಂಡಿರುವ ಡ್ಯಾನಿಯಲ್ ಹಾಗೂ ಮಂಜುನಾಥ್ ಅವರೊಂದಿಗೆ ಸೇರಿ ಕಳ್ಳತನ ಮಾಡಿರುವುದಾಗಿ ಆರೋಪಿಗಳು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದರು.

ಕೋಣನಕುಂಟೆ ಪೊಲೀಸ್ ಠಾಣೆಯ ರೌಡಿಶೀಟರ್ ಸತೀಶ್ ಕುಮಾರ್ ವಿರುದ್ಧ ಬೆಂಗಳೂರು ನಗರ, ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ಕೊಲೆಗೆ ಯತ್ನ, ಅತ್ಯಾಚಾರ, ಸುಲಿಗೆ ಸೇರಿ 11ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ರವಿಚಂದ್ರ ವಿರುದ್ಧ ನಗರದ ವರ್ತೂರು ಪೊಲೀಸ್ ಠಾಣೆಯಲ್ಲಿ ಅತ್ಯಾಚಾರ, ಚಿಕ್ಕಬಳ್ಳಾಪುರ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಹಾಗೂ ರಾಜಸ್ಥಾನದ ಮಗನ್ ಎಚ್ ಪಟೇಲ್ ವಿರುದ್ಧ ವಿಲ್ಸನ್ ಗಾರ್ಡನ್ ಪೊಲೀಸ್ ಠಾಣೆಯಲ್ಲಿ ನಕಲಿ ನೋಟು ಚಲಾವಣೆ ಪ್ರಕರಣ ದಾಖಲಾಗಿದೆ ಎಂದು ಹೇಳಿದರು.

ಪೀಟರ್ ಕ್ಯಾಡಿ ನಿವಾಸದ ಮೇಲೆ ಸಿಐಡಿ ದಾಳಿ: ದಾಖಲೆ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಲ ಕೊಡಿಸುವ ನೆಪ ಹಾಗೂ ನಿವೇಶನ ಮಾರಾಟ ಮಾಡಿಸಿಕೊಡುವುದಾಗಿ ಉದ್ಯಮಿಗಳಿಗೆ ವಂಚಿಸಿದ್ದ ಆರೋಪದ ಮೇರೆಗೆ ಪೀಟರ್ ಕ್ಯಾಡಿ ಎಂಬುವವರ ಮನೆ ಸೇರಿ ಒಂಬತ್ತು ಸ್ಥಳಗಳಲ್ಲಿ ಸಿಐಡಿಯ ಆರ್ಥಿಕ ಅಪರಾಧ ವಿಭಾಗದ ಅಧಿಕಾರಿಗಳು ಮಂಗಳವಾರ ದಾಳಿ ನಡೆಸಿ ಮಹತ್ವದ ದಾಖಲೆಗಳನ್ನು ಜಪ್ತಿ ಮಾಡಿದ್ದಾರೆ.

ಪುಲಕೇಶಿನಗರದ ಕೋಲ್ಸ್ ಪಾರ್ಕ್ ಸಮೀಪದ ಪೀಟರ್ ಕ್ಯಾಡಿ ಮನೆ, ಕಚೇರಿಗಳಲ್ಲಿ ಅಧಿಕಾರಿಗಳ ತಂಡ ದಾಖಲೆಗಳನ್ನು ಪರಿಶೀಲಿಸಿದೆ. ಆರೋಪಿಯು ಸುಮಾರು ಹತ್ತು ವರ್ಷಗಳಿಂದ ಉದ್ಯಮಿಗಳಿಗೆ ವಂಚಿಸುತ್ತಿರುವುದು ಪ್ರಾಥಮಿಕ ವಿಚಾರಣೆಯಲ್ಲಿ ಗೊತ್ತಾಗಿದೆ. ಆರೋಪಿಯೇ ವಂಚನೆಗೊಳಗಾದವರ ವಿರುದ್ಧ ಸುಳ್ಳು ಚೆಕ್‌ಬೌನ್ಸ್ ಪ್ರಕರಣ ದಾಖಲಿಸಿರುವುದು ಪತ್ತೆಯಾಗಿದೆ.

ನೂರಕ್ಕೂ ಹೆಚ್ಚು ಮಂದಿ ವಂಚನೆಗೊಳಗಾಗಿದ್ದಾರೆ. ₹96 ಲಕ್ಷ ವಂಚಿಸಿದ್ದಾನೆ ಎಂದು 2025ರ ಆಗಸ್ಟ್‌ನಲ್ಲಿ, ಬಿ.ಸಿ.ಸುಬ್ಬರಾವ್ ಎಂಬವರು ಆರೋಪಿ ವಿರುದ್ಧ ದೂರು ನೀಡಿದ್ದರು. ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ ವಂಚನೆ ಪ್ರಕರಣ ದಾಖಲಾಗಿತ್ತು. ಅದರ ಗಂಭೀರತೆ ಅರಿತು ಸಿಐಡಿಗೆ ಪ್ರಕರಣ ವರ್ಗಾವಣೆಯಾಗಿತ್ತು.

'ನಗರದ ಚೋಳನಾಯಕನಹಳ್ಳಿ ನಿವಾಸಿ ಸುಬ್ಬರಾವ್ ಕೋಲ್ಸ್ ಪಾರ್ಕ್ ಬಳಿ 2016ರಲ್ಲಿ ನಿವೇಶನ ಖರೀದಿಸಿದ್ದರು. ಈ ಜಾಗಕ್ಕೆ ಖಾತಾ ಮಾಡಿಸಲು ಪರಿಚಯಸ್ಥರ ಮೂಲಕ ರಿಯಲ್ ಎಸ್ಟೇಟ್ ವ್ಯವಹಾರ ಹಾಗೂ ಸ್ಕ್ರ್ಯಾಪ್ ಡೀಲರ್ ಆಗಿದ್ದ ಪೀಟರ್ ಕ್ಯಾಡಿಯನ್ನು ಸಂಪರ್ಕಿಸಿದ್ದರು. ಅವರಿಂದ ಶುಲ್ಕದ ರೂಪದಲ್ಲಿ ₹8 ಲಕ್ಷ ಪಡೆದಿದ್ದ. ಈ ಮಧ್ಯೆ ಸುಬ್ಬರಾವ್ ಅವರ ಒಡೆತನದಲ್ಲಿರುವ ನೆಲ್ಲಕುಂಟೆ ಗ್ರಾಮದ 317 ಎಕರೆ ಜಮೀನು ಮಾರಾಟಕ್ಕೆ ಮುಂದಾಗಿದ್ದರು. ಈ ವಿಷಯ ಅರಿತ ಆರೋಪಿ, ನನ್ನ ಸ್ನೇಹಿತರೊಬ್ಬರು ಶಾಲೆ ತೆರೆಯಲು 150ರಿಂದ 200 ಎಕರೆ ಜಮೀನು ಹುಡುಕಾಟ ನಡೆಸುತ್ತಿದ್ದಾರೆ. ಮಾರಾಟ ಮಾಡಿಸಿಕೊಡುವುದಾಗಿ ನಂಬಿಸಿ ₹96 ಲಕ್ಷ ಪಡೆದಿದ್ದ' ಎಂದು ಮೂಲಗಳು ತಿಳಿಸಿವೆ.

'ಹಲವು ದಿನ ಕಳೆದರೂ, ಖಾತಾ ಮಾಡಿಸಿ ಕೊಡದೆ, ಜಮೀನು ಸಹ ನೋಂದಣಿ ಮಾಡಿಸದೆ ತಪ್ಪಿಸಿಕೊಳ್ಳುತ್ತಿದ್ದ ಆರೋಪಿಯನ್ನು ಪ್ರಶ್ನಿಸಿದಾಗ, ಸುಬ್ಬರಾವ್ ಅವರು ದಾಖಲೆಗಳಿಗಾಗಿ ನೀಡಲಾಗಿದ್ದ ಖಾಲಿ ಚೆಕ್‌ಗಳನ್ನು ದುರುಪಯೋಗ ಪಡಿಸಿಕೊಂಡು ಸುಳ್ಳು ಚೆಕ್‌ಬೌನ್ಸ್ ಕೇಸ್ ಹಾಕಿದ್ದ' ಎಂದು ಮೂಲಗಳು ತಿಳಿಸಿವೆ.

ಮಹಿಳೆಯಿಂದ ಸುಳ್ಳು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲು

ಯಾರಾದರೂ ಕಚೇರಿಗೆ ಭೇಟಿ ನೀಡಿ ಹಣ ವಾಪಸು ಕೇಳಿದರೆ, ಪೀಟರ್ ತನ್ನ ಮಹಿಳಾ ಮ್ಯಾನೇಜರ್‌ವೊಬ್ಬರಿಂದ ಸುಳ್ಳು ಲೈಂಗಿಕ ದೌರ್ಜನ್ಯ ಪ್ರಕರಣ ದಾಖಲಿಸಿ ಕಿರುಕುಳ ಕೊಡಿಸುತ್ತಿದ್ದ. ಅಮಿತ್ ಕ್ಯಾಡಿ, ಅಶ್ವಿನಿ, ಹರಿಮೋಹನ್ ನಾಯ್ಡು, ಅಲ್ತಫ್, ಚಾರಿ ಮುರಳಿ ಹಾಗೂ ಇತರರ ತಂಡ ಕಟ್ಟಿಕೊಂಡು ಪೀಟರ್ ಕ್ಯಾಡಿ ವಂಚನೆ ಮಾಡುತ್ತಿದ್ದ ಎಂದು ಮೂಲಗಳು ತಿಳಿಸಿವೆ.

ಸಾಲದ ಅಗತ್ಯ ಇರುವವರನ್ನು ಸಂಪರ್ಕಿಸುತ್ತಿದ್ದ ಪೀಟರ್ ಕ್ಯಾಡಿ, ತಾನು ಬ್ಯಾಂಕ್ ಬಡ್ಡಿಗಿಂತಲೂ ಕಡಿಮೆಗೆ ಕೋಟ್ಯಂತರ ರೂಪಾಯಿ ಸಾಲ ಕೊಡಿಸುವುದಾಗಿ ನಂಬಿಸುತ್ತಿದ್ದ. ಆರಂಭದಲ್ಲಿ ಕೋಟ್ಯಂತರ ರೂಪಾಯಿ ಮೊತ್ತದ ಡಿ.ಡಿ. ಯನ್ನು ಉದ್ಯಮಿಗಳ ಹೆಸರಿನಲ್ಲಿ ತೆಗೆದುಕೊಂಡು ತೋರಿಸುತ್ತಿದ್ದ. ಪೀಟರ್ ಮತ್ತು ಆತನ ಗ್ಯಾಂಗ್ ನಂಬಿದ್ದ ಹತ್ತಾರು ಮಂದಿ ಖಾಲಿ ಚೆಕ್‌ಗಳು ಮತ್ತು ಆಸ್ತಿ ಪತ್ರಗಳನ್ನು ನೀಡುತ್ತಿದ್ದರು. ಈ ಹಂತದಲ್ಲಿ ಪ್ರಕ್ರಿಯಾ ಶುಲ್ಕ ಮತ್ತು ಕಮಿಷನ್ ಅಂತ ಪಡೆದುಕೊಂಡು ಸಾಲ ಕೊಡದೇ ಮೋಸ ಮಾಡುತ್ತಿದ್ದ. ಹಣ ವಾಪಸು ನೀಡುವಂತೆ ಕೇಳಿದರೆ ಅವರು ನೀಡಿದ್ದ ಚೆಕ್ ಮತ್ತು ಆಸ್ತಿ ಪತ್ರಗಳನ್ನು ದುರ್ಬಳಕೆ ಮಾಡಿಕೊಡಿಕೊಂಡು ಅವರ ವಿರುದ್ಧವೇ ಚೆಕ್‌ಬೌನ್ಸ್ ಪ್ರಕರಣ ದಾಖಲಿಸುತ್ತಿದ್ದ ಎನ್ನಲಾಗಿದೆ.

₹125 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸುವ ಕಾರ್ಯಾಚರಣೆ ಮುಂದುವರಿಸಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ), ಉಲ್ಲಾಳು ಮತ್ತು ಅಗ್ರಹಾರ ದಾಸರಹಳ್ಳಿ ಗಳಲ್ಲಿ ₹125 ಕೋಟಿ ಮೌಲ್ಯದ ಆಸ್ತಿಯನ್ನು ಮಂಗಳವಾರ ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಉಲ್ಲಾಳು ಗ್ರಾಮದ ಸರ್ವೆ ನಂ. 34ರಲ್ಲಿ 1 ಎಕರೆ ಹಾಗೂ ಸರ್ವೆ ನಂ. 38/1, 2, 4, 5ರಲ್ಲಿ 1 ಎಕರೆ 1 ಗುಂಟೆ ಮತ್ತು ಅಗ್ರಹಾರ ದಾಸರಹಳ್ಳಿ ಗ್ರಾಮದ ಸರ್ವೆ ನಂ. 8ರ 33 ಗುಂಟೆ ಪ್ರದೇಶಗಳಲ್ಲಿ ಅನಧಿಕೃವಾಗಿ ನಿರ್ಮಾಣಗಳನ್ನು ತೆರವುಗೊಳಿಸಿ, ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನೆರವೇರಿತು. ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಹಾಜರಿದ್ದರು.

ನೀರಿನ ಬವಣೆ ನೀಗಿಸಲು ‘ಮಿನಿ ಟ್ಯಾಂಕ್’

ಬೇಸಿಗೆಯಲ್ಲಿ ನೀರಿನ ಸಮಸ್ಯೆ ನಿವಾರಿಸಲು ಸಿದ್ಧವಾದ ಜಲಮಂಡಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಬೇಸಿಗೆ ಅವಧಿಯಲ್ಲಿ ನೀರಿನ ಬವಣೆ ನೀಗಿಸಲು ಬೆಂಗಳೂರು ಜಲಮಂಡಳಿ ಅಣಿಯಾಗುತ್ತಿದ್ದು, ನೀರಿನ ಸಮಸ್ಯೆ ಎದುರಾಗಬಹುದಾದ ಪ್ರದೇಶಗಳಲ್ಲಿ ‘ಮಿನಿ ಟ್ಯಾಂಕ್’ಗಳ ಅಳವಡಿಕೆಗೆ ನಿರ್ಧರಿಸಿದೆ.

ಮಂಡಳಿ ಅಧ್ಯಕ್ಷ ಡಾ. ವಿ. ರಾಮ್ ಪ್ರಸಾತ್ ಮನೋಹರ್ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಹಿರಿಯ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ.

‘ನೀರಿನ ಹೆಚ್ಚು ಬೇಡಿಕೆ ಹಾಗೂ ನೀರಿನ ಅಭಾವ ಎದುರಿಸಲಿರುವ ಪ್ರದೇಶಗಳಲ್ಲಿ ಪರಿಸ್ಥಿತಿಯನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಜಲಮಂಡಳಿ ಅಗತ್ಯ ತಯಾರಿ ಮಾಡಿಕೊಂಡಿದೆ’ ಎಂದು ಸಭೆಯ ನಂತರ, ರಾಮ್ ಪ್ರಸಾತ್ ಮಾಹಿತಿ ನೀಡಿದರು.

ನೀರಿನ ಅಭಾವ ಎದುರಾಗಬಹುದಾದ ಹಾಗೂ ಜನಸಾಂದ್ರಿತ ಪ್ರದೇಶಗಳನ್ನು ಗುರುತಿಸಲಾಗಿದೆ. ಈ ಪ್ರದೇಶಗಳಲ್ಲಿನ ಜನರಿಗೆ ಉಚಿತವಾಗಿ ಕುಡಿಯುವ ನೀರು ಒದಗಿಸಲು ‘ಮಿನಿ ವಾಟರ್ ಟ್ಯಾಂಕ್’ಗಳನ್ನು (ಸಿಂಟೆಕ್ಸ್ ಟ್ಯಾಂಕ್) ಅಳವಡಿಸಲಾಗುವುದು. ಈ ಮಿನಿ ಟ್ಯಾಂಕ್‌ಗಳಿಗೆ ನೀರು ತುಂಬಿಸಲು ಜಲಮಂಡಳಿ ಹಾಗೂ ಸಂಚಾರಿ ಕಾವೇರಿ ಟ್ಯಾಂಕರ್‌ಗಳಿಗೆ ಆದ್ಯತೆ ನೀಡಬೇಕು. ಅನಿವಾರ್ಯ ಸಂದರ್ಭದಲ್ಲಿ ಮಾತ್ರ ಖಾಸಗಿ ಟ್ಯಾಂಕರ್‌ಗಳನ್ನು ಬಾಡಿಗೆಗೆ ಪಡೆಯಬೇಕು ಎಂದು ಸೂಚನೆ ನೀಡಿದರು.

ಬೇಸಿಗೆ ನಿರ್ವಹಣೆಯಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು. ಎಲ್ಲಾ ಮುಖ್ಯ ಎಂಜಿನಿಯರ್‌ಗಳು, ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗಳು ಮತ್ತು ನೀರು ಪರಿವೀಕ್ಷಕರು ಕಚೇರಿಯಲ್ಲಿ ಕುಳಿತುಕೊಳ್ಳದೆ ಕ್ಷೇತ್ರದಲ್ಲೇ ಹಾಜರಿರಬೇಕು ಎಂದು ತಿಳಿಸಿದರು.

ಎಂಜಿನಿಯರ್‌ಗಳಿಗೆ ಹೊಣೆ: ಎರಡು ವರ್ಷದ ಹಿಂದೆ ಬೇಸಿಗೆ ವೇಳೆ ಜಲ ಸಂಕಟ ಎದುರಿಸಿ ಜನರಿಗೆ ನಿತ್ಯ ನೀರು ಒದಗಿಸಲು ಹರಸಾಹಸ ಪಟ್ಟಿದ್ದ ಜಲಮಂಡಳಿ, ಈ ಬಾರಿ ಬೇಸಿಗೆ ಬವಣೆ ಎದುರಿಸಲು ನೋಡಲ್ ಅಧಿಕಾರಿಗಳನ್ನು ನೇಮಿಸಿದೆ. ಮುಖ್ಯ ಎಂಜಿನಿಯರ್‌ಗಳ ನೇತೃತ್ವದಲ್ಲಿ ಆಯಾ ಉಪವಿಭಾಗದ ಅಧೀಕ್ಷಕ ಹಾಗೂ ಕಾರ್ಯಪಾಲಕ ಎಂಜಿನಿಯರ್‌ಗಳು ನೋಡಲ್ ಅಧಿಕಾರಿಗಳಾಗಿ ಕಾರ್ಯನಿರ್ವಹಿಸಲಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

> ಅಧಿಕಾರಿಗಳು ಪ್ರತಿದಿನ ತಮ್ಮ ವ್ಯಾಪ್ತಿಯ ಪ್ರದೇಶಗಳಿಗೆ ಭೇಟಿ ನೀಡಿ, ಪರಿಸ್ಥಿತಿಯನ್ನು ಅವಲೋಕಿಸಬೇಕು. ಗುರುತಿಸಲಾದ ಪ್ರದೇಶಗಳಿಗೆ ನೀರು ತಲುಪುವುದನ್ನು ಖಚಿತಪಡಿಸಿಕೊಳ್ಳಬೇಕು
>
> **ಡಾ.ರಾಮಪ್ರಸಾತ್ ಮನೋಹರ್**, ಅಧ್ಯಕ್ಷ, ಬೆಂಗಳೂರು ಜಲಮಂಡಳಿ

ನೀರಿನ ಬೇಡಿಕೆ ಹೇಗೆ?

1.40 ಕೋಟಿ	ಜನಸಂಖ್ಯೆ
11.50 ಲಕ್ಷ	ನೀರಿನ ಸಂಪರ್ಕ ಸಂಖ್ಯೆ
10 ಟಿಎಂಸಿ	ಬೇಸಿಗೆಯಲ್ಲಿ ಬೇಕಾದ ನೀರಿನ ಪ್ರಮಾಣ
15,761	ಸಾರ್ವಜನಿಕ ಕೊಳವೆ ಬಾವಿಗಳ ಸಂಖ್ಯೆ
5 ಲಕ್ಷ	ಖಾಸಗಿ ಕೊಳವೆ ಬಾವಿಗಳು

ಅಪಾರ್ಟ್‌ಮೆಂಟ್‌ಗಳ ಮೇಲೆ ನಿಗಾ

ನಗರದಲ್ಲಿ ಬಳಕೆಯಲ್ಲಿರುವ ಹಾಗೂ ನಿರ್ಮಾಣದ ಹಂತದ ಅಪಾರ್ಟ್‌ಮೆಂಟ್‌ಗಳ ಮೇಲೆ ಜಲಮಂಡಳಿ ಈ ಬಾರಿ ನಿಗಾ ವಹಿಸಿದೆ. ಅಪಾರ್ಟ್‌ಮೆಂಟ್‌ಗಳು ಕಡ್ಡಾಯವಾಗಿ ಕಾವೇರಿ ನೀರಿನ ಸಂಪರ್ಕ ಪಡೆಯಬೇಕು. ಪ್ರತಿ ಮನೆಗೂ ನೀರಿನ ಮೀಟರ್ ಅಳವಡಿಸಬೇಕು. ಬೇಸಿಗೆ ವೇಳೆ ಆಗುವ ತೊಂದರೆ ತಪ್ಪಿಸಿಕೊಳ್ಳಬೇಕು ಎಂದು ಜಲಮಂಡಳಿ ತಾಕೀತು ಮಾಡಿದೆ.

ನಗರದಲ್ಲಿ 12 ಸಾವಿರ ಅಪಾರ್ಟ್‌ಮೆಂಟ್‌ಗಳಲ್ಲಿ ಸುಮಾರು 15 ಲಕ್ಷ ಮಂದಿ ನಿವಾಸಿಗಳಿರುವ ಅಂದಾಜಿದೆ. ಇದರಲ್ಲಿ ನಾಲ್ಕು ಸಾವಿರ ಅಪಾರ್ಟ್‌ಮೆಂಟ್‌ಗಳಲ್ಲಿ ನೀರಿನ ಸಂಪರ್ಕ ಇಲ್ಲ ಎಂದು ಜಲಮಂಡಳಿ ಮೂಲಗಳು ತಿಳಿಸಿವೆ.

‘ಎರಡು ವರ್ಷದ ಹಿಂದೆ ಬೇಸಿಗೆ ವೇಳೆ ಹಲವು ಅಪಾರ್ಟ್‌ಮೆಂಟ್‌ಗಳಿಂದ ಕಾವೇರಿ ನೀರಿಗೆ ಹೆಚ್ಚಿನ ಬೇಡಿಕೆ ಬಂದಿತ್ತು. ಪರಿಶೀಲನೆ ಮಾಡಿದಾಗ ಕೆಲವರು ಸಂಪರ್ಕ ಪಡೆಯದಿರುವುದು ತಿಳಿದುಬಂದಿತ್ತು. ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ಗಳ ಮೂಲಕ ನೀರಿನ ಸಂಪರ್ಕದ ಚಟುವಟಿಕೆ ಚುರುಕುಗೊಳಿಸಿದ್ದೇವೆ. ಈ ಬೇಸಿಗೆಯಲ್ಲಿ ಸಮಸ್ಯೆ ಆಗುವುದನ್ನು ತಪ್ಪಿಸಲು ಈಗಲೇ ಸಂಪರ್ಕ ಪಡೆಯಿರಿ ಎಂಬ ಸೂಚನೆಯನ್ನು ಅಪಾರ್ಟ್‌ಮೆಂಟ್ ನಿವಾಸಿಗಳಿಗೆ ನೀಡಲಾಗುತ್ತಿದೆ’ ಎಂದು ಜಲಮಂಡಳಿ ಹಿರಿಯ ಅಧಿಕಾರಿ ತಿಳಿಸಿದರು.

ಶಾಸಕರ ಭವನದ ಆವರಣದಲ್ಲಿ ಗಂಧದ ಮರ ಕಡಿದ ರೈತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿಯ ಭೂಸ್ವಾಧೀನಕ್ಕೆ ಬದಲಾಗಿ ಸೂಕ್ತ ಪರಿಹಾರ ನೀಡಿಲ್ಲ ಎಂದು ಆರೋಪಿಸಿ ಚಿಕ್ಕಮಗಳೂರು ಜಿಲ್ಲೆಯ ರೈತ ವಿಶುಕುಮಾರ್ ಅವರು ಶಾಸಕರ ಭವನದ ಆವರಣದಲ್ಲಿರುವ ಶ್ರೀಗಂಧದ ಮರ ಕಡಿದು ಮಂಗಳವಾರ ಪ್ರತಿಭಟಿಸಿದರು.

ವಿಧಾನಸೌಧ ಠಾಣೆ ಪೊಲೀಸರು, ವಿಶುಕುಮಾರ್ ಅವರನ್ನು ಬಂಧಿಸಿದರು. ಬಳಿಕ ಠಾಣಾ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಚಿಕ್ಕಮಗಳೂರು ಜಿಲ್ಲೆಯ ಹೆಳಿಯೂರು ಗ್ರಾಮದಲ್ಲಿ ಭೂಸ್ವಾಧೀನ ಮಾಡಲಾದ ಭೂಮಿಯ ಪೈಕಿ 300 ಮೀಟರ್ ಭೂಮಿಯಲ್ಲಿ ಮೂರು ಸಾವಿರ ಶ್ರೀಗಂಧ ಮರಗಳಿವೆ. ಆ ಮರಗಳಿಗೆ ಸರ್ಕಾರ ತಲಾ ₹420 ಪರಿಹಾರ ನಿಗದಿ ಮಾಡಿದೆ.

ಆದರೆ, ಈ ಪರಿಹಾರ ಸಾಲುವುದಿಲ್ಲ ಎಂದು ರೈತರು ಪ್ರತಿಭಟಿಸುತ್ತಿದ್ದಾರೆ. ಅದರ ನಡುವೆಯೇ ಅಧಿಕಾರಿಗಳು ಸುಮಾರು 30 ಶ್ರೀಗಂಧ ಮರಗಳನ್ನು ಕಡಿದಿದ್ದಾರೆ ಎಂದು ರೈತ ವಿಶುಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ನನ್ನ ಮಕ್ಕಳ ಜನುಮದಿನದ ನೆನಪಿಗಾಗಿ ಗಿಡ ನೆಟ್ಟಿದ್ದೆ. ಹೆದ್ದಾರಿ ಪಕ್ಕ ಇದೆ ಎಂದು ಮರವನ್ನು ಕಡಿದು ಹಾಕಿದ್ದಾರೆ. ನ್ಯಾಯಾಲಯ ಪರಿಹಾರ ನೀಡುವಂತೆ ಆದೇಶಿಸಿದರೂ ಅರಣ್ಯ ಇಲಾಖೆ ನೀಡಿಲ್ಲ. ನನ್ನ ಮರಗಳನ್ನು ಕಡಿದ ಅಧಿಕಾರಿಗಳಿಗೆ ಶಿಕ್ಷೆಯಾಗಬೇಕು’ ಎಂದು ಆಗ್ರಹಿಸಿದರು.

‘ಅಗ್ಗದ ತೈಲ ಖರೀದಿ ಮುಂದುವರಿಕೆ’

ನವದೆಹಲಿ (ಪಿಟಿಐ): ‘ಭೌಗೋಳಿಕ–ರಾಜಕೀಯ ಪರಿಸ್ಥಿತಿ ಗಮನದಲ್ಲಿಟ್ಟುಕೊಂಡು, ಭಾರತವು ಬೇರೆ ದೇಶಗಳಿಂದ ಅಗ್ಗದ ಹಾಗೂ ಉತ್ತಮ ಗುಣಮಟ್ಟದ ಕಚ್ಚಾತೈಲ ಖರೀದಿಸುವುದನ್ನು ಮುಂದುವರಿಸಲಿದೆ’ ಎಂದು ಸಂಸದೀಯ ಸಮಿತಿಯ ಮುಂದೆ ಸರ್ಕಾರ ತಿಳಿಸಿದೆ.

ಕಾಂಗ್ರೆಸ್ ಸಂಸದ ಶಶಿ ತರೂರ್ ನೇತೃತ್ವದ ವಿದೇಶಾಂಗ ವ್ಯವಹಾರಗಳ ಸಂಸದೀಯ ಸಮಿತಿಯ ಮುಂದೆ ವಿದೇಶಾಂಗ ವ್ಯವಹಾರಗಳು ಹಾಗೂ ವಾಣಿಜ್ಯ ಇಲಾಖೆಯ ಅಧಿಕಾರಿಗಳು ಈ ಮಾಹಿತಿ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಂ.ದಕ್ಷಿಣ ವಿಧಾನಸಭಾ ಕ್ಷೇತ್ರದ ಪ್ರದೇಶಗಳು ಬೊಮ್ಮನಹಳ್ಳಿ ಕ್ಷೇತ್ರಕ್ಕೆ ಸೇರ್ಪಡೆ

ವಾರ್ಡ್ ಸೇರ್ಪಡೆ: ನೋಟಿಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ವ್ಯಾಪ್ತಿಯ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಕೆಲವು ವಾರ್ಡ್ ಪ್ರದೇಶಗಳನ್ನು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರ್ಪಡೆ ಮಾಡಿರುವುದನ್ನು ಆಕ್ಷೇಪಿಸಿ ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಕುರಿತ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಎ.ಮಿಥುನ್ ವಾದ ಆಲಿಸಿದ ನ್ಯಾಯಪೀಠ, ‘ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳ ಕೆಲ ಪ್ರದೇಶಗಳನ್ನು ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್‌ಗಳಿಗೆ ಸೇರಿಸಲಾಗಿದೆಯೇ ಎಂಬ ಬಗ್ಗೆ ಸ್ಪಷ್ಟನೆ ನೀಡಿ’ ಎಂದು ಸರ್ಕಾರದ ವಕೀಲರಿಗೆ ನಿರ್ದೇಶಿಸಿತು.

ಅಂತೆಯೇ, ರಾಜ್ಯ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಜಿಬಿಎ ಮುಖ್ಯ ಆಯುಕ್ತ, ರಾಜ್ಯ ಮುಖ್ಯ ಚುನಾವಣಾಧಿಕಾರಿ, ರಾಜ್ಯ ಚುನಾವಣಾ ಆಯೋಗ ಸೇರಿದಂತೆ ಎಲ್ಲ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ನ್ಯಾಯ ಪೀಠ ವಿಚಾರಣೆಯನ್ನು ಫೆಬ್ರುವರಿ 18ಕ್ಕೆ ಮುಂದೂಡಿತು.

ಆಕ್ಷೇಪ ಏನು?: ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲೇನಹಳ್ಳಿ ವಾರ್ಡ್‌ನ ಅಕ್ಷಯನಗರ ಹಾಗೂ ಅದರ ಸುತ್ತಲಿನ ಪ್ರದೇಶಗಳನ್ನು ಮತ್ತು ಕೊತ್ತನೂರು ವಾರ್ಡ್‌ನ ಕ್ಲಾಸಿಕ್ ಆರ್ಚರ್ಡ್ ಪ್ರದೇಶವನ್ನು ಕ್ರಮವಾಗಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವಿಜಯಾ ಬ್ಯಾಂಕ್ ಲೇ ಔಟ್ ವಾರ್ಡ್ ಮತ್ತು ದೊರೆಸಾನಿ ಪಾಳ್ಯ ವಾರ್ಡ್‌ಗೆ ಸೇರ್ಪಡೆ ಮಾಡಿರುವುದನ್ನು ಆಕ್ಷೇಪಿಸಲಾಗಿದೆ.

‘ಒಂದು ವಾರ್ಡ್ ಅನ್ನು ಎರಡು ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಗೆ ಸೇರಿಸುವುದು ಜಿಬಿಎ ಕಾಯ್ದೆ ಮತ್ತು ವಾರ್ಡ್ ಮರುವಿಂಗಡಣೆ ಮಾರ್ಗಸೂಚಿಗಳಿಗೆ ವಿರುದ್ಧ. ಆದ್ದರಿಂದ ಎಲೇನಹಳ್ಳಿ ವಾರ್ಡ್‌ನ ಅಕ್ಷಯನಗರ ಹಾಗೂ ಅದರ ಸುತ್ತಲಿನ ಪ್ರದೇಶಗಳನ್ನು ಮತ್ತು ಕೊತ್ತನೂರು ವಾರ್ಡ್‌ನ ಕ್ಲಾಸಿಕ್ ಆರ್ಚರ್ಡ್ ಪ್ರದೇಶವನ್ನು ಕ್ರಮವಾಗಿ ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವಿಜಯಾ ಬ್ಯಾಂಕ್ ಲೇಔಟ್ ವಾರ್ಡ್ ಮತ್ತು ದೊರೆಸಾನಿ ಪಾಳ್ಯ ವಾರ್ಡ್‌ಗೆ ಸೇರ್ಪಡೆ ಮಾಡಿ ಹೊರಡಿಸಲಾಗಿರುವ ಅಧಿಸೂಚನೆ ರದ್ದುಪಡಿಸಬೇಕು. ಬೊಮ್ಮನಹಳ್ಳಿ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳಿಗೆ ಸೇರಿಸಿರುವ ಪ್ರದೇಶಗಳನ್ನು ಬೆಂಗಳೂರು ದಕ್ಷಿಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ವಾರ್ಡ್‌ಗಳಿಗೆ ಮರು ಸೇರ್ಪಡೆ ಮಾಡಲು ಆದೇಶಿಸಬೇಕು’ ಎಂದು ಅರ್ಜಿದಾರರು ಮನವಿ ಮಾಡಿದ್ದಾರೆ.

ಪ್ರದೂಷ್ ಅರ್ಜಿ: ಆರೋಪ ಕೈಬಿಡಲು ನಕಾರ



ಬೆಂಗಳೂರು: ‘ನಿಮ್ಮ ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿರುವಾಗ ದೋಷಾರೋಪಗಳಿಂದ ಕೈಬಿಡಬೇಕು ಎಂದು ಹೇಗೆ ತಾನೇ ಕೋರುತ್ತೀರಿ’ ಎಂದು ಹೈಕೋರ್ಟ್, ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಆರೋಪಿಗೆ ಪ್ರಶ್ನಿಸಿದೆ.

‘ಈ ಪ್ರಕರಣದಲ್ಲಿ ಪೊಲೀಸರು ನನ್ನ ವಿರುದ್ಧ ಹೊರಿಸಿರುವ, ಕೊಲೆ ಮತ್ತು ಕೊಲೆ ಅಪರಾಧದ ಜಂಟಿ ಹೊಣೆಗಾರಿಕೆ ಆರೋಪಗಳಿಂದ ಕೈಬಿಡಲು ವಿಚಾರಣಾ ಕೋರ್ಟ್‌ಗೆ ನಿರ್ದೇಶಿಸಬೇಕು’ ಎಂದು ಕೋರಿ 14ನೇ ಆರೋಪಿ ಪ್ರದೂಷ್ ಎಸ್.ರಾವ್ ಅಲಿಯಾಸ್ ಪ್ರದೂಷ್ ಸಲ್ಲಿಸಿದ್ದ ಕ್ರಿಮಿನಲ್ ಪುನರ್ ಪರಿಶೀಲನಾ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಪ್ರದೂಷ್ ಪರ ಪದಾಂಕಿತ ಹಿರಿಯ ವಕೀಲ ಕೆ.ದಿವಾಕರ ಅವರು, ‘ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಜನವರಿ ತಿಂಗಳಿಂದಲೇ ಸಂಚು ರೂಪಿಸಲಾಗಿತ್ತು ಎಂದು ದೋಷಾರೋಪ ಪಟ್ಟಿಯಲ್ಲಿ ವಿವರಿಸಲಾಗಿದೆ. ಆ ದಿನಗಳಲ್ಲಿ ಅರ್ಜಿದಾರರದ್ದು ಯಾವುದೇ ಪಾತ್ರವಿಲ್ಲ. ಘಟನೆಯ ಅಂತಿಮ ಭಾಗದಲ್ಲಿ ಅವರು ಇದ್ದರು ಮತ್ತು ₹30 ಲಕ್ಷ ಮೊತ್ತವನ್ನು ದರ್ಶನ್ ಕಡೆಯಿಂದ ಪಡೆದು ಬೇರೆಯವರಿಗೆ ವರ್ಗಾಯಿಸಿದ್ದರು ಎಂದು ಆರೋಪಿಸಲಾಗಿದೆ. ಹಾಗಾಗಿ, ಅರ್ಜಿದಾರರ ವಿರುದ್ಧದ ದೋಷಾರೋಪಗಳನ್ನು ಪೂರ್ಣವಾಗಿ ಕೈಬಿಡದಿದ್ದರೂ ಅಲ್ಪಮಟ್ಟಿಗೆ ಸಡಿಲಿಸಬೇಕು’ ಎಂದು ಕೋರಿದರು.

ಇದಕ್ಕೆ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, ‘ಪ್ರದೂಷ್ ಇತರೆ ಆರೋಪಿಗಳಿಗೆ ಪ್ರಚೋದನೆ ನೀಡಿದ್ದಾರೆ. ಸುಪ್ರೀಂ ಕೋರ್ಟ್ ಇವರ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆ’ ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದಕ್ಕೆ ನ್ಯಾಯಪೀಠ, ‘ಸುಪ್ರೀಂ ಕೋರ್ಟ್ ನಿಮ್ಮ ಜಾಮೀನು ಅರ್ಜಿಯನ್ನು ತಿರಸ್ಕರಿಸಿದೆಯಲ್ಲವೇ? ಪ್ರಾಸಿಕ್ಯೂಷನ್ ಬಳಿ ಅರ್ಜಿದಾರರನ್ನು ವಿಚಾರಣೆಗೆ ಒಳಪಡಿಸುವಷ್ಟು ಪ್ರಮಾಣದ ಸಾಕ್ಷ್ಯಾಧಾರಗಳು ಇವೆಯಲ್ಲಾ? ಹಾಗಾಗಿ, ಈ ಕೋರ್ಟ್ ಅದಕ್ಕಿಂತಲೂ ಒಂದು ಪರ್ಸೆಂಟ್ ಕೂಡಾ ಹೆಚ್ಚು ಪರಿಶೀಲಿಸುವ ಗೋಜಿಗೆ ಹೋಗುವುದಿಲ್ಲ. ಆದ್ದರಿಂದ, ಅರ್ಜಿ ವಾಪಸು ಪಡೆಯುವುದು ಒಳಿತು. ಇಲ್ಲವೇ ವಜಾಗೊಳಿಸಲಾವುದು’ ಎಂದು ಅರ್ಜಿದಾರರ ಪರ ವಕೀಲರಿಗೆ ಸೂಚಿಸಿತು.

ನಿಧನ ವಾರ್ತೆ

ಪಿ. ರಾಮಯ್ಯ



ಬೆಂಗಳೂರು: ವಿಧಾನ ಪರಿಷತ್ ಮಾಜಿ ಸದಸ್ಯ ಪತ್ರಕರ್ತ ಪಿ. ರಾಮಯ್ಯ (93) ಅವರು ಮಂಗಳವಾರ ನಿಧನರಾದರು. ಅವರಿಗೆ ಇಬ್ಬರು ಪುತ್ರರು, ಒಬ್ಬ ಪುತ್ರಿ ಇದ್ದಾರೆ. ಬೆಂಗಳೂರಿನ ಮಲ್ಲಿಗೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ರಾಮಯ್ಯ ಅವರು ವಿವಿಧ ಅಂಗಾಂಗ ವೈಫಲ್ಯದಿಂದ ಮಂಗಳವಾರ ರಾತ್ರಿ 9ಕ್ಕೆ ನಿಧನರಾದರು ಎಂದು ಅವರ ಪುತ್ರ ಡಾ. ಬಾಲಾಜಿ ತಿಳಿಸಿದರು.

‘ದಿ ಹಿಂದೂ’ ಪತ್ರಿಕೆಯಲ್ಲಿ ಐದು ದಶಕ, ವಿವಿಧ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಮಾಧ್ಯಮ ಅಕಾಡೆಮಿ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ ಪಡೆದಿದ್ದ ರಾಮಯ್ಯ ಅವರು, ಪತ್ರಿಕಾ ಅಕಾಡೆಮಿ ಸದಸ್ಯರಾಗಿದ್ದರು. ಸಣ್ಣ ಪತ್ರಿಕೆಗಳ ಸಮಸ್ಯೆಗಳ ಅಧ್ಯಯನಕ್ಕಾಗಿ ರಚಿಸಲಾಗಿದ್ದ ಸಮಿತಿಯ ಅಧ್ಯಕ್ಷರಾಗಿದ್ದರು. ಸದಾಶಿವನಗರ ಕ್ಲಬ್ ಸಮೀಪವಿರುವ 295/12/1 ಮನೆಯಲ್ಲಿ ಪಾರ್ಥಿವ ಶರೀರವನ್ನು ಬುಧವಾರ ಬೆಳಿಗ್ಗೆಯಿಂದ ದರ್ಶನಕ್ಕೆ ಇಡಲಾಗುತ್ತದೆ ಎಂದು ಡಾ. ಬಾಲಾಜಿ ತಿಳಿಸಿದ್ದಾರೆ.

ಸಿ. ಚಿಕ್ಕಣ್ಣ



ಬೆಂಗಳೂರು: ವಿಜಯನಗರದ ಎಂ.ಸಿ. ಬಡಾವಣೆಯ ನಿವಾಸಿ ಹಾಗೂ ನಿವೃತ್ತ ಐಎಎಸ್ ಅಧಿಕಾರಿ ಸಿ. ಚಿಕ್ಕಣ್ಣ (83) ಮಂಗಳವಾರ ನಿಧನರಾದರು. ಅವರಿಗೆ ಪತ್ನಿ ಇದ್ದಾರೆ. ತುಮಕೂರಿನ ಮಧುಗಿರಿ ತಾಲ್ಲೂಕಿನ ತಿಪ್ಪನಹಳ್ಳಿ ಗ್ರಾಮದಲ್ಲಿ ಬುಧವಾರ ಮೃತರ ಅಂತ್ಯಸಂಸ್ಕಾರ ನಡೆಯಲಿದೆ.

ಎಚ್. ಲಿಂಗಪ್ಪಗೆ ಕಾಯಕ ಶರಣಶ್ರೀ ಪ್ರಶಸ್ತಿ ಪ್ರದಾನ

‘ಶರಣರು ಜಾತಿಗೆ ಸೀಮಿತರಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮಹನೀಯರು ಹಾಗೂ ಶರಣರ ಜಯಂತಿಗಳನ್ನು ಜಾತಿಗಳ ನಡುವೆ ಹಂಚಿಕೊಂಡಿರುವುದು ಸರಿಯಲ್ಲ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ್ ಎಸ್. ತಂಗಡಗಿ ವಿಷಾದ ವ್ಯಕ್ತಪಡಿಸಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವೀಂದ್ರ ಕಲಾಕ್ಷೇತ್ರದಲ್ಲಿ ಮಂಗಳವಾರ ನಡೆದ ಕಾಯಕ ಶರಣರ ಜಯಂತಿಯಲ್ಲಿ ಎಚ್. ಲಿಂಗಪ್ಪ ಅವರಿಗೆ ಕಾಯಕ ಶರಣಶ್ರೀ ಪ್ರಶಸ್ತಿ ಪ್ರದಾನ ಮಾಡಿ ಅವರು ಮಾತನಾಡಿದರು.


‘ಲಿಂಗಪ್ಪ ಅವರನ್ನು 'ಕಾಯಕ ಶರಣಶ್ರೀ' ಪ್ರಶಸ್ತಿಗೆ ಆಯ್ಕೆ ಮಾಡಿದ್ದಕ್ಕೆ, ನಮ್ಮ ಸಮಾಜದವರಿಗೆ ಪ್ರಶಸ್ತಿ ನೀಡಬೇಕಿತ್ತು ಎಂದು ಮುಖಂಡೊಬ್ಬರು ಕರೆ ಮಾಡಿದ್ದರು. ಕಳೆದ ಬಾರಿ ಕನಕಶ್ರೀ ಪ್ರಶಸ್ತಿಯನ್ನು ಬ್ರಾಹ್ಮಣ ಸಮುದಾಯದ, ಸಮ- ಸಮಾಜದ ಬಗ್ಗೆ ಒಲವು ಹೊಂದಿದ್ದವರಿಗೆ ನೀಡಿದ್ದೆವು. ಇಲ್ಲಿ ಯಾವುದೇ ಜಾತಿಗಿಂತ ಅವರ ತತ್ವ ಸಿದ್ಧಾಂತ ಮುಖ್ಯ’ ಎಂದು ತಿಳಿಸಿದರು.

‘ಪ್ರತಿ ಸಮಾಜದಲ್ಲಿ ಸಣ್ಣಪುಟ್ಟ ವ್ಯತ್ಯಾಸಗಳಿರುತ್ತವೆ. ಅದೆಲ್ಲವನ್ನು ಪಕ್ಕಕ್ಕಿಟ್ಟು ಮುನ್ನಡೆದಾಗ ಸಮಾಜಕ್ಕೆ ಒಳಿತಾಗುತ್ತದೆ. ಒಗ್ಗಟ್ಟಿನಿಂದ ಆಯಾ ಸಮುದಾಯಗಳು ಗಟ್ಟಿಯಾಗುತ್ತವೆ’ ಎಂದು ತಿಳಿಸಿದರು.

ಅಬಕಾರಿ ಇಲಾಖೆ ಸಚಿವ ಆರ್. ಬಿ.ತಿಮ್ಮಾಪುರ, ರಾಜ್ಯಸಭಾ ಮಾಜಿ ಸಂಸದ ಎಲ್.ಹನುಮಂತಯ್ಯ, ಅಖಿಲ ಕರ್ನಾಟಕ ಡೋಹರ ಕಕ್ಕಯ್ಯ ಸಮಾಜದ ಅಧ್ಯಕ್ಷ ಸಂತೋಷ್ ಸುರೇಂದ್ರ ಸವಣೂರು, ಮಾದಿಗ ಸಮುದಾಯದ ಎಂ.ಗುರುಮೂರ್ತಿ, ಆದಿಜಾಂಬವ ಸಮಾಜದ ಸಿದ್ದರಾಜು, ಇಲಾಖಾ ಕಾರ್ಯದರ್ಶಿ ಜೆ.ಮಂಜುನಾಥ್, ನಿರ್ದೇಶಕಿ ಕೆ.ಎಂ. ಗಾಯಿತ್ರಿ ಉಪಸ್ಥಿತರಿದ್ದರು.



ಪ್ರೊ. ಎಚ್. ಲಿಂಗಪ್ಪ ಅವರಿಗೆ 'ಕಾಯಕ ಶರಣಶ್ರೀ' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ. ಮಂಜುನಾಥ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ಎಸ್. ತಂಗಡಗಿ, ಮಹಾ ಶಿವಶರಣ ಹರಳಯ್ಯ ಗುರುಪೀಠದ ಬಸವಹರಳಯ್ಯ ಸ್ವಾಮಿಜಿ ಮತ್ತು ಸಾಹಿತಿ ಎಲ್. ಹನುಮಂತಯ್ಯ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ



ವಿವಾದದಲ್ಲಿ ಹುಟ್ಟಿದ ಆ್ಯಕ್ಷನ್ ಎಐ

2026 ಬಾಟ್‌ಗಳಿಗೆ ಹೊಸ ಯುಗ. ಒಂದು ಎಐ ಇನ್ನೊಂದು ಎಐ ಜೊತೆಗೆ ಮಾತುಕತೆ ನಡೆಸಿ ಸಮಸ್ಯೆಗಳನ್ನು ಪರಿಹರಿಸುತ್ತವೆ. ಇದು ವಿಜ್ಞಾನದ ಕಟ್ಟುಕತೆಯಂತೆ ಕಂಡರೂ, ಅದುವೇ ವಾಸ್ತವ.

• ಕೃಷ್ಣಭಟ್

ತಂತ್ರಜ್ಞಾನಲೋಕ 2026ರ ಆರಂಭದಲ್ಲಿ ಒಂದು ಅದ್ಭುತ ಆವಿಷ್ಕಾರಕ್ಕೆ ಸಾಕ್ಷಿಯಾಯಿತು. ಇದನ್ನು ಅನೇಕರು 'ಹೊಸ ಕಾಲದ ಸಿರಿ' ಎಂದೂ ಕರೆಯುತ್ತಿದ್ದಾರೆ. ಮೊದಲು 'ಕ್ಲಾಡ್‌ಬಾಟ್' (Clawdbot) ಎಂಬ ಹೆಸರಿನಲ್ಲಿ ಉದ್ಭವವಾದ ಒಂದು ಪ್ರಾಜೆಕ್ಟ್, ನಂತರ 'ಮೋಲ್ಟ್‌ಬಾಟ್' (Moltbot) ಆಗಿ ಬದಲಾಯಿತು. ಇದು ಈಗ ನಾವೆಲ್ಲ ಬಳಸುತ್ತಿರುವ ಬರಿ ಮಾತನಾಡಬಲ್ಲ ಚಾಟ್‌ಬಾಟ್ ಅಲ್ಲ; ನಾವು ಹೇಳಿದ ಕೆಲಸಗಳನ್ನು ಮಾಡುವ 'ಏಜೆಂಟಿಕ್ ಎಐ'.

ಕೈಕಾಲುಗಳಿರುವ 'ಎಐ'

ಸಾಮಾನ್ಯ ಜನರಿಗೆ ಈ ಎಐ ಹೇಗಿದೆ ಎಂದು ಹೇಳುವುದಾದರೆ, ನಾವು ಈಗ 'ಜಿಪಿಎಸ್' ಬಳಸುತ್ತಿದ್ದೆವು, ಇದು ನಮಗೆ 'ಸ್ವಯಂಚಾಲಿತ ಕಾರು' ಕೊಟ್ಟಿದೆ. ಜಿಪಿಎಸ್ ನಿಮಗೆ ದಾರಿ ತೋರಿಸುತ್ತದೆ, ಆದರೆ ಸ್ವಯಂಚಾಲಿತ ಕಾರು ನಿಮ್ಮನ್ನು ಬೇಕಾದಲ್ಲಿಗೆ ಕರೆದೊಯ್ಯುತ್ತದೆ.

ಹಳೆಯ ಎಐಗಳಿಗೆ ನೀವು 'ಕೆಲಸಗಳ ಪಟ್ಟಿ ಮಾಡಿಕೊಡಪ್ಪಾ' ಎಂದು ಕೇಳುತ್ತಿದ್ದಿರಿ. ಆದರೆ, ಮೋಲ್ಟ್‌ಬಾಟ್ ನಿಮ್ಮ ಕೆಲಸದ ಪಟ್ಟಿ ನೋಡಿಕೊಂಡು ತಾನೇ ಕೆಲಸವನ್ನು ಮಾಡುತ್ತದೆ. ಇದು ನಿಮ್ಮ ಕಂಪ್ಯೂಟರ್‌ನ ಸ್ಕ್ರೀನ್ ನೋಡಬಲ್ಲದು, ಮೌಸ್ ಅನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತೆಗೆದುಕೊಂಡು ಹೋಗಬಲ್ಲದು. ಟೈಪ್ ಕೂಡ ಮಾಡಬಲ್ಲದು.

ಮುನ್ನೆಚ್ಚರಿಕೆಗಳು

ಮೋಲ್ಟ್‌ಬಾಟ್ ಕೇವಲ ಸಾಫ್ಟ್‌ವೇರ್ ಅಲ್ಲ, ಇದು ನಿಮ್ಮ ಕಂಪ್ಯೂಟರ್‌ನ 'ಡಿಜಿಟಲ್ ಕೀಲಿ ಕೈ'. ಹ್ಯಾಕರ್‌ಗಳು ಹಳೆಯ ಹೆಸರನ್ನು ಬಳಸಿಕೊಂಡು ಮಾಡಿದ ದಾಳಿಯಿಂದ ಪಾರಾಗಲು ಈಗ 'ಸ್ಯಾಂಡ್‌ಬಾಕ್ಸಿಂಗ್' ತಂತ್ರಜ್ಞಾನವನ್ನು ಬಳಸಲಾಗುತ್ತಿದೆ. ಎಂದರೆ, ಈ ಎಐ ಕೆಲಸ ಮಾಡುವಾಗ ನಿಮ್ಮ ಕಂಪ್ಯೂಟರ್‌ನ ವೈಯಕ್ತಿಕ ಫೈಲ್‌ಗಳಿಗೆ ನೇರ ಆಕ್ಸೆಸ್ ಸಿಗದಂತೆ ಒಂದು ಸುರಕ್ಷಿತ ವಲಯವನ್ನು ನಿರ್ಮಿಸಲಾಗುತ್ತದೆ. ಬಳಕೆದಾರರು ಯಾವುದೇ ಕಮಾಂಡ್ ನೀಡುವ ಮೊದಲು ಯೋಚನೆ ಮಾಡಿ ಅನುಮತಿಯನ್ನು ಕೊಡುವ ಮೋಡ್ ಆನ್ ಮಾಡಿಕೊಳ್ಳುವುದು ಉತ್ತಮ. ಇದರಿಂದ ಪ್ರತಿ ಬಾರಿ ಬಾಟ್ ಮೌಸ್ ಓಡಾಡುವಾಗಲೂ ನಿಮ್ಮ ಅನುಮತಿ ಕೇಳುತ್ತದೆ.

ಕೆಲವು ಉದಾಹರಣೆಗಳು

ಇಮೇಲ್ ಡಿಲೀಟ್ ಮಾಡುವುದು: ಒಬ್ಬ ಬಳಕೆದಾರ ತನ್ನ 75,000 ಹಳೆಯ ಇಮೇಲ್‌ಗಳನ್ನು ಡಿಲೀಟ್ ಮಾಡು ಎಂದು ಹೇಳಿದ. ಈ ಬಾಟ್ ಕೇವಲ ಐದೇ ನಿಮಿಷದಲ್ಲಿ ಆ ಎಲ್ಲಾ ಇಮೇಲ್‌ಗಳನ್ನು ಆರಿಸಿ ಡಿಲೀಟ್ ಮಾಡಿತು.

ಚೌಕಾಶಿ ಮಾಡುವ ಸಹಾಯಕ: ಕಾರು ಖರೀದಿಸುವಾಗ ಒಬ್ಬ ಗ್ರಾಹಕನಿಗೆ ಈ ಬಾಟ್ ಸಹಾಯ ಮಾಡಿತು ಎಂದಾದರೆ, ಬೇರೆ ಬೇರೆ ಡೀಲರ್‌ಗಳಿಗೆ ಇಮೇಲ್ ಕಳುಹಿಸಿ, ಅವರ ಜೊತೆಗೆ ದರದ ಬಗ್ಗೆ ಚರ್ಚೆ ಮಾಡಿ, ಮಾಲೀಕನಿಗೆ ಲಕ್ಷಗಟ್ಟಲೆ ಹಣ ಉಳಿಸಿಕೊಡಬಲ್ಲದು!

ಅಡುಗೆಯ ಆರ್ಡರ್: ನೀವು ನಿದ್ರೆಯಿಂದ ಎದ್ದ ತಕ್ಷಣವೇ ನಿಮ್ಮ ನಿದ್ದೆಯ ಡೇಟಾವನ್ನು ಗಮನಿಸಿ, ನಿಮಗೆ ಬೇಕಾದ ಕಾಫಿ ಅಥವಾ ತಿಂಡಿಯನ್ನು ಆರ್ಡರ್ ಮಾಡುವ ಸಾಮರ್ಥ್ಯ ಇದಕ್ಕಿದೆ!

'ಕ್ಲಾಡ್‌ಬಾಟ್ ಸಮಸ್ಯೆ': ಹ್ಯಾಕರ್‌ಗಳಿಗೆ ದಾರಿ ಮಾಡಿಕೊಟ್ಟ ಹೆಸರು ಬದಲಾವಣೆ

ಈ ಆವಿಷ್ಕಾರವೇನೋ ಅದ್ಭುತವೇ! ಆದರೆ, ಇದರಿಂದ ಏನು ಆಗಬಹುದು ಎಂದು ಜನರು ಹೆದರಿದ್ದರೋ ಆ ಸಮಸ್ಯೆ ಸ್ವತಃ ಇದಕ್ಕೆ ಮತ್ತು ಇದರ ಮಾಲೀಕರಿಗೇ ಎದುರಾಯಿತು! ಒಂದು ಕಾನೂನು ಸಮಸ್ಯೆಯಿಂದಾಗಿ ಇದರ ಹೆಸರು ಬದಲಾಯಿಸಬೇಕಾಗಿ ಬಂತು. 'ಕ್ಲಾಡ್‌ಬಾಟ್' ಎನ್ನುವ ಹೆಸರು 'ಆಂಥ್ರೋಪಿಕ್' ಕಂಪನಿಯ 'ಕ್ಲಾಡ್' (Claude) ಹೆಸರಿಗೆ ಹೋಲುತ್ತಿತ್ತು. ಹಾಗಾಗಿ, ಕ್ಲಾಡ್ ಕಂಪನಿ ಆಕ್ಷೇಪ ಎತ್ತಿತು. ಹೀಗಾಗಿ ಇದಕ್ಕೆ 'ಮೋಲ್ಟ್‌ಬಾಟ್' ಎಂದು ಮರುನಾಮಕರಣ ಮಾಡಲಾಯಿತು.

ಆದರೆ ಈ ಹೆಸರು ಬದಲಾಗುವ ಸಮಯದಲ್ಲಿ ಒಂದು ದೊಡ್ಡ ಅಪಾಯ ಮೈತಳೆಯಿತು. ಹಳೆಯ ಹೆಸರನ್ನು ಬಿಟ್ಟು ಹೊಸ ಹೆಸರಿಗೆ ಬದಲಾಗುವ ಆ ಕೆಲವು ಗಂಟೆಗಳಲ್ಲಿ, ಹ್ಯಾಕರ್‌ಗಳು 'ಕ್ಲಾಡ್‌ಬಾಟ್' ಹೆಸರಿನ ನಕಲಿ ವೆಬ್‌ಸೈಟ್‌ಗಳನ್ನು ಸೃಷ್ಟಿಸಿದರು. ಹೆಸರು ಬದಲಾದ ಮಾಹಿತಿ ತಿಳಿಯದ ಬಳಕೆದಾರರು ಈ ನಕಲಿ ಬಾಟ್ ಅನ್ನೇ ಡೌನ್‌ಲೋಡ್ ಮಾಡಿಕೊಂಡರು. ಇದು ಜನರ ಪಾಸ್‌ವರ್ಡ್ ಮತ್ತು ಬ್ಯಾಂಕ್ ವಿವರಗಳನ್ನು ಕದಿಯುವ 'ಡಿಜಿಟಲ್ ಕಳ್ಳ' ಆಗಿತ್ತು.

ಇದು ನಮಗೆ ಏಕೆ ಮುಖ್ಯ?

ಮೋಲ್ಟ್‌ಬಾಟ್ ನಮ್ಮ ತಂತ್ರಜ್ಞಾನದ ಬಳಕೆಯನ್ನೇ ಬದಲಿಸಲಿದೆ. ಇದು ನಮ್ಮ ವಾಟ್ಸ್‌ಆ್ಯಪ್ ಅಥವಾ ಟೆಲಿಗ್ರಾಮ್ ಮೂಲಕವೂ ಕೆಲಸ ಮಾಡಬಲ್ಲದು. ನೀವು ಕಚೇರಿಯಲ್ಲಿದ್ದಾಗ ಮನೆಗೆ ಮೆಸೇಜ್ ಕಳುಹಿಸಿ, 'ಮೋಲ್ಟ್‌ಬಾಟ್, ನಾನು ಮನೆಯ ಓವನ್ ಆಫ್ ಮಾಡಿದ್ದೇನೆಯೇ ಎಂದು ನೋಡು', ಅಥವಾ 'ನನಗೆ ಬಂದಿರುವ ಉದ್ದದ ಇಮೇಲ್ ಸಾರಾಂಶ ಹೇಳು' ಎಂದು ಆದೇಶಿಸಬಹುದು.


ಆದರೆ ಈ 'ಮೋಲ್ಟ್‌ಬಾಟ್ ಸಮಸ್ಯೆ' ನಮಗೆ ಒಂದು ಪಾಠವನ್ನೂ ಕಲಿಸಿದೆ. 'ಅಧಿಕಾರದ ಜೊತೆಗೆ ಎಚ್ಚರಿಕೆಯೂ ಬೇಕು' ಎಂಬ ಪಾಠವನ್ನು ತನ್ನದೇ ಉದಾಹರಣೆಯ ಜೊತೆಗೆ ಕೊಟ್ಟಿದೆ. ನಿಮ್ಮ ಕಂಪ್ಯೂಟರ್‌ನ ಸಂಪೂರ್ಣ ನಿಯಂತ್ರಣವನ್ನು ಒಂದು ಎಐಗೆ ನೀಡುವಾಗ, ಅದು ಅಧಿಕೃತವಾದದ್ದೇ ಎಂದು ಖಚಿತಪಡಿಸಿಕೊಳ್ಳುವುದು ಮುಖ್ಯ.

ಭವಿಷ್ಯ: 2026ರ ಹೊಸ ಯುಗ

ಇಂದು ಈ ಬಾಟ್‌ಗಳು ತಮ್ಮದೇ ಸಾಮಾಜಿಕ ಜಾಲತಾಣವನ್ನು ಹೊಂದಿವೆ. ಅಲ್ಲಿ ಒಂದು ಎಐ ಇನ್ನೊಂದು ಎಐ ಜೊತೆಗೆ ಮಾತುಕತೆ ನಡೆಸಿ ಸಮಸ್ಯೆಗಳನ್ನು ಪರಿಹರಿಸುತ್ತವೆ. ಇದು ವಿಜ್ಞಾನದ ಕಟ್ಟುಕತೆಯಂತೆ ಕಂಡರೂ, ಇಂದಿನ ವಾಸ್ತವ.

ಮಾರುಕಟ್ಟೆಯ ಮೇಲೆ ಪ್ರಭಾವ

ಈ ಆವಿಷ್ಕಾರವು ಕೇವಲ ವ್ಯಕ್ತಿಗಳಿಗೆ ಮಾತ್ರವಲ್ಲದೆ, ಸಣ್ಣ ಉದ್ಯಮಗಳಿಗೂ ವರದಾನವಾಗಿದೆ. ಉದಾಹರಣೆಗೆ, ಒಬ್ಬ ಸಾಮಾನ್ಯ ವ್ಯಾಪಾರಿ ತನ್ನ ಅಕೌಂಟಿಂಗ್ ಕೆಲಸಗಳನ್ನು ಮಾಡಲು ಅಥವಾ ಕಂಪನಿಗಳು ತಮ್ಮ ಗ್ರಾಹಕರ ಆರ್ಡರ್ ಮತ್ತು ಇನ್ವೆಂಟರಿಯನ್ನು ನಿರ್ವಹಿಸಲು ಈ ಬಾಟ್ ಅನ್ನು ಬಳಸಬಹುದು. ಇದು ಮನುಷ್ಯರ ಕೆಲಸವನ್ನು ಕಿತ್ತುಕೊಳ್ಳುವ ಬದಲು, ಒಂದೇ ಕೆಲಸವನ್ನು ಮತ್ತೆ ಮಾಡುವಂಥ ಮತ್ತು ಬೇಸರದ ಕೆಲಸಗಳನ್ನು ತಾನು ಮಾಡಿ, ಹೊಸದಾಗಿ ಯೋಚನೆ ಮಾಡಲು ನಮಗೆ ಸಮಯ ನೀಡುತ್ತದೆ. 2026ರ ಕೊನೆಯ ಹೊತ್ತಿಗೆ, ಎಐ ಪ್ರಾಂಪ್ಟ್ ಎಂಜಿನಿಯರಿಂಗ್'ಗಿಂತಲೂ 'ಎಐ ಏಜೆಂಟ್ ಮ್ಯಾನೇಜ್‌ಮೆಂಟ್' ಕೌಶಲಕ್ಕೆ ಹೆಚ್ಚಿನ ಬೆಲೆ ಸಿಗುತ್ತಿದೆ. ಒಟ್ಟಿನಲ್ಲಿ, ಕೇವಲ ಮಾತನಾಡುವ ಎಐನ ಯುಗ ಮುಗಿದು, ಕೆಲಸ ಮಾಡುವ ಎಐ ಯುಗ ಆರಂಭವಾಗಿದೆ. ❖



ಡಿಎನ್‌ಎ ತಂತ್ರಜ್ಞಾನ ತನಿಖೆಗೆ ವರದಾನ

• ಶಶಿಕುಮಾರ್ ಎಲ್.

ಕೆಲವು ತಿಂಗಳ ಹಿಂದೆ ಆಂಧ್ರಪ್ರದೇಶದ ಕರ್ನೂಲ್‌ನಲ್ಲಿ ನಡೆದ ಬಸ್ ದುರಂತದಲ್ಲಿ 19 ಮಂದಿ ಅಸುನೀಗಿದ್ದರು. ಬೆಂಕಿಯ ಕೆನ್ನಾಲೆಗೆಗೆ ಸಿಕ್ಕಿ ಸುಟ್ಟು ಕರಕಲಾಗಿದ್ದ ಎಲ್ಲ ಮೃತದೇಹಗಳನ್ನು ಗುರುತಿಸಲು ಸಹಾಯಕವಾಗಿದ್ದು ಡಿಎನ್‌ಎ ಬೆರಳಚ್ಚು ತಂತ್ರಜ್ಞಾನ. ಹಾಗೆಯೇ ಅಹಮದಬಾದ್‌ನಲ್ಲಿ ಸಂಭವಿಸಿದ ಏರ್ ಇಂಡಿಯಾ ವಿಮಾನದ ಅಪಘಾತದಲ್ಲಿ ಸತ್ತ 260 ವ್ಯಕ್ತಿಗಳ ಗುರುತು ಪತ್ತೆ ಹಚ್ಚುವಲ್ಲಿಯೂ ನೆರವಾಗಿದ್ದು ಡಿಎನ್‌ಎ ಬೆರಳಚ್ಚು ಪರೀಕ್ಷೆ.

ಆಧುನಿಕ ವಿಧಿವಿಜ್ಞಾನದ ಪುರಾವೆಗಳ ಪ್ರಮುಖ ಸಾಧನ ಎಂದರೆ ಡಿಎನ್‌ಎ ಬೆರಳಚ್ಚು ತಂತ್ರಜ್ಞಾನ ಬಳಕೆ. 'ಡಿಆಕ್ಸಿ–ರೈಬೋ ನ್ಯೂಕ್ಲಿಕ್ ಆ್ಯಸಿಡ್' ಎಂಬುದರ ಸಂಕ್ಷಿಪ್ತ ರೂಪವೇ ಡಿಎನ್‌ಎ. ವಂಶವಾಹಿಯ ಮುಖ್ಯ ಭಾಗವಾಗಿರುವ ಡಿಎನ್‌ಎಯು ಏಣಿಯ ರೂಪದಲ್ಲಿರುತ್ತದೆ; ಜೀವಕೋಶದ ಕೇಂದ್ರಭಾಗವಾದ ನ್ಯೂಕ್ಲಿಯಸ್‌ನ ವರ್ಣತಂತುಗಳಲ್ಲಿ ಇರುತ್ತದೆ. ವ್ಯಕ್ತಿ ಅಥವಾ ಜೀವಿಗಳ ವಂಶಾವಳಿಯ ಮಾಹಿತಿಗಳನ್ನು ಇದು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುತ್ತದೆ.

'ಡಿಎನ್‌ಎ ಬೆರಳಚ್ಚು' ಅಥವಾ 'ಡಿಎನ್‌ಎ ಫಿಂಗರ್ ಪ್ರಿಂಟಿಂಗ್' ಎಂಬುದು ವ್ಯಕ್ತಿಯ ಡಿಎನ್‌ಎಯ ವಿಶಿಷ್ಟ ಮಾದರಿಯನ್ನು ಗುರುತಿಸುವ ತಂತ್ರಜ್ಞಾನ. ಇದು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುವ ಡಿಎನ್‌ಎ ಭಾಗಗಳನ್ನು ವಿಶ್ಲೇಷಿಸುತ್ತದೆ. ಪ್ರತಿಯೊಬ್ಬರ ಡಿಎನ್‌ಎ ಒಳಗೆ ಜೀನ್‌ಗಳ ನಡುವೆ ಪುನರಾವರ್ತಿತ ಸರಣಿಗಳು ಇರುತ್ತವೆ. ಇದನ್ನು 'ತಾಂಡೆಂ ಪುನರಾವರ್ತನೆಗಳು' (Tandem repeats) ಎನ್ನುತ್ತಾರೆ. ಈ ಪುನರಾವರ್ತನೆಯ ಅನುಕ್ರಮವು ವ್ಯಕ್ತಿಯಿಂದ ವ್ಯಕ್ತಿಗೆ ಬದಲಾಗುತ್ತದೆ. ಡಿಎನ್‌ಎ ಬೆರಳಚ್ಚು ತಂತ್ರಜ್ಞಾನವನ್ನು ಬಳಸಿಕೊಂಡು ಪ್ರತಿ ವ್ಯಕ್ತಿಗೆ ಸಂಬಂಧಿಸಿದ ಒಂದು ಅನನ್ಯ ಪುನರಾವರ್ತನೆಯ ಮಾದರಿಯನ್ನು ನಾವು ಕಂಡುಕೊಳ್ಳಬಹುದು. ಇದು ರಕ್ತಸಂಬಂಧಿಕರ ನಡುವಿನ ಡಿಎನ್‌ಎ ಅನುಕ್ರಮಗಳ ಜೊತೆ ಹೆಚ್ಚಿನ ಪ್ರಮಾಣದಲ್ಲಿ ಹೋಲುತ್ತವೆ. ಈ ಪರೀಕ್ಷೆ ಹಲವಾರು ಪ್ರಕರಣಗಳಲ್ಲಿ ವ್ಯಕ್ತಿಯ ಗುರುತನ್ನು ಖಚಿತಪಡಿಸಲು ಮತ್ತು ರಕ್ತಸಂಬಂಧಗಳನ್ನು ಸ್ಥಾಪಿಸಲು ಸಹಾಯ ಮಾಡುತ್ತದೆ.

ಅವಶ್ಯಕ ಮಾದರಿಗಳು

ಡಿಎನ್‌ಎ ಬೆರಳಚ್ಚು ವಿಧಾನದಲ್ಲಿ ಅಪರಾಧ ನಡೆದ ಸ್ಥಳದಲ್ಲಿ ದೊರಕುವ ಸಾಕ್ಷ್ಯಾಧಾರ ಮತ್ತು ಮಾದರಿಗಳಾದ ರಕ್ತ, ಕೂದಲು, ಬೆವರಿನ ಜೀವಕೋಶಗಳು, ಚರ್ಮ, ಮಾಂಸ, ಜೊಲ್ಲು, ಮೂತ್ರ, ವೀರ್ಯಾಣು, ಮೂಳೆ ಇತ್ಯಾದಿಗಳ ಡಿಎನ್‌ಎ ಮಾದರಿಯನ್ನು ವಿಶ್ಲೇಷಿಸಿ, ಅವುಗಳನ್ನು ಆಪಾದಿತರ ಡಿಎನ್‌ಎಯೊಂದಿಗೆ ಹೋಲಿಕೆ ಮಾಡುವ ಮೂಲಕ ನಿಜವಾದ ಅಪರಾಧಿಗಳನ್ನು ಬಹಳ ಸುಲಭವಾಗಿ ಹಾಗೂ ಶೀಘ್ರವಾಗಿ ಪತ್ತೆ ಹಚ್ಚಬಹುದಾಗಿದೆ.

ಬಗೆಹರಿಸಿದ ಪ್ರಮುಖ ಪ್ರಕರಣಗಳು

ಜ್ಞಾನಭಾರತಿ ಸಾಮೂಹಿಕ ಅತ್ಯಾಚಾರ ಪ್ರಕರಣ, ಭಾಸ್ಕರ್ ಶೆಟ್ಟಿ ಕೊಲೆ ಪ್ರಕರಣ, ಮೈಸೂರಿನ ಸಾಮೂಹಿಕ ಅತ್ಯಾಚಾರ ಪ್ರಕರಣ ಸೇರಿದಂತೆ ಹಲವು ಅತಿ ಸೂಕ್ಷ್ಮ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡುಹಿಡಿಯುವಲ್ಲಿ ಡಿಎನ್‌ಎ ಬೆರಳಚ್ಚು ಪರೀಕ್ಷೆಯು ಪೊಲೀಸ್ ಮತ್ತು ನ್ಯಾಯಾಂಗ ಇಲಾಖೆಗಳಿಗೆ ಸಹಾಯ ಮಾಡಿದೆ. ರಾಜೀವ್ ಗಾಂಧಿ ಕೊಲೆ ಪ್ರಕರಣ, ಮಧುಮಿತ ಮತ್ತು ಬೀನ್ ಪ್ರಕರಣಗಳಲ್ಲೂ ಈ ತಂತ್ರಜ್ಞಾನದಿಂದಲೇ ಅಪರಾಧಿಗಳನ್ನು ಪತ್ತೆಹಚ್ಚಲಾಗಿದೆ.

ಯಾವ ಯಾವ ಪ್ರಕರಣಗಳಲ್ಲಿ

ವ್ಯಕ್ತಿಯ ಗುರುತನ್ನು ಪತ್ತೆಹಚ್ಚಲು ಡಿಎನ್‌ಎ ಬೆರಳಚ್ಚು ಪರೀಕ್ಷೆಯು ಸಹಾಯ ಮಾಡುವುದಲ್ಲದೆ, ಆಸ್ಪತ್ರೆಯಲ್ಲಿ ಮಕ್ಕಳನ್ನು ಬದಲಾಯಿಸಿರುವುದನ್ನು ಕಂಡುಹಿಡಿಯಲು, ಪಿತೃತ್ವ/ಮಾತೃತ್ವ ಪರೀಕ್ಷೆಗೆ ಕೂಡ ಈ ವಿಧಾನವನ್ನು ಬಳಸಲಾಗುತ್ತದೆ. ಅತ್ಯಾಚಾರ, ಅಪಹರಣ, ಕೊಲೆ, ದರೋಡೆ, ಮಕ್ಕಳ ಮೇಲಿನ ಲೈಂಗಿಕ ಕಿರುಕುಳದಂತಹ ಅಪರಾಧ ಪ್ರಕರಣಗಳಲ್ಲಿ ಅಪರಾಧಿಗಳನ್ನು ಕಂಡುಹಿಡಿಯಲು, ಸುಟ್ಟ ಅಥವಾ ಅರೆಬೆಂದ ಮನುಷ್ಯನ ಗುರುತಿಸುವಿಕೆ ಕಾರ್ಯದಲ್ಲಿ, ಪ್ರವಾಹ, ಭೂಕಂಪದಂತ ಪ್ರಕೃತಿ ವಿಕೋಪಗಳು ಘಟಿಸಿದ ಸಂದರ್ಭದಲ್ಲಿ, ಇಷ್ಟೇ ಅಲ್ಲದೆ, ವಾಹನ ಅಪಘಾತ, ರೈಲು ದುರಂತ, ಕಟ್ಟಡ ಕುಸಿತ ಮತ್ತು ಭಾರಿ ಅಗ್ನಿ ಅವಘಡದ ಸಂದರ್ಭದಲ್ಲಿ ಮಡಿದವರ ಶೀಘ್ರ ಗುರುತಿನ ಪತ್ತೆಗೆ ಈ ತಂತ್ರಜ್ಞಾನವು ಅತ್ಯಾವಶ್ಯಕವಾಗಿದೆ. ಪ್ರಾಣಿಗಳ ಬೇಟೆ ಮತ್ತು ಕಳ್ಳ ಸಾಗಣೆಯನ್ನು ಪತ್ತೆ ಹಚ್ಚುವ ಕಾರ್ಯದಲ್ಲೂ ನೊಂದ ಅಥವಾ ಸತ್ತ ಪ್ರಾಣಿಯ ಗುರುತನ್ನು ಹಿಡಿಯಲು ಈ ಪರೀಕ್ಷಾ ವಿಧಾನದಿಂದ ಸಾಧ್ಯವಾಗುತ್ತದೆ.

ವಿಧಾನ

ಡಿಎನ್‌ಎ ಬೆರಳಚ್ಚು ವಿಧಾನದಲ್ಲಿ ವ್ಯಕ್ತಿಯ ರಕ್ತ, ಕೂದಲು, ಲಾಲರಸ, ಮಾಂಸ ಹಾಗೂ ಮೂಳೆಗಳ ಮಾದರಿಗಳನ್ನು ಮೊದಲು ಸಂಗ್ರಹಿಸಲಾಗುತ್ತದೆ. ನಂತರ ಈ ಮಾದರಿಗಳಿಂದ 'ಡಿಎನ್‌ಎ'ಯನ್ನು ಹೊರತೆಗೆಯಲಾಗುತ್ತದೆ. ಹೀಗೆ ಹೊರ ತೆಗೆದ ಡಿಎನ್‌ಎಯನ್ನು ನಿರ್ದಿಷ್ಟ ಕಿಣ್ವಗಳನ್ನು ಬಳಸಿ ಸಣ್ಣ ತುಣುಕುಗಳಾಗಿ ವಿಭಜಿಸಲಾಗುತ್ತದೆ. ಈ ತುಣುಕುಗಳನ್ನು 'ಜೆಲ್ ಎಲೆಕ್ಟ್ರೋಪೋರೋಸಿಸ್' ಎಂಬ ತಂತ್ರವನ್ನು ಬಳಸಿ ಗಾತ್ರದ ಆಧಾರದ ಮೇಲೆ ಪ್ರತ್ಯೇಕಿಸಲಾಗುತ್ತದೆ. ಪ್ರತ್ಯೇಕಗೊಂಡ ಡಿಎನ್‌ಎ ತುಣುಕುಗಳನ್ನು 'ಪಾಲಿಮರೇಶ್ ಚೈನ್ ರಿಯಾಕ್ಷನ್' (ಪಿಸಿಆರ್) ತಂತ್ರಜ್ಞಾನವನ್ನು ಬಳಸಿ ವರ್ಧಿಸಲಾಗುತ್ತದೆ. ಇದರಿಂದಾಗಿ ಹೆಚ್ಚು ಡಿಎನ್‌ಎ ಸಿಗುತ್ತದೆ. ಮಾದರಿಗಳನ್ನು ಎಕ್ಸರೇ ಫಿಲಂ ಅಥವಾ ಇತರ ವಿಧಾನಗಳನ್ನು ಬಳಸಿ ದೃಶ್ಯೀಕರಿಸಲಾಗುತ್ತದೆ. ಈ ಮೂಲಕ ಡಿಎನ್‌ಎಯ ವಿಶಿಷ್ಟ ಮಾದರಿಯನ್ನು ಪಡೆಯಲಾಗುತ್ತದೆ. ಪಡೆದ ಮಾದರಿಯನ್ನು ರಕ್ತಸಂಬಂಧಿಕರ ಡಿಎನ್‌ಎ ಮಾದರಿಗಳ ಜೊತೆ ಹೋಲಿಸಿ ನೋಡಿ ವ್ಯಕ್ತಿಯ ಗುರುತನ್ನು ಸುಲಭವಾಗಿ ಪತ್ತೆ ಹಚ್ಚಬಹುದು. ಇಡೀ ಪ್ರಕ್ರಿಯೆಗೆ ಕೇವಲ ಕೆಲವೇ ದಿನಗಳು ಸಾಕಾಗುತ್ತವೆ.

ಇತ್ತೀಚಿನ ದಿನಗಳಲ್ಲಿ ಕೃತಕ ಬುದ್ಧಿಮತ್ತೆಯು (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್)ಸಹ ಡಿಎನ್‌ಎ ಬೆರಳಚ್ಚು ತಂತ್ರಜ್ಞಾನವನ್ನು ಪ್ರವೇಶಿಸಿ ಅಪರಾಧ ತನಿಖೆ ನಡೆಸುವಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದೆ. ಇದು ಕ್ಲಿಷ್ಟಕರ ಪ್ರಕರಣಗಳನ್ನು ಭೇದಿಸಲು ತನಿಖಾಧಿಕಾರಿಗಳಿಗೆ ಸಾಕಷ್ಟು ನೆರವಾಗುತ್ತಿದೆ. ವಿಧಿವಿಜ್ಞಾನ ತಳಿಶಾಸ್ತ್ರದ ಡಿಎನ್‌ಎ ಬೆರಳಚ್ಚು ತಂತ್ರಜ್ಞಾನದಲ್ಲಿ ಕೃತಕ ಬುದ್ಧಿಮತ್ತೆಯು ಜೀನ್‌ಗಳ ನಡುವಿನ ತಾಂಡಂ ಪುನರಾವರ್ತನೆಗಳನ್ನು ಅತ್ಯಂತ ನಿಖರವಾಗಿ, ವೇಗವಾಗಿ ಹಾಗೂ ಸಂಕ್ಷಿಪ್ತವಾಗಿ ವಿಶ್ಲೇಷಿಸಿ ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆಸಲು ಸಹಾಯ ಮಾಡುತ್ತಿದೆ ಎಂಬುದು ಗಮನಾರ್ಹ ಅಂಶ. ❖

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ–

37) ನಮ್ಮ ಕಣ್ಣಿನ ಮೂಲಕ ಹತ್ತಿರದ ವಸ್ತುವನ್ನು ನೋಡಲು ಹೇಗೆ ಸಾಧ್ಯವಾಗುತ್ತದೆ?

ಉತ್ತರ:– ಕಣ್ಣಿನ ಸಮೀಪವಿರುವ ವಸ್ತುಗಳನ್ನು ನೋಡುವಾಗ ಕಣ್ಣಿನ ಸಿಲಿಯರಿ ಸ್ನಾಯುಗಳು ಕುಗ್ಗುತ್ತವೆ. ಇದರಿಂದ ಕಣ್ಣಿನ ಮಸೂರದ ವಕ್ರತೆ ಹೆಚ್ಚಾಗುತ್ತದೆ. ಆಗ ಕಣ್ಣಿನ ಮಸೂರವು ದಪ್ಪವಾಗುತ್ತದೆ. ಇದರ ಪರಿಣಾಮವಾಗಿ ಕಣ್ಣಿನ ಸಂಗಮದೂರ ಕಡಿಮೆಯಾಗುತ್ತದೆ ಮತ್ತು ಹತ್ತಿರದ ವಸ್ತುಗಳು ಸ್ಪಷ್ಟವಾಗಿ ಗೋಚರಿಸುತ್ತವೆ

38) ಒಂದು ದ್ರವರೂಪದ ಅಲೋಹವನ್ನು ಹೆಸರಿಸಿ

ಉತ್ತರ:– ಬ್ರೋಮಿನ್

39) ಒಂದು ದ್ರವರೂಪದ ಲೋಹವನ್ನು ಹೆಸರಿಸಿ

ಉತ್ತರ:– ಪಾದರಸ

40) ಹೊಳೆಯುವ ಅಲೋಹವನ್ನು ಬರೆಯಿರಿ

ಉತ್ತರ:– ಅಯೋಡಿನ್

41) ವಿಭಿನ್ನ ರೂಪದಲ್ಲಿ ದೊರೆಯುವ ಅಲೋಹ ಯಾವುದು?

ಉತ್ತರ:– **ಕಾರ್ಬನ್**

42) ಗ್ರಹಗಳು ಮಿನುಗುವುದಿಲ್ಲ ಏಕೆ? ಪುಟ 132


ಉತ್ತರ:– ಗ್ರಹಗಳು ಭೂಮಿಗೆ ತುಂಬಾ ಹತ್ತಿರದಲ್ಲಿವೆ ಮತ್ತು ವಿಸ್ತರಿಸಿದ ಬೆಳಕಿನ ಮೂಲಗಳಂತೆ ಕಾಣುತ್ತವೆ. ನಾವು ಒಂದು ಗ್ರಹವನ್ನು ಹಲವಾರು ಬಿಂದು ಗಾತ್ರದ ಬೆಳಕಿನ ಮೂಲದ ಒಂದು ಸಂಗ್ರಹ ಎಂದು ಭಾವಿಸಿದರೆ ಒಟ್ಟು ಎಲ್ಲಾ ಬಿಂದುಗಳಿಂದ ನಮ್ಮ ಕಣ್ಣನ್ನು ತಲುಪುವ ಬೆಳಕಿನ ವ್ಯತ್ಯಾಸವು ಎಲ್ಲಾ ಬಿಂದುಗಳ ಬೆಳಕಿನ ಸರಾಸರಿ ಹತ್ತಿರವಾಗುತ್ತದೆ. ಇದರಿಂದಾಗಿ ಗ್ರಹಗಳ ಮಿನುಗುವಿಕೆ ಶೂನ್ಯವಾಗಿದೆ

43) ಯಾವುದಕ್ಕೆ ರೋಧಕ ಎಂದು ಕರೆಯುವರು ಕರೆಯುವರು? ವಿದ್ಯುತ್‌ಶಕ್ತಿ

ಉತ್ತರ:– ವಾಹಕದ ಮೂಲಕ ಇಲೆಕ್ಟ್ರಾನ್‌ಗಳ ಪ್ರವಾಹವು ಅದರ ರೋಧದಿಂದಾಗಿ ಕುಂಠಿತವಾಗುತ್ತದೆ. ಒಂದು ನಿರ್ದಿಷ್ಟ ಗಾತ್ರದ ವಸ್ತುವು ಕಡಿಮೆ ರೋಧವನ್ನು ಒದಗಿಸಿದರೆ ಅದು ಉತ್ತಮ ವಾಹಕವಾಗಿದೆ. ಒಂದು ವಾಹಕವು ಗಣನೀಯವಾದ ರೋಧವನ್ನು ಹೊಂದಿದ್ದರೆ ಅದನ್ನು ರೋಧಕ ಎಂದು ಕರೆಯುವರು. ಹೆಚ್ಚಿನ ರೋಧವನ್ನು ಒಡ್ಡುವ ಒಂದೇ ಗಾತ್ರದ ವಸ್ತುವು ದುರ್ಬಲ ವಾಹಕವಾಗಿದೆ.

44) ಅಮೀಬಾ ಜೀವ ಪೋಷಣೆಯ ಕುರಿತು ಬರೆಯಿರಿ

ಉತ್ತರ:– ಅಮೀಬಾವು ತಾತ್ಕಾಲಿಕ ಬೆರಳಿನಂತಹ ಜೀವಕೋಶದ ಮೇಲ್ಮೈ ಹೊರಚಾಚಿಕೆಗಳನ್ನು ಬಳಸಿ ಆಹಾರವನ್ನು ಒಳತೆಗೆದುಕೊಳ್ಳುತ್ತದೆ. ಈ ರಚನೆಗಳು ಆಹಾರ ಕಣಗಳನ್ನು ಆವರಿಸಿ ಬೆಸೆದು ಆಹಾರ ರಸದಾನಿಯನ್ನು ಉಂಟುಮಾಡುತ್ತದೆ. ಆಹಾರ ರಸದಾನಿಯೊಳಗೆ ಸಂಕೀರ್ಣ ಆಹಾರ ಪದಾರ್ಥಗಳು ವಿಭಜನೆಗೊಂಡು ಸರಳ ಆಹಾರ ಪದಾರ್ಥಗಳಾಗುತ್ತವೆ. ನಂತರ ಅವು ಕೋಶದ್ರವ್ಯಕ್ಕೆ ವಿಸರಣೆಗೊಳ್ಳುತ್ತವೆ. ಜೀರ್ಣವಾಗದೇ ಉಳಿದ ಪದಾರ್ಥಗಳು ಜೀವಕೋಶದ ಮೇಲ್ಮೈಗೆ ಚಲಿಸಿ ಹೊರಹಾಕಲ್ಪಡುತ್ತದೆ.



45) ಕೆಳಗಿನ ಕೋಷ್ಟಕವನ್ನು ಗಮನಿಸಿ, ಕೆಳಗಿನ ಪಟ್ಟಿಯಲ್ಲಿರುವ ಯಾವ ವಿದ್ಯುತ್ ಉಪಕರಣವು ಹೆಚ್ಚು ಶಕ್ತಿಯನ್ನು ಬಳಸುವುದು?

ವಿದ್ಯುತ್ ಸಾಧನಗಳು	ವಿದ್ಯುತ್ ಸಾಮರ್ಥ್ಯ	ಬಳಕೆಯಾದ ಕಾಲ
ಟಿ.ವಿ	250 W	4 ಗಂಟೆ
ಟೋಸ್ಟರ್	1200 W	1 ಗಂಟೆ

ಬಿ) 2Ω ಮತ್ತು 4Ωನ ರೋಧಕಗಳನ್ನು ಸಮಾಂತರವಾಗಿ ಜೋಡಿಸಲಾಗಿದೆ, 4Ω ಇರುವ ಸ್ಥಳದಲ್ಲಿ 6Ωನ ರೋಧಕವನ್ನು ಬಳಸಿದರೆ, ಆಗ ಈ ಎರಡು ಜೋಡಣೆಗಳಲ್ಲಿ ದೊರಕಿದ ಒಟ್ಟು ರೋಧಗಳ ನಡುವಣ ವ್ಯತ್ಯಾಸವನ್ನು ಕಂಡುಹಿಡಿಯಿರಿ

(ಬೋರ್ಡ್ ಮಾದರಿ ಬೋರ್ಡ್ ಪ್ರಶ್ನೆಪತ್ರಿಕೆ: 2026)

ಉತ್ತರ:–

a) ಟಿ.ವಿ. ಬಳಸಿದ ಒಟ್ಟು ಶಕ್ತಿ = E = Pt

E = 250 x 4
E = 1000 Wh
E = 1 kWh

ಟೋಸ್ಟರ್ ಬಳಸಿದ ಒಟ್ಟು ಶಕ್ತಿ= E = Pt

E = 1200 x 1
E = 1200 Wh
E = 1.2 kWh

ಟೋಸ್ಟರ್ ಹೆಚ್ಚು ಶಕ್ತಿಯನ್ನು ಬಳಸುತ್ತದೆ.

b)

$R_1 = 2\,\Omega$
$R_2 = 4\,\Omega$
$R_{p1} = ?$

$$\frac{1}{R_{p_1}} = \frac{1}{R_1} + \frac{1}{R_2}$$
$$\frac{1}{R_{p_1}} = \frac{1}{2} + \frac{1}{4}$$
$$\frac{1}{R_{p_1}} = \frac{2+1}{4}$$
$$\frac{1}{R_{p_1}} = \frac{3}{4}$$
$$R_{p_1} = \frac{4}{3}$$
$$R_{p_1} = 1.33\,\Omega$$

4Ω ಇರುವ ಸ್ಥಳದಲ್ಲಿ 6Ω ನ ರೋಧಕವನ್ನು ಬಳಸಿದರೆ

$$\frac{1}{R_{p_2}} = \frac{1}{R_1} + \frac{1}{R_2}$$
$$\frac{1}{R_{p_2}} = \frac{1}{2} + \frac{1}{6}$$
$$\frac{1}{R_{p_2}} = \frac{3+1}{6}$$
$$\frac{1}{R_{p_2}} = \frac{4}{6}$$
$$R_{p_2} = \frac{6}{4}$$
$$R_{p_2} = 1.5\,\Omega$$

ಈ ಎರಡೂ ಜೋಡಣೆಗಳಲ್ಲಿ ದೊರಕಿದ ಒಟ್ಟು ರೋಧಗಳ ನಡುವಣ ವ್ಯತ್ಯಾಸ

$= R_{p_2} - R_{p_1}$
$= 1.5 - 1.33$
$= 0.17\Omega$

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — CHEMISTRY

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION : MODEL QUESTIONS

35. Explain the variations of ionization enthalpies in d-block elements. [March 2015]

Ans **(......Contd)**

2.The first ionization enthalpy of chromium is lower because removal of one electron produces extra stable d^5 configuration and that of zinc is higher because the removal of electron takes place from fully filled 4s orbital.

$$Cr = 3d^5 4s^1 \longrightarrow Cr^+ = 3d^5$$
$$Zn = 3d^{10} 4s^2 \longrightarrow Zn^{2+} = 3d^{10}$$

3. The second ionization enthalpy of Zn is less than second ionization enthalpy of Cu. This is because removal of second electron in Zn produces stable d^{10} configuration while the removal of second electron in Cu disrupts the d^{10} configuration with a considerable loss in exchange energy to form less stable d^9 configuration.

4.Second ionization enthalpy of Mn (Z = 25) is less than that of Fe (Z = 26). This is because removal of third electron from Mn disrupts stable d^5 configuration but in Fe produces d^6 (less stable than d^5).

5.Third ionization enthalpy of Mn is more than that of Fe. This is because removal of thir electron from Mn disrupts stable d^5 configuration but in Fe removal of third electron forms stable d^5 configuration.

6.Third ionization energy of copper, nickel and zinc is very high. Because it is difficult to obtain oxidation state greater than two for these elements.

36) What are the postulates of Werner's theory?

Ans:- Negative ions satisfy the primary valances, which are generally ionisable. Secondary valences cannot be ionised. Neutral molecules or negative ions satisfy these needs. For a metal, the secondary valence is equal to the coordination number and is constant

Werners theory of coordination compounds, isomers in coordination compounds, primary valence, secondary valence, etc.

Werner's theory's important postulates are as follows: The central metal or metal atoms in coordination compounds have two forms of valency which are primary valency and secondary valency. The oxidation state corresponds to the primary valency, while the coordinate number corresponds to the secondary valency.

Each metal atom has a fixed number of secondary valencies, like it has a fixed coordinate number.

The metal atom satisfies both its primary and secondary valencies. Negative ions satisfy primary valencies, but neutral molecules or negative ions satisfy secondary valencies.

The secondary valencies are always directed towards a particular place in space, resulting in determination of geometry of the coordinate compound's. As an example: A metal ion's secondary valencies are grouped octahedrally around the central metal ion if it has six of them. If the metal ion contains four secondary valencies, they are organized in a tetrahedral or square planar pattern around the center metal ion. The stereochemistry of the complex ion is thus determined by the secondary valency while the primary valency is non-directional.

37) Write the reactions involved in preparation of phenol from cumene.

Ans:- The preparation of phenol from cumene (isopropylbenzene) involves a two-step process:

Step 1: Oxidation of Cumene to Cumene Hydroperoxide

Reaction:
C6H5-CH(CH3)2 + O2 → C6H5-C(CH3)2-OOH

Conditions: Air, high temperature, catalyst

Step 2: Acid-catalyzed Cleavage of Cumene Hydroperoxide

Reaction:
C6H5-C(CH3)2-OOH+H+→C6H5OH + (CH3)2CO

Conditions: Dilute acid, heat

Overall Reaction:
C6H5-CH(CH3)2 + O2 → [C6H5-C(CH3)2-OOH] → C6H5OH + (CH3)2CO

38) How do you say that the osmotic pressure is a colligative property?

Ans:-Osmotic pressure of a solution is given by $\pi = RTC$; hence $\pi \propto C$ at constant temperature.

This shows that the osmotic pressure depends on molar concentration, irrespective of the nature of the solute. Hence, it is a colligative property.

39) Name the gases liberated at anode and cathode respectively when an aqueous solution of sodium chloride is electrolysed.

Ans:- When an aqueous solution of sodium chloride is electrolysed the gases liberated are –
at anode - Chlorine and
at cathode – Hydrogen

40) Define half-life period of a reaction. Write the relationship between half-life period and initial concentration of zero order reaction.

Ans:- The half-life period of a reaction is the time it takes for the concentration of a reactant to decrease to half of its initial value. It is represented by the symbol t1/2

It is directly proportional to the initial concentration of the reactant.

‘ಮಾಜಿ ದೇವದಾಸಿಯರಿಗೆ ಪ್ಯಾಕೇಜ್’

ಮರುಸಮೀಕ್ಷಾ ವರದಿ ರಾಜ್ಯ ಸರ್ಕಾರಕ್ಕೆ ಸಲ್ಲಿಕೆ
• ಮಕ್ಕಳ ಶಿಕ್ಷಣ, ವಿವಾಹಕ್ಕೆ ನೆರವಾಗಲು ಶಿಫಾರಸು

ಪ್ರಜಾವಾಣಿ ವಾರ್ತೆ

23,395 ಮರುಸಮೀಕ್ಷೆ ನಂತರ ಪತ್ತೆಯಾದ ಮಾಜಿ ದೇವದಾಸಿಯರ ಸಂಖ್ಯೆ

90,092 ಮಾಜಿ ದೇವದಾಸಿಯರ 1, 2 ಮತ್ತು 3ನೇ ತಲೆಮಾರಿನ ಕುಟುಂಬದ ಸದಸ್ಯರ ಸಂಖ್ಯೆ

ಬಾಗಲಕೋಟೆಯಲ್ಲಿ ಹೆಚ್ಚು

ಮಾಜಿ ದೇವದಾಸಿಯರ ಸಂಖ್ಯೆ	
ಬಾಗಲಕೋಟೆ	4,189
ವಿಜಯನಗರ	3,876
ಬೆಳಗಾವಿ	2,649
ಕೊಪ್ಪಳ	2,469
ಬಳ್ಳಾರಿ	2,333

ಬೆಂಗಳೂರು: ಮಾಜಿ ದೇವದಾಸಿಯರ ಮರು ಸಮೀಕ್ಷಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದ್ದು, ಅವರು ಮತ್ತು ಅವರ ಕುಟುಂಬದವರ ಪುನರ್ವಸತಿಗಾಗಿ ವಿಶೇಷ ಪ್ಯಾಕೇಜ್ ಘೋಷಿಸುವಂತೆ ಶಿಫಾರಸು ಮಾಡಲಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮೀ ಹೆಬ್ಬಾಳಕರ ಹೇಳಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮಂಗಳವಾರ ಸಂಜೆ ಅವರು ವರದಿ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ‘ಮಾಜಿ ದೇವದಾಸಿಯರ ಮೂಲ ಹಂತದ ಸಮೀಕ್ಷೆಯಲ್ಲಿ ಹಲವರು ಸಮೀಕ್ಷಾ ವ್ಯಾಪ್ತಿಯಿಂದ ಹೊರಗೆ ಉಳಿದಿದ್ದರು. ಹೀಗಾಗಿ ಮರುಸಮೀಕ್ಷೆ ನಡೆಸಲಾಗಿತ್ತು. ಸಮೀಕ್ಷೆಯಲ್ಲಿ ಯಾವುದೇ ಲೋಪ ಆಗದಂತೆ ಎಚ್ಚರಿಕೆ ವಹಿಸಲಾಗಿತ್ತು ಮತ್ತು ಸ್ವತಃ ನಾನೇ ಮೇಲ್ವಿಚಾರಣೆ ನಡೆಸಿದ್ದೆ’ ಎಂದರು.

‘ಮಾಜಿ ದೇವದಾಸಿಯರು, ಅವರ 1, 2 ಮತ್ತು 3ನೇ ತಲೆಮಾರಿನ ಮಕ್ಕಳ ಶಿಕ್ಷಣ, ವಿವಾಹ ಮತ್ತು ಅಂತರ್ಜಾತಿ ವಿವಾಹವನ್ನು ಪ್ರೋತ್ಸಾಹಿಸಬೇಕಿದೆ.



ಮಾಜಿ ದೇವದಾಸಿಯರ ಮರು ಸಮೀಕ್ಷಾ ವರದಿಯನ್ನು ಲಕ್ಷ್ಮೀ ಹೆಬ್ಬಾಳಕರ ಅವರು ಸಿದ್ದರಾಮಯ್ಯ ಅವರಿಗೆ ಸಲ್ಲಿಸಿದರು

ಈ ಮಕ್ಕಳು ಮತ್ತೆ ಈ ಅನಿಷ್ಟ ಪದ್ಧತಿಗೆ ಮರಳಬಾರದು. ಇದಕ್ಕಾಗಿ ಜಾಗೃತಿ ಮೂಡಿಸಬೇಕಿದೆ. ಈ ಎಲ್ಲ ಉದ್ದೇಶಗಳನ್ನು ಒಳಗೊಂಡು ಒಂದು ವಿಶೇಷ ಪ್ಯಾಕೇಜ್ ಘೋಷಿಸಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ’ ಎಂದು ಮಾಹಿತಿ ನೀಡಿದರು.

ಬೆಳಗಾವಿ, ವಿಜಯಪುರ, ಬಾಗಲಕೋಟೆ, ರಾಯಚೂರು, ಕೊಪ್ಪಳ, ಧಾರವಾಡ, ಹಾವೇರಿ, ಗದಗ, ಕಲಬುರಗಿ, ಯಾದಗಿರಿ, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳಲ್ಲಿ ಮರುಸಮೀಕ್ಷೆ ನಡೆದಿತ್ತು.

ಗ್ರಾ.ಪಂ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆ
‘ಅವಧಿ ಮುಕ್ತಾಯದ ಹಂತದಲ್ಲೂ ಅವಕಾಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಗ್ರಾಮ ಪಂಚಾಯಿತಿಯ ಚುನಾಯಿತ ಸದಸ್ಯರ ಅವಧಿ ಮುಕ್ತಾಯದ ಹಂತದಲ್ಲಿಯೂ ಅವಿಶ್ವಾಸ ನಿರ್ಣಯ ಮಂಡನೆಗೆ ಅನುಮತಿ ನೀಡಬಹುದು. ಇದರಿಂದ ಚುನಾಯಿತ ಪದಾಧಿಕಾರಿಗಳು ಉಳಿದ ಅಧಿಕಾರಾವಧಿ ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇರುವುದಿಲ್ಲ’ ಎಂದು ಹೈಕೋರ್ಟ್ ಸ್ಪಷ್ಟಪಡಿಸಿದೆ.

ಈ ಸಂಬಂಧ ಕೋಲಾರ ಜಿಲ್ಲೆ ಶ್ರೀನಿವಾಸಪುರ ತಾಲ್ಲೂಕಿನ ಚಲ್ದಿಗಾನ ಹಳ್ಳಿಯ ಗ್ರಾಮ ಪಂಚಾಯಿತಿ ಅಧ್ಯಕ್ಷ ಸಿ.ಎನ್.ಶ್ರೀನಿವಾಸ್ ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿ ವಜಾಗೊಳಿಸಿರುವ ನ್ಯಾಯಪೀಠ, ‘ಗ್ರಾಮ ಪಂಚಾಯಿತಿ ಸದಸ್ಯರು ಪ್ರಮಾಣ ವಚನ ಸ್ವೀಕರಿಸಿದ ದಿನಾಂಕದಿಂದ 15 ತಿಂಗಳ ಆರಂಭಿಕ ಅವಧಿಯಲ್ಲಿ ಮಾತ್ರ ಅವಿಶ್ವಾಸ ನಿರ್ಣಯ ಮಂಡಿಸಲು ಅವಕಾಶವಿಲ್ಲ. ಆದರೆ, 15 ತಿಂಗಳ ಬಳಿಕ ಯಾವುದೇ ಸಂದರ್ಭದಲ್ಲಿ ಅವಿಶ್ವಾಸ ನಿರ್ಣಯ ಮಂಡಿಸುವುದಕ್ಕೆ ಅವಕಾಶವಿರಲಿದೆ’ ಎಂದು ನ್ಯಾಯಪೀಠ ಆದೇಶದಲ್ಲಿ ತಿಳಿಸಿದೆ.

‘ಹಣಕಾಸಿನ ಅವ್ಯವಹಾರ ಆರೋಪಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧದ ಆರೋಪಗಳ ಬಗ್ಗೆ ಪರಿಶೀಲನೆ ನಡೆಸಲು ಕಡತವನ್ನು ಸಕ್ಷಮ ಪ್ರಾಧಿಕಾರಕ್ಕೆ ರವಾನಿಸಬೇಕು. ಜತೆಗೆ, ಆದೇಶದ ಪ್ರತಿ ಲಭ್ಯವಾದ ಏಳು ದಿನಗಳ ಒಳಗಾಗಿ ಆರೋಪಗಳ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಬೇಕು’ ಎಂದು ಗ್ರಾಮ ಪಂಚಾಯಿತಿಗೆ ತಾಕೀತು ಮಾಡಿದೆ.


ಪ್ರಕರಣವೇನು?: ಚಲ್ದಿಗಾನಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ವಿರುದ್ಧ ಅವಿಶ್ವಾಸ ನಿರ್ಣಯ ಕೈಗೊಳ್ಳುವ ಸಂಬಂಧ ಕೆಲ ಸದಸ್ಯರು ಮನವಿ ಸಲ್ಲಿಸಿದ್ದರು. ಈ ಮನವಿ ಆಧರಿಸಿ ಉಪ ವಿಭಾಗಾಧಿಕಾರಿ, 2026ರ ಜನವರಿ 7ರಂದು ಅವಿಶ್ವಾಸ ನಿರ್ಣಯಕ್ಕೆ ಸಭೆ ನಡೆಸುವ ಹಿನ್ನೆಲೆಯಲ್ಲಿ 2025ರ ಡಿಸೆಂಬರ್ 20ರಂದೇ ನೋಟಿಸ್ ಜಾರಿ ಮಾಡಿದ್ದರು. ಉಪವಿಭಾಗಾಧಿಕಾರಿ ದಿನಾಂಕ ನಿಗದಿಪಡಿಸಿದ್ದ ಕ್ರಮವನ್ನು ಪ್ರಶ್ನಿಸಲಾಗಿತ್ತು.

ನೋಟಿಸ್ ರದ್ದುಪಡಿಸಲು ಮನವಿ

‘ಪಂಚಾಯಿತಿಯಲ್ಲಿ ಲಭ್ಯವಿರುವ ₹65 ಲಕ್ಷ ಅನುದಾನ ಬಿಡುಗಡೆಗೆ ಕೆಲವು ಸದಸ್ಯರು ಮನವಿ ಮಾಡಿದ್ದರು. ಇದಕ್ಕೆ ಒಪ್ಪಿಗೆ ನೀಡಿರಲಿಲ್ಲ. ಈ ಕಾರಣಕ್ಕಾಗಿ ನನ್ನ ವಿರುದ್ಧ ಅವಿಶ್ವಾಸ ನಿರ್ಣಯ ಮಂಡನೆಗೆ ನೋಟಿಸ್ ನೀಡಲಾಗಿದೆ. ನಾನು 2020ರ ಡಿಸೆಂಬರ್ 30ರಂದು ಆಯ್ಕೆಯಾಗಿದ್ದು, ಅವಧಿ ಪೂರ್ಣಗೊಳ್ಳುವ ಹಂತದಲ್ಲಿ ಅವಿಶ್ವಾಸ ನಿರ್ಣಯಕ್ಕೆ ಸದಸ್ಯರು ಮುಂದಾಗಿದ್ದಾರೆ. ಆದ್ದರಿಂದ, ನೋಟಿಸ್ ರದ್ದುಪಡಿಸಬೇಕು’ ಎಂದು ಅರ್ಜಿದಾರರು ಕೋರಿದ್ದರು.

ಶಾಸಕ ರಾಜೇಗೌಡರ ಆಸ್ತಿ ವಿವರ ಸಂಗ್ರಹ

ಬಾಳೆಹೊನ್ನೂರು (ಚಿಕ್ಕಮಗಳೂರು): ಲೋಕಾಯುಕ್ತಕ್ಕೆ ವ್ಯಕ್ತಿಯೊಬ್ಬರು ನೀಡಿದ ದೂರು ಆಧರಿಸಿ ಶಾಸಕ ಟಿ.ಡಿ. ರಾಜೇಗೌಡ ಅವರ ಆಸ್ತಿ ಮತ್ತು ಆದಾಯದ ವಿವರಗಳನ್ನು ಅಧಿಕಾರಿಗಳು ಸಂಗ್ರಹಿಸಿದರು.



ಟಿ.ಡಿ. ರಾಜೇಗೌಡ

‘ಕಾಫಿ ಮಂಡಳಿ, ತೋಟಗಾರಿಕೆ ಮತ್ತು ಕೃಷಿ ಇಲಾಖೆಗಳ 15ಕ್ಕೂ ಹೆಚ್ಚು ಅಧಿಕಾರಿಗಳ ತಂಡ ಸೋಮವಾರ ಮತ್ತು ಮಂಗಳವಾರ ಭೇಟಿ ನೀಡಿ ಆಸ್ತಿಯ ಮೌಲ್ಯಮಾಪನ ನಡೆಸಿದೆ.

ಬಾಸಾಪುರ, ಹಲಸೂರು ಸೇರಿ ವಿವಿಧೆಡೆ ಆಸ್ತಿ, ಆದಾಯದ ವಿವರಗಳನ್ನು ಸಂಗ್ರಹಿಸಿದೆ. ‘ಎಲ್ಲ ಅಗತ್ಯ ದಾಖಲೆಗಳನ್ನು ಒದಗಿಸಿ, ತನಿಖೆಗೆ ಸಹಕಾರ ನೀಡುತ್ತಿದ್ದೇನೆ’ ಎಂದು ಶಾಸಕ ಟಿ.ಡಿ. ರಾಜೇಗೌಡ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ದಾಖಲೆ ಪರಿಶೀಲನೆ ರಾಜಕೀಯ ಪ್ರೇರಿತವಾಗಿದೆ. ದೂರಿನಲ್ಲಿ ಯಾವುದೇ ಹುರುಳಿಲ್ಲ ಎಂಬುದು ಸ್ಪಷ್ಟ. ವ್ಯಕ್ತಿಯೊಬ್ಬರ ಅರ್ಜಿ ಆಧರಿಸಿ ಜನಪ್ರತಿನಿಧಿಗಳ ವಿಶೇಷ ಕೋರ್ಟ್‌ನ ಆದೇಶದಂತೆ ಎಫ್‌ಐಆರ್ ದಾಖಲಿಸಿ ಲೋಕಾಯುಕ್ತ ತನಿಖೆ ನಡೆಯುತ್ತಿದೆ’ ಎಂದರು.

‘ಆದಾಯ ತೆರಿಗೆ ಇಲಾಖೆಗೆ ವಂಚನೆ ಕುರಿತು ಸಮಗ್ರ ತನಿಖೆ ನಡೆಸಬೇಕು’ ಎಂದು ಕೋರಿ ಕೊಪ್ಪ ನಿವಾಸಿ ದಿನೇಶ್ ಎಚ್.ಕೆ. ಖಾಸಗಿ ದೂರು ಸಲ್ಲಿಸಿದ್ದರು. ರಾಜೇಗೌಡ, ಪತ್ನಿ ಡಿ.ಕೆ. ಪುಷ್ಪಾ, ಪುತ್ರ ರಾಜ್‌ದೇವ್ ವಿರುದ್ಧ 2025ರ ಸೆ.23ರಂದು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಕರ್ನಾಟಕ ಬ್ಯಾಂಕ್ ₹1.81 ಲಕ್ಷ ಕೋಟಿ ವಹಿವಾಟು

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ಣಾಟಕ ಬ್ಯಾಂಕ್ 2025ರ ಡಿ.31ಕ್ಕೆ ಅಂತ್ಯಗೊಂಡ 3ನೇ ತ್ರೈಮಾಸಿಕದಲ್ಲಿ ₹1,81,394.37 ಕೋಟಿ ವಹಿವಾಟು ದಾಖಲಿಸಿದೆ. ಎರಡನೇ ತ್ರೈಮಾಸಿಕಕ್ಕೆ (₹1.76 ಲಕ್ಷ ಕೋಟಿ) ಹೋಲಿಸಿದರೆ ಒಟ್ಟು ವಹಿವಾಟು ಶೇ 3ರಷ್ಟು ಹೆಚ್ಚಾಗಿದೆ.

ಬ್ಯಾಂಕಿನ ಆಡಳಿತ ಮಂಡಳಿ ಸಭೆ ಇಲ್ಲಿ ಮಂಗಳವಾರ ನಡೆದಿದ್ದು, ಮೂರನೇ ತ್ರೈಮಾಸಿಕ ಹಾಗೂ 2025–26ನೇ ಆರ್ಥಿಕ ವರ್ಷದ ಮೊದಲ 9 ತಿಂಗಳ ಹಣಕಾಸು ಫಲಿತಾಂಶಗಳಿಗೆ ಅನುಮೋದನೆ ನೀಡಲಾಯಿತು.

ಬ್ಯಾಂಕ್ ನೀಡಿರುವ ಒಟ್ಟು ಸಾಲದ ಮೊತ್ತ ₹77,282.85 ಕೋಟಿಗಳಷ್ಟಾಗಿದೆ. ಮೂರನೇ ತ್ರೈಮಾಸಿಕದಲ್ಲಿ ಸಾಲ ನೀಡುವಿಕೆ ಶೇ 4.9ರಷ್ಟು ಹೆಚ್ಚಳವಾಗಿದೆ. ಒಟ್ಟು ಠೇವಣಿಯು ₹1,04,111.52 ಕೋಟಿಗಳಷ್ಟಾಗಿದ್ದು, ಮೂರನೇ ತ್ರೈಮಾಸಿಕದಲ್ಲಿ ಠೇವಣಿ ಪ್ರಮಾಣ ಶೇ 1.3ರಷ್ಟು ಹೆಚ್ಚಳವಾಗಿದೆ.

2025–26ನೇ ಆರ್ಥಿಕ ವರ್ಷದ ಎರಡನೇ ತ್ರೈಮಾಸಿಕದಲ್ಲಿ ₹ 319.12 ಕೋಟಿ ನಿವ್ವಳ ಲಾಭ ಗಳಿಸಿದ್ದ ಬ್ಯಾಂಕ್, ಮೂರನೇ ತ್ರೈಮಾಸಿಕದಲ್ಲಿ ₹ 290.79 ಕೋಟಿ ನಿವ್ವಳ ಲಾಭ ಗಳಿಸಿದೆ. 2024–25ನೇ ಆರ್ಥಿಕ ವರ್ಷದ ಮೂರನೇ ತ್ರೈಮಾಸಿಕದಲ್ಲಿ ಬ್ಯಾಂಕ್ ₹ 283.60 ಕೋಟಿ ನಿವ್ವಳ ಲಾಭ ಗಳಿಸಿತ್ತು.

ಬ್ಯಾಂಕಿನ ಒಟ್ಟು ಅನುತ್ಪಾದಕ ಆಸ್ತಿ ಶೇ 3.32ಕ್ಕೆ ಇಳಿಕೆಯಾಗಿದೆ. ಇದು ಎರಡನೇ ತ್ರೈಮಾಸಿಕದ ಅಂತ್ಯಕ್ಕೆ ಶೇ 3.33ರಷ್ಟಿತ್ತು. ಎರಡನೇ ತ್ರೈಮಾಸಿಕಕ್ಕೆ ಹೋಲಿಸಿದರೆ (ಶೇ 1.35) ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣವು ಶೇ 1.31ಕ್ಕೆ ಇಳಿಕೆಯಾಗಿದೆ ಎಂದು ಬ್ಯಾಂಕಿನ ಪ್ರಕಟಣೆ ತಿಳಿಸಿದೆ.

ಜನರ ಪ್ರಾಣಕ್ಕೆ ಕಂಟಕವಾಗಿರುವ ಮಾಂಜಾ ದಾರವನ್ನು ಸರ್ಕಾರ ನಿಷೇಧಿಸಬೇಕೇ?

• ಬೇಕು • ಬೇಡ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

‘ಲಂಚಕ್ಕಾಗಿ ನನ್ನ ಹೆಸರು ದುರ್ಬಳಕೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮದ್ಯ ಮಾರಾಟ ಸನ್ನದು ನೀಡುವಲ್ಲಿ ಲಂಚ ಪಡೆಯಲು ಅಧಿಕಾರಿಗಳು ನನ್ನ ಹೆಸರನ್ನು ದುರುಪಯೋಗ ಮಾಡಿಕೊಂಡಿದ್ದಾರೆ. ಹಾಗೆ ಮಾಡುವವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ’ ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ವಿಧಾನಸೌಧದಲ್ಲಿ ಮಂಗಳವಾರ ಇಲಾಖೆಯ ಪ್ರಗತಿ ಪರಿಶೀಲನಾ ಸಭೆ ನಡೆಸಿದ ನಂತರ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ‘ಈ ಖಾತೆಯೇ ಅಂಥದ್ದು. ಈ ಹಿಂದೆ ಸಚಿವರಾಗಿದ್ದವರ ವಿರುದ್ಧವೂ ಆರೋಪಗಳು ಬಂದಿವೆ. ಈಗಲೂ ಬರುತ್ತಿವೆ. ಆದರೆ ಅವೆಲ್ಲಾ ಸುಳ್ಳು’ ಎಂದರು.

ನಿಮ್ಮ ಇಲಾಖೆಯಲ್ಲಿ ಭ್ರಷ್ಟಾಚಾರ ಸಾಮಾನ್ಯ ಎಂದು ಹೇಳುತ್ತಿದ್ದೀರಾ ಎಂದು ಸುದ್ದಿಗಾರರು ಕೇಳಿದಾಗ ಸಿಟ್ಟಾದರು. ‘ಸಿಎಲ್–7 ಸನ್ನದು ನೀಡುವಲ್ಲಿ ಮೊದಲು 16 ವಿವಿಧ ಅಧಿಕಾರಿಗಳ ಬಳಿ ಕಡತ ಹೋಗಬೇಕಿತ್ತು. ಉದ್ದೇಶ ಪೂರ್ವಕವಾಗಿ ವಿಳಂಬ ಮಾಡಲು ಮತ್ತು ಭ್ರಷ್ಟಾಚಾರಕ್ಕೆ ಅವಕಾಶವಿತ್ತು. ಇದನ್ನು ತಪ್ಪಿಸುವ ಉದ್ದೇಶದಿಂದ ಸಿಎಲ್–7 ಸನ್ನದು ಮಂಜೂರು ಮಾಡುವ ಹಂತಗಳನ್ನು ಈಗ 7ಕ್ಕೆ ಇಳಿಸಿದ್ದೇವೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದರೆ 35 ದಿನಗಳ ಒಳಗೆ ಸನ್ನದು ಸಿಗಲಿದೆ. ಅದನ್ನೂ 20 ದಿನಗಳಿಗೆ ಇಳಿಸುವ ವ್ಯವಸ್ಥೆ ಜಾರಿಗೆ ತರುತ್ತಿದ್ದೇವೆ. ಇದರಿಂದ ಕೆಲವರಿಗೆ ತೊಂದರೆ ಆಗಿದೆ. ಹೀಗಾಗಿ ನನ್ನ ವಿರುದ್ಧ ಆರೋಪ ಮಾಡುತ್ತಿದ್ದಾರೆ’ ಎಂದು ಆಪಾದಿಸಿದರು.



ಕಿರಾಣಿ ಅಂಗಡಿಗಳಲ್ಲಿ ಮದ್ಯ ಮಾರಾಟ ಮಾಡುವವರು ಅಧಿಕೃತ ಮಾರಾಟಗಾರರಿಂದಲೇ ಖರೀದಿಸಿರುತ್ತಾರೆ. ಆದರೂ ಅದು ತಪ್ಪು. ಅಂತಹವರ ವಿರುದ್ಧ 15,000 ಕ್ಕಿಂತ ಹೆಚ್ಚು ಪ್ರಕರಣ ದಾಖಲಿಸಿದ್ದೇವೆ

ಆರ್.ಬಿ.ತಿಮ್ಮಾಪುರ, ಅಬಕಾರಿ ಸಚಿವ

‘ಯಾರಿಗೆ ತೊಂದರೆ ಆಗಿದೆ’ ಎಂಬ ಪ್ರಶ್ನೆಗೆ ಅವರು ಉತ್ತರ ನೀಡಲಿಲ್ಲ.

‘ಮದ್ಯ ಮಾರಾಟ ಸನ್ನದುಗಳ ಅವಧಿಯನ್ನು ಐದು ವರ್ಷಗಳಿಗೆ ಹೆಚ್ಚಿಸಿದ್ದೇವೆ. ಇದರಿಂದಲೂ ಕೆಲವರಿಗೆ ತೊಂದರೆ ಆಗಿದೆ. ಕೆಲವು ಅಧಿಕಾರಿಗಳು ಸಚಿವರ ಹೆಸರು ಹೇಳಿ, ದುರುಪಯೋಗ ಮಾಡಿಕೊಂಡಿರುವುದು ಗೊತ್ತಾಗಿದೆ. ಇಲಾಖೆಯಲ್ಲಿ ಭ್ರಷ್ಟಾಚಾರ ಇಲ್ಲವೇ ಇಲ್ಲ ಎಂದಲ್ಲ. 158 ಅಧಿಕಾರಿಗಳ ವಿರುದ್ಧ ಪ್ರಕರಣ ದಾಖಲಾಗಿದೆ. 19 ಜನರ ವಿರುದ್ಧ ಇಲಾಖಾ ತನಿಖೆ ನಡೆಯುತ್ತಿದ್ದರೆ, 85 ಜನರ ವಿರುದ್ಧದ ಪ್ರಕರಣವು ಸರ್ಕಾರದ ಹಂತದಲ್ಲಿದೆ. 54 ಅಧಿಕಾರಿಗಳ ವಿರುದ್ಧ ಲೋಕಾಯುಕ್ತ ತನಿಖೆ ನಡೆಯುತ್ತಿದೆ. ಭ್ರಷ್ಟಾಚಾರದ ವಿಚಾರದಲ್ಲಿ ನಾವು ಸುಮ್ಮನೆ ಕೂತಿಲ್ಲ’ ಎಂದು ಪ್ರತಿಕ್ರಿಯಿಸಿದರು.

‘ಹಾಗಿದ್ದರೆ, ಲಂಚದ ವಿಚಾರ ಯಾಕೆ ಮುನ್ನೆಲೆಗೆ ಬಂತು’ ಎಂದು ಸುದ್ದಿಗಾರರು ಪ್ರಶ್ನಿಸಿದಾಗ, ‘ವಿಶೇಷ ಅಧಿವೇಶನದಲ್ಲಿ ನರೇಗಾ ಯೋಜನೆ ಬಗ್ಗೆ ಚರ್ಚಿಸುವುದು ಬಿಜೆಪಿ ಸದಸ್ಯರಿಗೆ ಬೇಡವಾಗಿತ್ತು. ಹೀಗಾಗಿ ನನ್ನ ಮೇಲಿನ ಆರೋಪಕ್ಕೆ ಅವರು ಜೋತುಬಿದ್ದರು. ಅದೇ ವಿಚಾರವಾಗಿ ಸದನ ನಡೆಯಲು ಬಿಡಲಿಲ್ಲ. ನಾನೂ ಉತ್ತರ ಕೊಟ್ಟೆ. ನರೇಗಾ ಕುರಿತ ಚರ್ಚೆಯನ್ನು ಸರ್ಕಾರ ನಡೆಸಿತು. ಇದರಲ್ಲಿ ಬಿಜೆಪಿಯ ಕೈ ಮೇಲಾಗಲಿಲ್ಲ’ ಎಂದರು.

ಆದಾಯ: ಶೇ 83.43ರಷ್ಟು ಪ್ರಗತಿ

‘2025–26ನೇ ಸಾಲಿನ ಬಜೆಟ್‌ನಲ್ಲಿ ಅಬಕಾರಿ ಇಲಾಖೆಯಿಂದ ₹40,000 ಕೋಟಿ ಆದಾಯ ಸಂಗ್ರಹವಾಗಬಹುದು ಎಂದು ಅಂದಾಜಿಸಲಾಗಿತ್ತು. ಈಗಾಗಲೇ ₹34,235 ಕೋಟಿ ಸಂಗ್ರಹಿಸಿದ್ದು, ಶೇ 83.43ರಷ್ಟು ಗುರಿ ಸಾಧಿಸಿದ್ದೇವೆ. ಆರ್ಥಿಕ ವರ್ಷದ ಅಂತ್ಯದ ವೇಳೆಗೆ ₹40,000 ಕೋಟಿಗಿಂತಲೂ ಹೆಚ್ಚು ಆದಾಯ ಸಂಗ್ರಹವಾಗಲಿದೆ’ ಎಂದು ಆರ್.ಬಿ.ತಿಮ್ಮಾಪುರ ಹೇಳಿದರು.


‘ಈಚಿನ ವರ್ಷಗಳಲ್ಲಿ ಅಬಕಾರಿ ಇಲಾಖೆಯು ಆದಾಯ ಸಂಗ್ರಹದಲ್ಲಿ ಬಜೆಟ್ ಅಂದಾಜನ್ನು ಮುಟ್ಟಿರಲೇ ಇಲ್ಲ. ಅಂದಾಜಿಗಿಂತ ₹3,000 ಕೋಟಿ ಕಡಿಮೆ ಸಂಗ್ರಹವಾಗಿತ್ತು. ಈ ಬಾರಿ ಬಜೆಟ್ ಅಂದಾಜನ್ನು ಮೀರಿಸಲಿದ್ದೇವೆ. ಬೇರೆ ಎಲ್ಲ ಇಲಾಖೆಗಳಿಗಿಂತ ಉತ್ತಮ ಪ್ರಗತಿ ಸಾಧಿಸಿದ್ದೇವೆ’ ಎಂದರು.

‘ಬಜೆಟ್ ಅಂದಾಜಿಗಿಂತ ಹೆಚ್ಚು, ಅಂದರೆ ₹43,000 ಕೋಟಿ ಸಂಗ್ರಹವಾಗಬಹುದೆಂಬ ನಿರೀಕ್ಷೆ ಇತ್ತು. ಮದ್ಯ ಮಾರಾಟ ಸನ್ನದುಗಳ ಹರಾಜಿನ ವಿರುದ್ಧ ಕೆಲವರು ಕೋರ್ಟ್‌ಗೆ ಹೋಗಿದ್ದರಿಂದ ಸ್ವಲ್ಪ ಕಡಿಮೆ ಆಗಬಹುದು’ ಎಂದರು.

‘ಹಾವೇರಿಯಲ್ಲಿ 14ಕ್ಕೆ ಸಮಾವೇಶ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಒಂದು ಸಾವಿರ ದಿನಗಳು ಪೂರೈಸುತ್ತಿರುವ ಹೊತ್ತಿನಲ್ಲಿ, ಇದೇ 14 ರಂದು ಹಾವೇರಿಯಲ್ಲಿ ಸಮಾವೇಶ ಹಮ್ಮಿಕೊಳ್ಳಲಾಗಿದೆ. ಅಂದು ಒಂದು ಲಕ್ಷ ಜನರಿಗೆ ಹಕ್ಕು ಪತ್ರಗಳನ್ನು ವಿತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.



ಕೃಷ್ಣ ಬೈರೇಗೌಡ

‘ಹಕ್ಕುಪತ್ರ ಎಂದರೆ ಕೇವಲ ಕಾಗದ ಅಲ್ಲ. ಇ– ಸ್ವತ್ತು ಕೊಡಬಹುದಾದ ಗಣಕೀಕೃತ ದಾಖಲೆ. ಯಾರೂ ನಕಲು ಮಾಡಲು ಸಾಧ್ಯವಾಗದ ಹಕ್ಕು ಪತ್ರ ಕೊಡಲಿದ್ದೇವೆ’ ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಇದಕ್ಕೂ ಮುನ್ನ ಸಮಾವೇಶದ ಕುರಿತಾಗಿ ಜಿಲ್ಲಾ ಉಸ್ತುವಾರಿ ಸಚಿವ ಶಿವಾನಂದ ಪಾಟೀಲ, ಶಾಸಕ ಶ್ರೀನಿವಾಸ ಮಾನೆ ಹಾಗೂ ಫಲಾನುಭವಿಗಳ ಜತೆ ಅವರು ಸಂವಾದ ನಡೆಸಿದರು.

‘ನಮ್ಮ ಸರ್ಕಾರ ಶೇ 100 ರಷ್ಟು ಭೂ ಗ್ಯಾರಂಟಿ ಕೊಡುತ್ತಿದೆ. ಹಕ್ಕುಪತ್ರದ ಜತೆ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಕೂಡ ಮಾಡಿಕೊಡುತ್ತೇವೆ. ದಾಖಲೆ ಗಳಿಲ್ಲದ ಗ್ರಾಮಗಳಲ್ಲಿ ವಾಸಿಸುವವರಿಗೆ ಹಕ್ಕುಪತ್ರ ನೀಡುತ್ತಿದ್ದೇವೆ. ದರ್ಖಾಸ್ತು, ಬಗರ್ ಹುಕುಂನಲ್ಲಿ ಮಂಜೂರಾದ ಜಮೀನುಗಳಿಗೆ ದಾಖಲೆ ಇರಲಿಲ್ಲ. ಅತಂತ್ರದಲ್ಲಿ ಬದುಕುತ್ತಿರುವವರಿಗೆ ಭರವಸೆ ನೀಡಿದ್ದೇವೆ. ಇದು ನಮ್ಮ ಸರ್ಕಾರದ ಮಹತ್ವದ ಸಾಧನೆ’ ಎಂದು ಹೇಳಿದರು.

‘ರಾಜ್ಯದಲ್ಲಿ 49 ಲಕ್ಷ ಜಮೀನುಗಳು ಮೃತರ ಹೆಸರಿನಲ್ಲಿ ಇವೆ. ಸಂಬಂಧ ಪಟ್ಟವರ ಹೆಸರಿಗೆ ಜಮೀನು ಮಾಡಿಕೊಡಲು ಅಧಿಕಾರಿಗಳು ಶ್ರಮಿಸುತ್ತಿದ್ದಾರೆ. ಭೂಮಾಲೀಕತ್ವ ಎಂದರೆ ಭೂವ್ಯಾಜ್ಯ ಎನ್ನುವ ಹಾಗಾಗಿದೆ. ಕೋರ್ಟ್, ಕಚೇರಿ ಅಲೆಯುವುದು ಹೆಚ್ಚಾಗಿತ್ತು. ಆದರೆ, ಈಗ ಸರ್ಕಾರದಿಂದಲೇ ಹಕ್ಕುಪತ್ರ ವಿತರಿಸಲಾಗುತ್ತಿದೆ’ ಎಂದು ಹೇಳಿದರು.

ಆಗುಂಬೆ ಘಾಟಿ: ಸುರಂಗ ಮಾರ್ಗ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಗುಂಬೆ ಘಾಟ್ ಮೂಲಕ ಹಾದುಹೋಗುವ ರಾಷ್ಟ್ರೀಯ ಹೆದ್ದಾರಿ–169ಎ ರಸ್ತೆಯನ್ನು ಎರಡು ಲೇನ್ ರಸ್ತೆ, ಎರಡೂ ಬದಿ ಪಾದಚಾರಿ ಮಾರ್ಗ ಸಹಿತ ವಿಸ್ತರಿಸುವ ಉದ್ದೇಶದಿಂದ ಕಾರ್ಯ ಸಾಧ್ಯತಾ ಅಧ್ಯಯನ ಹಾಗೂ ವಿವರವಾದ ಯೋಜನಾ ವರದಿ ತಯಾರಿಸಲು ಕೇಂದ್ರ ಭೂಸಾರಿಗೆ ಇಲಾಖೆ ಟೆಂಡರ್ ಆಹ್ವಾನಿಸಿದೆ.

ಡಿಪಿಆರ್ ವ್ಯಾಪ್ತಿಯು ನಿರ್ದಿಷ್ಟವಾಗಿ ಸುರಂಗ ವಿನ್ಯಾಸ ತಜ್ಞರು ಮತ್ತು ಹಿರಿಯ ಭೂ-ಭೌತಶಾಸ್ತ್ರಜ್ಞರ ತೊಡಗಿಸಿ ಕೊಳ್ಳುವಿಕೆ ಒಳಗೊಂಡಿದ್ದು, ಆಗುಂಬೆ ಘಾಟ್ ರಸ್ತೆಯಲ್ಲಿ ಸುರಂಗ ಮಾರ್ಗ ನಿರ್ಮಾಣದ ಆಯ್ಕೆಯ ಕಾರ್ಯ ಸಾಧ್ಯತೆ ಪರೀಕ್ಷಿಸಲು, ವಿವರವಾದ ಭೂ-ತಾಂತ್ರಿಕ ಪರಿಶೀಲನೆಗೆ ಮೀಸಲಾದ ಬಜೆಟ್ ನಿಬಂಧನೆಗಳೊಂದಿಗೆ ಅವಕಾಶ ಕಲ್ಪಿಸಲಾಗಿದೆ. ‘ದಶಕಗಳಿಂದಲೂ ಬಾಕಿ ಉಳಿದಿದ್ದ ಆಗುಂಬೆ ಘಾಟ್ ಮೇಲ್ದರ್ಜೆಗೇರಿಸುವ ಜನರ ಬೇಡಿಕೆಗೆ ಇದು ಸ್ಪಷ್ಟ ಹೆಜ್ಜೆಯಾಗಿದೆ’ ಎಂದು ಸಂಸದ ಬಿ.ವೈ.ರಾಘವೇಂದ್ರ ತಿಳಿಸಿದ್ದಾರೆ.

‘ಪರಿಸರ ಸೂಕ್ಷ್ಮ ಪ್ರದೇಶವಾಗಿರುವ ಹಾಗೂ ಅಪಾಯಕಾರಿ ಹಾಗೂ



ಅಪಘಾತಗಳಿಗೆ ಹೆಸರಾದ ಆಗುಂಬೆ ಘಾಟ್ ರಸ್ತೆಯ ಸುರಕ್ಷತೆ ಹೆಚ್ಚಿಸುವುದು, ಪಶ್ಚಿಮ ಘಟ್ಟ ಪ್ರದೇಶದ ಪ್ರಕೃತಿ ಸಂವೇದನಾಶೀಲತೆಗೆ ಗೌರವ ನೀಡುತ್ತಲೇ ವೈಜ್ಞಾನಿಕವಾಗಿ ರಸ್ತೆ ಅಭಿವೃದ್ಧಿ ಕೈಗೊಳ್ಳುವುದು ಈ ಯೋಜನೆಯ ಮುಖ್ಯ ಗುರಿ’ ಎಂದು ರಾಘವೇಂದ್ರ ಹೇಳಿದ್ದಾರೆ.

‘ಘಾಟ್ ರಸ್ತೆ ಅಭಿವೃದ್ಧಿಯಿಂದ ಮಲೆನಾಡು– ಕರಾವಳಿ ಜಿಲ್ಲೆಗಳ ಅಭಿವೃದ್ಧಿಗೆ ಹೊಸ ದಿಕ್ಕು ಲಭ್ಯವಾಗಲಿದ್ದು, ಸ್ಥಳೀಯ ನಿವಾಸಿಗಳು, ರೈತರು, ಅಕ್ಕಪಕ್ಕದ ಜಿಲ್ಲೆಗಳು, ಪ್ರವಾಸೋದ್ಯಮ, ತುರ್ತು ಸೇವೆಗಳಿಗೆ ಗಣನೀಯ ಲಾಭವಾಗಲಿದೆ’ ಎಂದರು.

‘ಮುಂದಿನ ಹಂತಗಳಲ್ಲಿ ಯೋಜನೆ ಸುಗಮವಾಗಿ ಸಾಗಲು ಕೇಂದ್ರದೊಂದಿಗೆ ನಿರಂತರ ಸಮನ್ವಯ ಮುಂದುವರಿಸಲಾಗುವುದು. ಭೂಸ್ವಾಧೀನ ಮತ್ತು ಕಾನೂನು ಪ್ರಕ್ರಿಯೆಗಳಲ್ಲಿ ರಾಜ್ಯ ಸರ್ಕಾರ ಸಂಪೂರ್ಣ ಸಹಕಾರ ನೀಡಬೇಕು’ ಎಂದು ಮನವಿ ಮಾಡಿದ್ದಾರೆ.

‘ನಲಿ ಕಲಿ ಯೋಜನೆ ಅನುಷ್ಠಾನದಲ್ಲಿ ವಿಫಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಿಕ್ಷಣ ಇಲಾಖೆಯ ನಲಿಕಲಿ ಯೋಜನೆಯ ಪರಿಕಲ್ಪನೆಯು ಬಹಳ ಚೆನ್ನಾಗಿದ್ದರೂ ಅದನ್ನು ಅನುಷ್ಠಾನ ಮಾಡುವಲ್ಲಿ ಶಿಕ್ಷಕರು ವಿಫಲರಾಗಿದ್ದಾರೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಸದಸ್ಯ ರವಿಕುಮಾರ್ ನೀಹ ಅವರು ನಲಿಕಲಿ ಯೋಜನೆ ಸಫಲತೆ ಮತ್ತು ವಿಫಲತೆಗಳ ಸಿದ್ಧಪಡಿಸಿದ ವರದಿಯನ್ನು ಪ್ರಾಧಿಕಾರದ ಸರ್ವ ಸದಸ್ಯರ ಸಭೆಯಲ್ಲಿ ಚರ್ಚಿಸಿ, ಅಂತಿಮಗೊಳಿಸಿದ ವರದಿಯನ್ನು ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಮಂಗಳವಾರ ಸಲ್ಲಿಸಲಾಯಿತು.

‘ನಲಿಕಲಿ ಯೋಜನೆಯ 80 ನಿಮಿಷಗಳ ಒಂದು ಅವಧಿಯನ್ನು ಸೃಜನಾತ್ಮಕವಾಗಿ ಬಳಸಿಕೊಳ್ಳುವಲ್ಲಿ ಶಿಕ್ಷಕರು ವಿಫಲರಾಗಿದ್ದಾರೆ. ತರಬೇತಿ ಪಡೆದ ಶಿಕ್ಷಕರು ನಿವೃತ್ತರಾದಾಗ ಅವರ ಜಾಗದಲ್ಲಿ ನೇಮಕಗೊಂಡ ಅತಿಥಿ ಶಿಕ್ಷಕರಿಗೆ ಸೂಕ್ತವಾದ ತರಬೇತಿ ನೀಡಿಲ್ಲ. ಒಂದರಿಂದ 3ನೇ ತರಗತಿಯವರೆಗಿನ ಮಕ್ಕಳ ವಯಸ್ಸು, ಕಲಿಕಾ ಮಟ್ಟ ಮತ್ತು



ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ನಲಿಕಲಿ ಯೋಜನೆಗೆ ಸಂಬಂಧಿಸಿದ ವರದಿಯನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ಸಲ್ಲಿಸಿದರು. ಪ್ರಾಧಿಕಾರದ ನಾಮನಿರ್ದೇಶಿತ ಸದಸ್ಯ ರವಿಕುಮಾರ್ ನೀಹ, ಕಾರ್ಯದರ್ಶಿ ಸಂತೋಷ ಹಾನಗಲ್ಲ ಹಾಗೂ ಆಪ್ತ ಕಾರ್ಯದರ್ಶಿ ಟಿ.ಎಸ್ ಫಣಿಕುಮಾರ್ ಉಪಸ್ಥಿತರಿದ್ದರು

ಕಲಿಕಾ ಸಾಮರ್ಥ್ಯ ಒಂದೇ ರೀತಿ ಇರುವುದಿಲ್ಲ. ಇಂಥ ಸಂದರ್ಭದಲ್ಲಿ ಬಹು ವರ್ಗ ಬೋಧನೆಯನ್ನು ಅರ್ಥಪೂರ್ಣಗೊಳಿಸಲು ಬೇಕಾದ ಗುಂಪು ರಚನೆ ಹಾಗೂ ನಿರ್ವಹಣೆಯ ವಿಷಯದಲ್ಲಿ ಶಿಕ್ಷಕರು ವಿಫಲರಾಗಿದ್ದಾರೆ. ಇದರಿಂದ ಭಾಷಾ ಕಲಿಕೆಗೆ ತೀವ್ರ ಹಿನ್ನಡೆಯಾಗಿದೆ’ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

‘ಹೆಚ್ಚು ಸಂಖ್ಯೆಯ ವಿದ್ಯಾರ್ಥಿಗಳಿರುವ ತರಗತಿಗಳಲ್ಲಿ ಎಲ್ಲ ಮಕ್ಕಳ ಮೇಲೂ ಸಮಾನವಾಗಿ ಗಮನ ಹರಿಸಲು ಶಿಕ್ಷಕರಿಗೆ ಸಾಧ್ಯವಾಗಿಲ್ಲ. ತರಗತಿಗಳನ್ನು ಅರ್ಥಪೂರ್ಣವಾಗಿ ನಡೆಸಲು ಬೇಕಾದ ಕಲಿಕಾ ಸಾಮಗ್ರಿಗಳು ಹಲವು ಶಾಲೆಗಳಿಗೆ ಪೂರೈಕೆ ಆಗಿಲ್ಲ. ಅನೇಕ ಶಿಕ್ಷಕರಿಗೆ ನಲಿ ಕಲಿ ಯೋಜನೆಯ ಬಗ್ಗೆ ಸ್ಪಷ್ಟ ಕಲ್ಪನೆಯೇ ಇಲ್ಲ. ಕೆಲವರು ನಲಿ ಕಲಿ ಯೋಜನೆಯನ್ನು ಸಂಸ್ಕೃತಿ ಆಧಾರಿತ ಪ್ರಕ್ರಿಯೆಯಾಗಿ ಬೆಳೆಸಲೂ ಇಲ್ಲ. ಮತ್ತೆ ಹಲವರು ಯೋಜನೆಯನ್ನು ಸಾಕಾರಗೊಳಿಸಲು ಬೇಕಾದ ತಯಾರಿ ಮಾಡಿಕೊಂಡಿರಲಿಲ್ಲ’ ಎಂದು ತಿಳಿಸಿದೆ.

‘ಮೂರು ತರಗತಿಗಳಿಗೆ ಒಬ್ಬರು ಶಿಕ್ಷಕರಾ? ಎಂದು ಪೋಷಕರು ಪ್ರಶ್ನಿಸುತ್ತಾರೆ. ಅವರಿಗೆ ನಲಿ ಕಲಿ ಯೋಜನೆಯ ಮಹತ್ವ ತಿಳಿದಿರುವುದಿಲ್ಲ. ಅಂತಹವರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳಿಸಿದ್ದಾರೆ. ಇದರಿಂದಾಗಿ ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಕಡಿಮೆಯಾಗಿದೆ. ವಿದ್ಯಾರ್ಥಿಗಳ ಪ್ರಗತಿಯನ್ನು ನಿರಂತರವಾಗಿ ದಾಖಲಿಸುವುದು ಮತ್ತು ಮೌಲ್ಯಮಾಪನ ಮಾಡುವುದು ಶ್ರಮದಾಯಕವಾದ ಕೆಲಸ. ಅನೇಕ ಕೆಲಸಗಳಲ್ಲಿ ಮಗ್ನರಾದ ಶಿಕ್ಷಕರಿಗೆ ಇದನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಾಧ್ಯವಾಗಿಲ್ಲ’ ಎಂದು ವರದಿಯಲ್ಲಿ ಹೇಳಲಾಗಿದೆ.

‘ನಲಿಕಲಿ ಯೋಜನೆಯನ್ನು ಮುಂದುವರಿಸುವ ಬಗ್ಗೆ ಶಿಕ್ಷಣ ಇಲಾಖೆ ಮರು ಚಿಂತನೆ ನಡೆಸಬೇಕು. ಈ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳಲು ಈ ವರದಿ ಅನುಕೂಲವಾಗಲಿದೆ’ ಎಂದು ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಸಿಯೂಟ ಸಿಬ್ಬಂದಿ ಮುಷ್ಕರ: ಪರ್ಯಾಯಕ್ಕೆ ಸೂಚನೆ

ಬೆಂಗಳೂರು: ಅಕ್ಷರ ದಾಸೋಹ (ಬಿಸಿಯೂಟ) ಸಿಬ್ಬಂದಿ ಫೆ.12ರಂದು ಒಂದು ದಿನದ ಮುಷ್ಕರ ಹಮ್ಮಿಕೊಂಡಿದ್ದು, ಅಂದು ಸರ್ಕಾರಿ ಮತ್ತು ಅನುದಾನಿತ ಶಾಲೆಗಳ ಮಕ್ಕಳಿಗೆ ಬಿಸಿಯೂಟ, ಕ್ಷೀರಭಾಗ್ಯ ಹಾಗೂ ಪೂರಕ ಪೌಷ್ಟಿಕ ಆಹಾರ ವಿತರಣೆಯಲ್ಲಿ ವ್ಯತ್ಯಯವಾಗದಂತೆ ಅಗತ್ಯ ಕ್ರಮ ಕೈಗೊಳ್ಳಲು ಶಿಕ್ಷಣ ಇಲಾಖೆ ಸೂಚಿಸಿದೆ.

ಈ ಕುರಿತು ಪಿಎಂ ಪೋಷಣ್ ಶಕ್ತಿ ನಿರ್ಮಾಣ್ ಯೋಜನೆಯ ನಿರ್ದೇಶಕರು ಸುತ್ತೋಲೆ ಹೊರಡಿಸಿದ್ದು, ಬಿಸಿಯೂಟ ಸಿಬ್ಬಂದಿಯು ಮುಷ್ಕರದಲ್ಲಿ ಭಾಗವಹಿಸದಂತೆ ಆಯಾ ಶಾಲೆಯ ಮುಖ್ಯ ಶಿಕ್ಷಕರು ಅವರ ಮನವೊಲಿಸಲು ಪ್ರಯತ್ನಿಸಬೇಕು. ಸಿಬ್ಬಂದಿ ಮುಷ್ಕರದಲ್ಲಿ ಪಾಲ್ಗೊಂಡರೆ ಸ್ಥಳೀಯವಾಗಿ ಪರ್ಯಾಯ ವ್ಯವಸ್ಥೆಗಳನ್ನು ಮಾಡಿಕೊಂಡು ವಿದ್ಯಾರ್ಥಿಗಳಿಗೆ ಸಕಾಲದಲ್ಲಿ ಊಟ ಮತ್ತು ಹಾಲು ವಿತರಿಸಬೇಕು ಎಂದು ಹೇಳಿದ್ದಾರೆ.

ಕೇಂದ್ರ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳನ್ನು ಖಂಡಿಸಿ ಫೆ. 12ರಂದು ಸಿಐಟಿಯು ನೇತೃತ್ವದಲ್ಲಿ ಮುಷ್ಕರಕ್ಕೆ ಕರೆ ನೀಡಿದೆ.

ಬೊಕ್ಕಸದ ಹೊರೆ ತಗ್ಗಿಸಿದ ಸುಪ್ರೀಂ ಕೋರ್ಟ್ ತೀರ್ಪು

ಒಂದನೇ ಪುಟದಿಂದ...

ಭೂಸ್ವಾಧೀನ ಪ್ರಕರಣಗಳಲ್ಲಿ ವಿಳಂಬ ಅರ್ಜಿಗಳನ್ನು ಪರಿಗಣಿಸುವಾಗ, ಹೈಕೋರ್ಟ್‌ಗಳು ಉದಾರ ಮತ್ತು ಪ್ರಾಯೋಗಿಕ ದೃಷ್ಟಿಕೋನ ಅಳವಡಿಸಿಕೊಳ್ಳಬೇಕು ಎಂದು ನ್ಯಾಯಪೀಠ ನಿರ್ದೇಶಿಸಿದೆ.

ಅನೇಕ ಪ್ರಕರಣಗಳಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು 1894ರ ಭೂ ಸ್ವಾಧೀನ ಕಾಯ್ದೆಯಡಿ ಆರಂಭಿಸಲಾಗಿತ್ತು. ಆದರೆ, ಭೂ ಪರಿಹಾರ ನಿಗದಿಪಡಿಸಿರಲಿಲ್ಲ. ಅದೇ ಹೊತ್ತಿಗೆ 2013ರ ಕಾಯ್ದೆ ಜಾರಿಗೆ ಬಂದಿತ್ತು. ಇವುಗಳಿಗೆ ಯಾವ ಕಾಯ್ದೆ ಅನ್ವಯಿಸುತ್ತದೆ ಎಂಬ ಗೊಂದಲ ಉಂಟಾಗಿತ್ತು. ಇದಕ್ಕೆ ಸ್ಪಷ್ಟನೆ ನೀಡಿರುವ ನ್ಯಾಯಪೀಠ, ‘ಇಂತಹ ಪ್ರಕರಣ ಗಳಲ್ಲಿ 2013ರ ಕಾಯ್ದೆಯಡಿ ಪರಿಹಾರ ನಿರ್ಣಯಿಸಬೇಕು’ ಎಂದು ಸೂಚಿಸಿದೆ.

ವ್ಯಾಪಕ ಪರಿಣಾಮ: ಸಚಿವ ಕೃಷ್ಣ ಬೈರೇಗೌಡ

‘ಈ ತೀರ್ಪು ರಾಜ್ಯದ ಆರ್ಥಿಕ ಸ್ಥಿತಿಗತಿಗಳ ಮೇಲೆ ವ್ಯಾಪಕ ಪರಿಣಾಮ ಬೀರಲಿದೆ. ಕರ್ನಾಟಕ ಸರ್ಕಾರದ ಕಾನೂನು ಹೋರಾಟದಿಂದಾಗಿ ಸರ್ಕಾರಿ ಬೊಕ್ಕಸದ ಸಾವಿರಾರು ಕೋಟಿ ರೂಪಾಯಿ ಹಣದ ರಕ್ಷಣೆ ಆಗಿದೆ. ಸರ್ಕಾರಕ್ಕೆ ಉಂಟಾಗುತ್ತಿದ್ದ ಹೊರೆ ತಗ್ಗಿದೆ’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

‘ಕೆಲವೊಂದು ಪ್ರಕರಣಗಳಲ್ಲಿ ಸರ್ಕಾರಿ ವಕೀಲರು ಸಿವಿಲ್ ನ್ಯಾಯಾಲಯಗಳಲ್ಲಿ ಸರಿಯಾದ ವಾದ ಮಂಡಿಸಿರಲಿಲ್ಲ. ಜತೆಗೆ, ಹೈಕೋರ್ಟ್‌ಗಳಲ್ಲಿ ಸಮಯಕ್ಕೆ ಸರಿಯಾಗಿ ಮೇಲ್ಮನವಿಗಳನ್ನು ಸಲ್ಲಿಸಿರಲಿಲ್ಲ. ಇದರಿಂದಾಗಿ, ಮೇಲ್ಮನವಿಗಳು ವಜಾಗೊಂಡಿದ್ದವು. ಈ ಪ್ರಕರಣಗಳಲ್ಲಿ, ಅಧಿಕಾರಿಗಳು ಮತ್ತು ವಕೀಲರ ನಡುವೆ ವ್ಯವಸ್ಥಿತ ಒಳ ಒಪ್ಪಂದಗಳು ನಡೆದಿರುವ ಸಾಧ್ಯತೆಯಿದೆ. ಇದರ ಪರಿಣಾಮವಾಗಿ, ನ್ಯಾಯಾಲಯಗಳು ದುಪ್ಪಟ್ಟು ಪರಿಹಾರ ಆದೇಶಗಳನ್ನು ಹೊರಡಿಸಿದ್ದವು. ಇದರಿಂದಾಗಿ ಸರ್ಕಾರದ ಖಜಾನೆಗೆ ಸಾವಿರಾರು ಕೋಟಿ ರೂಪಾಯಿಗಳ ಭಾರಿ ನಷ್ಟವಾಗುವ ಸಾಧ್ಯತೆ ಇತ್ತು. ಇಂತಹ ಷಡ್ಯಂತ್ರಗಳು ರಾಜ್ಯದಾದ್ಯಂತ ನಡೆದಿರುವುದು ಬೆಳಕಿಗೆ ಬಂದಿದ್ದು, ಇದರಿಂದಾಗಿ ಭವಿಷ್ಯದಲ್ಲಿಯೂ ಸಾವಿರಾರು ಕೋಟಿ ರೂಪಾಯಿಗಳ ನಷ್ಟ ಉಂಟಾಗುತ್ತಿತ್ತು. ಇದರಿಂದ ಉಂಟಾಗುವ ಗಂಭೀರ ಆರ್ಥಿಕ ಪರಿಣಾಮದ ಪರಾಮರ್ಶೆ ನಡೆಸಿ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು‘ ಎಂದು ಅವರು ತಿಳಿಸಿದರು.

‘ಮೇಲ್ಮನವಿಗಳ ಸಲ್ಲಿಸುವ ಸಂದರ್ಭದ ವಿಳಂಬಗಳ ಕಾರಣಗಳನ್ನು ಪರಿಶೀಲಿಸಿ ತಪ್ಪಿತಸ್ಥ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಲು ಉನ್ನತ ಮಟ್ಟದ ವಿಚಾರಣಾ ಸಮಿತಿಯನ್ನು 2025ರ ಸೆಪ್ಟೆಂಬರ್‌ನಲ್ಲಿ ರಚಿಸಲಾಗಿದೆ. ಸಮಿತಿಯು ಶೀಘ್ರ ವರದಿ ಸಲ್ಲಿಸಲಿದೆ’ ಎಂದರು.

ರಾಜ್ಯದ 530 ಮೇಲ್ಮನವಿಗಳ ವಿಚಾರಣೆ

ಬೆಂಗಳೂರಿನ ಬಿನ್ನಿ ಮಿಲ್ ರಸ್ತೆ ವಿಸ್ತರಣೆಗಾಗಿ ಎಸ್.ವಿ.ಗ್ಲೋಬಲ್ ಮಿಲ್ ಲಿಮಿಟೆಡ್‌ನ 3.16 ಎಕರೆ ಸ್ವಾಧೀನಪಡಿಸಿಕೊಳ್ಳಲು ಬಿಬಿಎಂಪಿ 2010ರಲ್ಲಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿತ್ತು. 2013ರ ನವೆಂಬರ್‌ನಲ್ಲಿ ಅಂತಿಮ ಅಧಿಸೂಚನೆ ಪ್ರಕಟವಾಗಿತ್ತು. 2014ರ ಜನವರಿ 14ರಂದು ಜಾಗ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಆದರೆ, ಹೊಸ ಕಾಯ್ದೆ 2014ರ ಜನವರಿ 1ರಂದು ಜಾರಿಗೆ ಬಂದಿತ್ತು. ಆಗ ಚದರ ಅಡಿಗೆ ₹4,620 ನಿಗದಿಪಡಿಸಲಾಗಿತ್ತು.

2013ರ ಕಾಯ್ದೆಯ ಸೆಕ್ಷನ್ 64ರ ಅಡಿಯಲ್ಲೇ ಭೂಪರಿಹಾರ ನಿಗದಿಪಡಿಸಬೇಕು ಎಂದು ಒತ್ತಾಯಿಸಿ ಕಂಪನಿಯು ನ್ಯಾಯಾಲಯದ ಮೊರೆ ಹೋಗಿತ್ತು. ನ್ಯಾಯಾಲಯವು ಚದರ ಅಡಿಗೆ ₹8,624 ನಿಗದಿಪಡಿಸಿ 2018ರಲ್ಲಿ ಆದೇಶ ಹೊರಡಿಸಿತ್ತು. ಈ ಆದೇಶ ಪ್ರಶ್ನಿಸಿ ರಾಜ್ಯ ಸರ್ಕಾರವು ಹೈಕೋರ್ಟ್ ಮೊರೆ ಹೋಗಿತ್ತು. ರಾಜ್ಯ ಸರ್ಕಾರವು 120 ದಿನಗಳು ದಾಟಿದ ಬಳಿಕವಷ್ಟೇ ಮೇಲ್ಮನವಿ ಸಲ್ಲಿಸಿದೆ ಎಂಬ ಕಾರಣ ನೀಡಿ ಹೈಕೋರ್ಟ್ ಈ ಅರ್ಜಿಯನ್ನು ವಜಾಗೊಳಿಸಿತ್ತು. ಆ ಬಳಿಕ ರಾಜ್ಯ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಇನ್ನೊಂದೆಡೆ, ವಿವಿಧ ಸಾರ್ವಜನಿಕ ಹಾಗೂ ಮೂಲಸೌಕರ್ಯ ಯೋಜನೆಗಳಿಗಾಗಿ ಸಾವಿರಾರು ಎಕರೆ ಜಾಗ ಸ್ವಾಧೀನ ಪಡಿಸಿಕೊಳ್ಳಲಾಗಿತ್ತು. ಭೂಸ್ವಾಧೀನ ಅಧಿಕಾರಿಗಳು ನಿಗದಿಪಡಿಸಿದ್ದಕ್ಕಿಂತ ಹೆಚ್ಚಿನ ಪರಿಹಾರ ಕೋರಿ ಭೂಮಾಲೀಕರು ಸಿವಿಲ್ ನ್ಯಾಯಾಲಯಗಳ ಮೊರೆ ಹೋಗಿದ್ದರು. ಭೂ ಪರಿಹಾರ ಮೊತ್ತವನ್ನು ನ್ಯಾಯಾಲಯಗಳು ಹೆಚ್ಚಿಸಿದ್ದವು. ಈ ಆದೇಶಗಳನ್ನು ಪ್ರಶ್ನಿಸಿ ಸರ್ಕಾರವು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಆದಾಗ್ಯೂ, 120 ದಿನಗಳನ್ನು ಮೀರಿದ ವಿಳಂಬವನ್ನು 2013ರ ಕಾಯ್ದೆಯಡಿಯಲ್ಲಿ ಕ್ಷಮಿಸಲು ಸಾಧ್ಯವಿಲ್ಲ ಎಂಬ ಕಾರಣಕ್ಕೆ ಹೆಚ್ಚಿನ ಮೇಲ್ಮನವಿಗಳನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಕೃಷ್ಣಾ ಮೇಲ್ದಂಡೆ ಯೋಜನೆ, ಸಿಂಗಟಾಲೂರು ಏತ ನೀರಾವರಿ ಯೋಜನೆ, ರಾಜ್ಯ ಹೆದ್ದಾರಿ ಯೋಜನೆಗಳು ಮತ್ತು ಇತರ ಪ್ರಮುಖ ಅಭಿವೃದ್ಧಿ ಯೋಜನೆಗಳ ಭೂಸ್ವಾಧೀನ ಪ್ರಕರಣಗಳಲ್ಲೂ ಇದೇ ರೀತಿ ಆಗಿತ್ತು. ರಾಜ್ಯ ಸರ್ಕಾರದ 530 ಮೇಲ್ಮನವಿಗಳು ಹಾಗೂ ಬೇರೆ ರಾಜ್ಯಗಳ ಕೆಲವೊಂದು ಮೇಲ್ಮನವಿಗಳನ್ನು ಒಟ್ಟಾಗಿ ವಿಚಾರಣೆ ನಡೆಸಿದ ನ್ಯಾಯಪೀಠವು ಈ ತೀರ್ಪು ನೀಡಿದೆ.

ಬಾಲ್ಯ ವಿವಾಹ: ಹೈಕೋರ್ಟ್ ಕಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅನಕ್ಷರತೆ ಎಂಬುದು ಬಾಲ್ಯ ವಿವಾಹದಂತಹ ಗಂಭೀರ ಪ್ರಕರಣಗಳನ್ನು ರದ್ದುಪಡಿಸಲು ಆಧಾರ ಎನಿಸುವುದಿಲ್ಲ’ ಎಂದು ಹೈಕೋರ್ಟ್, ಕ್ರಿಮಿನಲ್ ಪ್ರಕರಣವೊಂದರ ವಿಚಾರಣೆ ವೇಳೆ ಮತ್ತೊಮ್ಮೆ ಕಿಡಿ ಕಾರಿದೆ.

‘ನಮ್ಮ ವಿರುದ್ಧದ ಎಫ್‌ಐಆರ್ ಮತ್ತು ಈ ಸಂಬಂಧ ಚಿಕ್ಕಬಳ್ಳಾಪುರ ಜಿಲ್ಲಾ ಮತ್ತು ಸೆಷನ್ಸ್ (ಎಫ್‌ಟಿಎಸ್ಸಿ ವಿಶೇಷ) ಕೋರ್ಟ್‌ನಲ್ಲಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಗೌರಿಬಿದನೂರು ತಾಲ್ಲೂಕು ಪಾಯಿಪಳ್ಳಿ ಲಕ್ಕಸಂದ್ರದ, ಅಶೋಕ (56), ಅಶ್ವತ್ಥ ನಾರಾಯಣ (55), ರಂಗಮ್ಮ (49) ರಾಮಾಂಜಿನಮ್ಮ (48) ಮತ್ತು ಶ್ರೀರಾಮಪ್ಪ (56) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, ‘ಹುಡುಗ-ಹುಡುಗಿ ಪರಸ್ಪರ ಪ್ರೀತಿಸುತ್ತಿದ್ದರು. ಮದುವೆ ನಡೆದಾಗ ಯುವತಿಗೆ 16 ವರ್ಷ 9 ತಿಂಗಳಾಗಿತ್ತು. ದಂಪತಿಗೆ ಈಗಾಗಲೇ ಒಂದು ಮಗು ಜನಿಸಿದೆ. ಅರ್ಜಿದಾರರು ಅನಕ್ಷರಸ್ಥರು. ಇವರೆಲ್ಲಾ ವಿವಾಹವಾಗಿರುವ ಯುವಕ-ಯುವತಿಯ ಪೋಷಕರಾಗಿದ್ದಾರೆ. ತಿಳಿವಳಿಕೆ ಇಲ್ಲದೆ ಎಲ್ಲರೂ ಸೇರಿಕೊಂಡು ವಿವಾಹ ಮಾಡಿಸಿದ್ದಾರೆ. ಆದ್ದರಿಂದ, ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿದರು.



ಬಾಲ್ಯ ವಿವಾಹ ಪದ್ಧತಿ ನಿಲ್ಲಬೇಕಿದೆ. ಈ ದಿಕ್ಕಿನಲ್ಲಿ ಪೋಷಕರು ಎಚ್ಚೆತ್ತು ಕೊಳ್ಳುವುದು ಯಾವಾಗ? ಬಾಲ್ಯ ವಿವಾಹ ನೆರವೇರಿಸಿದ ಪೋಷಕರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲಾಗದು

ನ್ಯಾ.ಎಂ.ನಾಗಪ್ರಸನ್ನ

ಈ ಮಾತಿಗೆ ಕೆರಳಿದ ನ್ಯಾಯಮೂರ್ತಿಗಳು, ‘ಯಾವುದೇ ಕಾರಣಕ್ಕೂ ಬಾಲ್ಯ ವಿವಾಹ ನೆರವೇರಿಸಿದ ಪೋಷಕರ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಸಾಧ್ಯವಿಲ್ಲ. ಅವರೆಲ್ಲಾ ಪ್ರಕರಣದ ವಿಚಾರಣೆಯನ್ನು ಎದುರಿಸಲೇಬೇಕು. ಈ ವಿಷಯದಲ್ಲಿ ಪೋಷಕರಿಗೆ ಕರುಣೆ ತೋರುವ ಪ್ರಶ್ನೆಯೇ ಇಲ್ಲ’ ಎಂದು ಗುಡುಗಿದರು.

‘ಪ್ರಕರಣದಲ್ಲಿ ಮದುವೆಯಾಗಿರುವ ಯುವತಿಗೆ ಮಗು ಜನಿಸಿದೆ. ಈ ಅಂಶವನ್ನು ಪರಿಗಣಿಸಿ ಪೋಕ್ಸೊ ಕಾಯ್ದೆ ರದ್ದುಪಡಿಸಬಹುದು. ಆದರೆ, ಪೋಷಕರ ವಿರುದ್ಧದ ಬಾಲ್ಯ ವಿವಾಹ ಪ್ರಕರಣ ಮುಂದುವರಿಯಬೇಕು. ಈ ವಿಚಾರದಲ್ಲಿ ದಯೆ ತೋರುವ ಅಗತ್ಯವಿಲ್ಲ’ ಎಂದು ಪುನರುಚ್ಚರಿಸಿದ ನ್ಯಾಯಮೂರ್ತಿಗಳು, ಅರ್ಜಿ ಕುರಿತಂತೆ ತೀರ್ಪು ಕಾಯ್ದಿರಿಸಿ ಆದೇಶಿಸಿದರು.

ಪೋಷಕರ ವಿರುದ್ಧ ಗುರುತರ ಆರೋಪ

ಅರ್ಜಿದಾರ ಪೋಷಕರ ವಿರುದ್ಧ 16 ವರ್ಷ 9 ತಿಂಗಳ ವಯಸ್ಸಿನ ಯುವತಿಗೆ ಮದುವೆ ಮಾಡಿಸಿದ ಆರೋಪದಡಿ ಗೌರಿಬಿದನೂರು ಗ್ರಾಮಾಂತರ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ.

ಅರ್ಜಿದಾರರು ಭಾರತೀಯ ದಂಡ ಸಂಹಿತೆ-1860ರ ಕಲಂ 376 (2) (ಎನ್) (ನಿರ್ದಿಷ್ಟ ಮಹಿಳೆಯ ಮೇಲೆ ಪದೇ ಪದೇ ಅತ್ಯಾಚಾರ) ಮತ್ತು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012ರ (ಪೋಕ್ಸೊ) ಕಲಂ 5 (ಜೆ) (II) (ಲೈಂಗಿಕ ದೌರ್ಜನ್ಯದ ಪರಿಣಾಮ ಬಾಲಕಿ ಗರ್ಭಿಣಿಯಾದರೆ) ಮತ್ತು ಬಾಲ್ಯವಿವಾಹ ನಿಷೇಧ ಕಾಯ್ದೆ–2006ರ ಕಲಂ 9, 10 ಮತ್ತು 11ರ ಅಡಿಯಲ್ಲಿನ ಗುರುತರ ಕ್ರಿಮಿನಲ್ ಪ್ರಕರಣ ಎದುರಿಸುತ್ತಿದ್ದಾರೆ.

ವಚನ ಸಿರಿ, ಸಾಹಿತ್ಯ ಸಿರಿ ಪ್ರಶಸ್ತಿಗೆ ಆಯ್ಕೆ

ಪ್ರಜಾವಾಣಿ ವಾರ್ತೆ

ಸಿಂದಗಿ (ವಿಜಯಪುರ ಜಿಲ್ಲೆ): ರಾಜ್ಯಮಟ್ಟದ 'ವಚನ ಸಿರಿ' ಪ್ರಶಸ್ತಿಗೆ ಧಾರವಾಡದ ಪ್ರಾಧ್ಯಾಪಕಿ ವೀಣಾ ಯಲಿಗಾರ ಮತ್ತು 'ಸಾಹಿತ್ಯ ಸಿರಿ' ಪ್ರಶಸ್ತಿಗೆ ಮುದ್ದೇಬಿಹಾಳ ತಾಲ್ಲೂಕು ಕೊಣ್ಣೂರು ಗ್ರಾಮದ ಸಾಹಿತಿ ಬಿ.ಆರ್. ಪೋಲಿಸ ಪಾಟೀಲ ಆಯ್ಕೆಯಾಗಿದ್ದಾರೆ. ಪ್ರಶಸ್ತಿ ತಲಾ ₹10 ಸಾವಿರ ಒಳಗೊಂಡಿದೆ.



ವೀಣಾ ಯಲಿಗಾರ



ಬಿ.ಆರ್. ಪೋಲಿಸ ಪಾಟೀಲ

ಸಂಶೋಧಕ ಎಂ.ಎಂ.ಕಲಬುರ್ಗಿ ಹೆಸರಿನಲ್ಲಿ ಅವರ ಕುಟುಂಬದವರು ಸ್ಥಾಪಿಸಿರುವ ಕಲಬುರ್ಗಿ ಫೌಂಡೇಶನ್ ಪ್ರಶಸ್ತಿ ನೀಡುತ್ತಿದೆ. ಫೆ.28ರಂದು ತಾಲ್ಲೂಕಿನ ಸಿದ್ಧಾರೂಢಮಠದ ಆವರಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಫೌಂಡೇಶನ್ ಅಧ್ಯಕ್ಷ ಶಿವಲಿಂಗ ಕಲಬುರ್ಗಿ ತಿಳಿಸಿದ್ದಾರೆ.

ಭದ್ರಾ ಮೇಲ್ದಂಡೆ: ನಿರ್ಲಕ್ಷ್ಯಕ್ಕೆ ಆಕ್ರೋಶ

ಚಿತ್ರದುರ್ಗ ಜಿಲ್ಲೆಯ ವಿವಿಧ ಪಟ್ಟಣಗಳಲ್ಲಿ ಬಂದ್; ಕೇಂದ್ರದ ವಿರುದ್ಧ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಭದ್ರಾ ಮೇಲ್ದಂಡೆ ಯೋಜನೆಯ ಕಾಮಗಾರಿ ಅನುಷ್ಠಾನದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ' ಎಂದು ಆರೋಪಿಸಿ ರೈತಸಂಘ ಮತ್ತು ಹಸಿರು ಸೇನೆ ಮಂಗಳವಾರ ಕರೆ ನೀಡಿದ್ದ ಹಿರಿಯೂರು, ಹೊಳಲ್ಕೆರೆ, ಮೊಳಕಾಲ್ಮುರು, ಹೊಸದುರ್ಗ ಬಂದ್‌ಗೆ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಯಿತು.

'ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಲು ಕೇಂದ್ರ ಸರ್ಕಾರ ವಿಫಲವಾಗಿದೆ. ಬಜೆಟ್‌ನಲ್ಲಿ ಘೋಷಿಸಿದ್ದ ₹5,300 ಕೋಟಿ ಅನುದಾನವನ್ನೂ ಬಿಡುಗಡೆ ಮಾಡಿಲ್ಲ. ರಾಜ್ಯ ಸರ್ಕಾರ ಕಳೆದ ಬಜೆಟ್‌ನಲ್ಲಿ ಘೋಷಿಸಿದ್ದ ಅನುದಾನವನ್ನು ಎತ್ತಿನಹೊಳೆ ಯೋಜನೆಗೆ ವರ್ಗಾಯಿಸಿದೆ' ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿರುದ್ಧ ಘೋಷಣೆ ಕೂಗಿದರು.

'ಸರ್ಕಾರಗಳು ಅನುದಾನ ಬಿಡುಗಡೆ ಮಾಡದ ಕಾರಣ ಗುತ್ತಿಗೆದಾರರು ಕೆಲಸ ಸ್ಥಗಿತಗೊಳಿಸಿದ್ದಾರೆ. ಕಾಮಗಾರಿ ವಿಳಂಬವಾಗುತ್ತಿದೆ. ಯೋಜನಾ ವೆಚ್ಚವೂ ಹೆಚ್ಚುತ್ತಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ತಿಕ್ಕಾಟದಲ್ಲಿ ಜಿಲ್ಲೆಯ ಜನರು ಬಸವಳಿದಿದ್ದಾರೆ' ಎಂದು ಆರೋಪಿಸಿದರು.

'ಕೂಡಲೇ ಯೋಜನೆಯ ಜಾರಿಗೆ ಹಸಿರು ನಿಶಾನೆ ತೋರದಿದ್ದರೆ ಮುಂದಿನ ದಿನಗಳಲ್ಲಿ ಹೋರಾಟವನ್ನು ತೀವ್ರಗೊಳಿಸಲಾಗುವುದು' ಎಂದು ಅವರು ಎಚ್ಚರಿಸಿದರು.

ಶಾಲೆ– ಕಾಲೇಜು, ಸರ್ಕಾರಿ ಕಚೇರಿಗಳು, ಬ್ಯಾಂಕ್‌ಗಳು ಎಂದಿನಂತೆ ಕಾರ್ಯನಿರ್ವಹಿಸಿದವು. ವ್ಯಾಪಾರಿಗಳು ವಹಿವಾಟು ಬಂದ್ ಮಾಡಿದ್ದರು.



ಭದ್ರಾ ಮೇಲ್ದಂಡೆ ಯೋಜನೆ ಜಾರಿಗೆ ಆಗ್ರಹಿಸಿ ಮಂಗಳವಾರ ನಡೆದ ಹೊಳಲ್ಕೆರೆ ಬಂದ್ ವೇಳೆ ಅಂಗಡಿಗಳು ಮುಚ್ಚಿದ್ದವು

ಹಿರಿಯೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ ತಡೆಯಲು ಮುಂದಾದ ರೈತ ಮುಖಂಡರನ್ನು ಪೊಲೀಸರು ಬಂಧಿಸಿ ನಂತರ ಬಿಡುಗಡೆ ಮಾಡಿದರು.

ಹೊಳಲ್ಕೆರೆಯಲ್ಲಿ ರೈತರು ರಸ್ತೆಯಲ್ಲಿ ಎತ್ತಿನ ಗಾಡಿ, ಟ್ರ್ಯಾಕ್ಟರ್ ನಿಲ್ಲಿಸಿ ಪ್ರತಿಭಟಿಸಿದರು. ಮೊಳಕಾಲ್ಮುರು ಪಟ್ಟಣದಲ್ಲಿ ರೈತರ ಬಂಧನ ಖಂಡಿಸಿ ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು. ಹೊಸದುರ್ಗ ತಾಲ್ಲೂಕಿನ ಕೆರೆಗಳಿಗೆ ಭದ್ರಾ ನೀರು ಹರಿಸಬೇಕು ಎಂದು ಒತ್ತಾಯಿಸಿ ಬಂದ್ ಆಚರಿಸಿದರು.


ಸುದ್ದಿ 2 ನಿಮಿಷ

'ಸಿದ್ದರಾಮಯ್ಯ ಕುರ್ಚಿ ಬಿಡಲ್ಲ'

ಹೊಸಪೇಟೆ (ವಿಜಯನಗರ): 'ಮಾತೆತ್ತಿದ್ದರೆ ಹೈಕಮಾಂಡ್ ಎನ್ನುತ್ತ, ಕುರ್ಚಿಗೆ ಅಂಟಿಕೊಂಡಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಿ.ಎಂ ಹುದ್ದೆ ಬಿಡುವ ಲಕ್ಷಣ ಕಾಣುತ್ತಿಲ್ಲ' ಎಂದು ಶಾಸಕ ಜನಾರ್ದನ ರೆಡ್ಡಿ ಮಂಗಳವಾರ ಇಲ್ಲಿ ಹೇಳಿದರು.

'ಸಿದ್ದರಾಮಯ್ಯ ಅವರ ಆಡಳಿತದಲ್ಲಿ ಅಭಿವೃದ್ಧಿ ಸ್ಥಗಿತಗೊಂಡಿದೆ. ಅವರು ಮುಂದೆಯೂ ಮುಖ್ಯಮಂತ್ರಿ ಹುದ್ದೆ ಬಿಡುವ ಲಕ್ಷಣ ಕಾಣುತ್ತಿಲ್ಲ. ರಾಜ್ಯ ಅಭಿವೃದ್ಧಿಯೂ ಆಗುವುದಿಲ್ಲ. ಇದರ ಪರಿಣಾಮ 2028ರಲ್ಲಿ ಬಿಜೆಪಿಯ ಅಧಿಕಾರಕ್ಕೆ ಬರಲಿದೆ' ಎಂದು ಸುದ್ದಿಗಾರರೊಂದಿಗೆ ಮಾತನಾಡಿದ ಅವರು ತಿಳಿಸಿದರು.

'ಬಳ್ಳಾರಿಯಲ್ಲಿ ಜ.1ರಂದು ನಡೆದಿದ್ದ ಗಲಭೆ ಪ್ರಕರಣ ಕುರಿತು ಸಿಐಡಿ ತನಿಖೆ ಬಗ್ಗೆ ನನಗೆ ನಂಬಿಕೆ ಇಲ್ಲ. ಸಿಬಿಐ ತನಿಖೆಗೆ ವಹಿಸಬೇಕು ಎಂದು ಕೋರಿ 2 ದಿನದಲ್ಲಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸುವೆ' ಎಂದು ಹೇಳಿದರು.



ಗಂಗಾವತಿಯಿಂದಲೇ ಸ್ಪರ್ಧೆ: 'ನನಗೆ ರಾಜಕೀಯ ಪುನರ್ಜನ್ಮ ನೀಡಿರುವ ಗಂಗಾವತಿ ಕ್ಷೇತ್ರವನ್ನು ಬಿಟ್ಟು ಕೊಡುವುದಿಲ್ಲ. ಗಂಗಾವತಿ ಜೊತೆಗೆ ಹೊಸಪೇಟೆ ಮತ್ತು ಹಂಪಿಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಈಗಾಗಲೇ ಯೋಜನೆಯನ್ನು ಹಾಕಿಕೊಂಡಿದ್ದೇನೆ' ಎಂದರು.

ಮುಡಾ: 134 ಪ್ರಕರಣ ದಾಖಲು

ಮೈಸೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಈಗಿನ ಎಂಡಿಎ) ನಿವೇಶನಗಳ ಅಕ್ರಮ ಹಂಚಿಕೆ ಪ್ರಕರಣಕ್ಕೆ ಸಂಬಂಧಿಸಿ ಇಲ್ಲಿನ ಲೋಕಾಯುಕ್ತ ಪೊಲೀಸರು ಇನ್ನಷ್ಟು ಮಂದಿಗೆ ನೋಟಿಸ್ ಜಾರಿಗೊಳಿಸಿದ್ದಾರೆ.

ಮುಡಾದಲ್ಲಿ 50:50 ಅನುಪಾತದಲ್ಲಿ ನಿವೇಶನಗಳ ಅಕ್ರಮ ಹಂಚಿಕೆ, ಬದಲಿ ನಿವೇಶನಗಳ ಹಂಚಿಕೆಯಲ್ಲಿನ ಅಕ್ರಮಕ್ಕೆ ಸಂಬಂಧಿಸಿ ಈವರೆಗೆ 134 ಪ್ರಕರಣ ದಾಖಲಿಸಿಕೊಂಡಿದ್ದಾರೆ.

'ಸದ್ಯ 30ರಿಂದ 40 ಪ್ರಕರಣಗಳ ವಿಚಾರಣೆ ನಡೆದಿದೆ. ಅವುಗಳಿಗೆ ಸಂಬಂಧಿಸಿದವರಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುತ್ತಿದೆ. ಮೂರ್ನಾಲ್ಕು ತಿಂಗಳಿಂದ ಈ ಪ್ರಕ್ರಿಯೆ ನಡೆದಿದೆ' ಎಂದು ಲೋಕಾಯುಕ್ತ ಮೈಸೂರು ಎಸ್‌ಪಿ ಟಿ.ಜೆ.ಉದೇಶ್ ತಿಳಿಸಿದರು.

ಮಾ.2, 3: ಕುಕ್ಕೆ ಸೇವೆಯಲ್ಲಿ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಚಂದ್ರಗ್ರಹಣದ ಅಂಗವಾಗಿ ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಮಾರ್ಚ್ 2 ಮತ್ತು 3ರಂದು ದೇವರ ದರ್ಶನ ಹಾಗೂ ಸೇವೆಗಳಲ್ಲಿ ವ್ಯತ್ಯಯವಾಗಲಿದೆ ಎಂದು ದೇವಳದ ಆಡಳಿತ ತಿಳಿಸಿದೆ.

ಮಾರ್ಚ್ 2 ಮತ್ತು 3ರಂದು ಸರ್ಪಸಂಸ್ಕಾರ ಪೂಜೆ ನಡೆಯುವುದಿಲ್ಲ. 3ರಂದು ಯಾವುದೇ ಸೇವೆಗಳು ಇರುವುದಿಲ್ಲ. ಅಂದು ಮಧ್ಯಾಹ್ನದ ಮಹಾಪೂಜೆ ಬೆಳಿಗ್ಗೆ 8ಕ್ಕೆ ನಡೆಯಲಿದೆ. 9 ಗಂಟೆಯ ಬಳಿಕ ದೇವರ ದರ್ಶನಕ್ಕೆ ಅವಕಾಶ ಇರುವುದಿಲ್ಲ. ಬೆಳಿಗ್ಗೆಯ ಉಪಾಹಾರ 9 ಗಂಟೆವರೆಗೆ ಸಿಗಲಿದೆ. ಮಧ್ಯಾಹ್ನ ಭೋಜನ ವ್ಯವಸ್ಥೆ ಇರುವುದಿಲ್ಲ. ಸಂಜೆ 7ರ ನಂತರ ದೇವರ ಮಹಾಪೂಜೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಎರಡು ಮದುವೆ, 7 ಯುವತಿಯರಿಗೆ ವಂಚನೆ: ಬಂಧನ

ಪ್ರಜಾವಾಣಿ ವಾರ್ತೆ

ಮಂಗಳೂರು: ಮ್ಯಾಟ್ರಿಮೋನಿ ಆನ್‌ಲೈನ್ ವೇದಿಕೆಯಲ್ಲಿ ಯುವತಿಯರನ್ನು ಪರಿಚಯ ಮಾಡಿಕೊಂಡು ಮದುವೆ ಆಗುವುದಾಗಿ ನಂಬಿಸಿ ಹಣ ಪಡೆದು ಒಂಬತ್ತು ಯುವತಿಯರಿಗೆ ವಂಚಿಸಿರುವ ಆರೋಪಿಯನ್ನು ಇಲ್ಲಿಯ ಕಾವೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಸುಶಾಂತ್ ಪೂಜಾರಿ ಅಲಿಯಾಸ್ ಸುಶಾಂತ್ ಅಂಕುಶ್ ಪೂಜಾರಿ ಅಲಿಯಾಸ್ ಸುಶಾಂತ್ ಜಿ. ಕರ್ಕೇರಾ (32) ಬಂಧಿತ ಆರೋಪಿ ಎಂದು ನಗರ ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ ತಿಳಿಸಿದ್ದಾರೆ.

ಸುಶಾಂತ್ ಪೂಜಾರಿ ಮೊದಲು ಉಡುಪಿಯ ಯುವತಿಯನ್ನು 2021ರಲ್ಲಿ ಮದುವೆಯಾಗಿದ್ದ. ನಂತರ ಮಹಾರಾಷ್ಟ್ರದ ಘನಸೋಳಿಯ ಯುವತಿಯನ್ನು 2025ರ ಫೆ.2ರಂದು ನವಿಮುಂಬೈನಲ್ಲಿ ಮದುವೆಯಾಗಿದ್ದ. ಆಕೆಯಿಂದ ₹6.60 ಲಕ್ಷ ಪಡೆದು, ಬಳಿಕ ನಾಪತ್ತೆಯಾಗಿದ್ದ. ಯುವತಿ ಪೂರ್ವಾಪರ ವಿಚಾರಿಸಿದಾಗ, ಆಗಲೇ ಮದುವೆಯಾಗಿದ್ದು ಅನೇಕ ಯುವತಿಯರಿಗೆ ವಂಚಿಸಿದ್ದು ಗೊತ್ತಾಗಿತ್ತು.

ಯುವತಿ ಕಾವೂರು ಠಾಣೆಗೆ ದೂರು ನೀಡಿದ್ದರು. ಆರೋಪಿ ವಿರುದ್ಧ ಪ್ರಕರಣ ದಾಖಲಾಗಿತ್ತು ಎಂದು ಪೊಲೀಸ್ ಕಮಿಷನರ್ ಮಾಹಿತಿ ನೀಡಿದ್ದಾರೆ.



ಸುಶಾಂತ್

'2021ರಲ್ಲಿ ಉಡುಪಿ ಯುವತಿಯ ಜೊತೆ ಮದುವೆ ಆಗಿದ್ದು, ಉಡುಪಿ, ಮುಂಬೈ, ಬೆಂಗಳೂರಿನ ತಲಾ ಇಬ್ಬರು ಯುವತಿಯರು ಹಾಗೂ ಕಾರ್ಕಳದ ಒಬ್ಬ ಯುವತಿಗೆ ಮದುವೆ ಆಗುವುದಾಗಿ ನಂಬಿಸಿ ವಂಚಿಸಿದ್ದನ್ನು ಆರೋಪಿ ಒಪ್ಪಿಕೊಂಡಿದ್ದಾನೆ' ಎಂದು ಮಾಹಿತಿ ನೀಡಿದರು.

ನವಿ ಮುಂಬೈನ ಯುವತಿಯನ್ನು ಮದುವೆಯಾಗಲು ನೆರವಾಗಿದ್ದ, ಸುಶಾಂತ್ ತನ್ನ ಅಳಿಯನೆಂದು ಹೇಳಿಕೊಂಡು, ಮುಂಬೈನಲ್ಲಿ ನಡೆದಿದ್ದ ಮದುವೆಯಲ್ಲಿ ಭಾಗಿಯಾಗಿದ್ದ ಮೂಲ್ಕಿಯ ಕಾರು ಚಾಲಕ ಭಾಸ್ಕರ್ ಎಂಬಾತನನ್ನು ಬಂಧಿಸಲಾಗಿದೆ ಎಂದು ತಿಳಿಸಿದ್ದಾರೆ.

ಮಂತ್ರಾಲಯ: ₹ 3.08 ಕೋಟಿ ಕಾಣಿಕೆ ಸಂಗ್ರಹ

ಪ್ರಜಾವಾಣಿ ವಾರ್ತೆ

ರಾಯಚೂರು: ಮಂತ್ರಾಲಯದ ರಾಘವೇಂದ್ರ ಸ್ವಾಮಿ ಮಠದ ಕಾಣಿಕೆಯನ್ನು ಮಂಗಳವಾರ ಎಣಿಕೆ ಮಾಡಲಾಗಿದ್ದು, 21 ದಿನಗಳ ಅವಧಿಯಲ್ಲಿ ₹3.08 ಕೋಟಿ ಸಂಗ್ರಹವಾಗಿದೆ.

₹2,98,13,571 ನಗದು, ₹10,24,000 ಮೌಲ್ಯದ ನಾಣ್ಯ ಸೇರಿ ₹3,08,37,571 ಹಣ, 13 ಗ್ರಾಂ ಚಿನ್ನ ಹಾಗೂ 1,018 ಗ್ರಾಂ ಬೆಳ್ಳಿ ಕಾಣಿಕೆ ರೂಪದಲ್ಲಿ ಬಂದಿದೆ ಎಂದು ಮಠದ ಪ್ರಕಟಣೆ ತಿಳಿಸಿದೆ.

ಶಾಸಕ ಬೈರತಿಗೆ ನಿರೀಕ್ಷಣಾ ಜಾಮೀನು ನಕಾರ

ಒಂದನೇ ಪುಟದಿಂದ...

'ಅರ್ಜಿದಾರರು ಮತ್ತು ಮೃತರ ನಡುವೆ ಈ ಹಿಂದೆಯೇ ದ್ವೇಷವಿತ್ತು ಎಂಬುದು ದಾಖಲೆಗಳ ಮೂಲಕ ತಿಳಿದು ಬರುತ್ತದೆ. ಅರ್ಜಿದಾರರು ಮತ್ತು ಮೃತ ವ್ಯಕ್ತಿ, ಬಿಕ್ಲು ಶಿವು ಅವರ ತಾಯಿ ಒಂದೇ ಕ್ಷೇತ್ರ ವ್ಯಾಪ್ತಿಯಲ್ಲಿ ವಾಸ ಮಾಡುತ್ತಿರುವ ಕಾರಣ ನಿರೀಕ್ಷಣಾ ಜಾಮೀನು ನೀಡಿದರೆ ಅದರಿಂದ ತನಿಖೆಗೆ ಅಡ್ಡಿಯಾಗುವ ಸಾಧ್ಯತೆಗಳಿವೆ. ತನಿಖಾ ದಾಖಲೆಗಳು, ಛಾಯಾಚಿತ್ರ ಮತ್ತು ಸಿಡಿಆರ್‌ಗಳನ್ನು (ಕಾಲ್ ಡೀಟೇಲ್ ರೆಕಾರ್ಡ್) ಪರಿಶೀಲಿಸಿದಾಗ, ಅರ್ಜಿದಾರರು ತನಿಖೆಯ ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದು ನಿಚ್ಚಳವಾಗಿದೆ' ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.

'ಶಿವು ಜೀವಭಯದಲ್ಲಿ ದಿನದೂಡುತ್ತಿದ್ದ ಎಂದು ಮೃತ ವ್ಯಕ್ತಿಯ ತಾಯಿಯೂ ವಿಚಾರಣಾ ನ್ಯಾಯಾಲಯದಲ್ಲಿ ಅಪರಾಧ ದಂಡ ಪ್ರಕ್ರಿಯಾ ಸಂಹಿತೆ–1973ರ (ಸಿಆರ್‌ಪಿಸಿ) ಕಲಂ 164ರ ಅಡಿಯಲ್ಲಿ ನೀಡಿರುವ ಹೇಳಿಕೆಯಲ್ಲಿ ವಿಶದಪಡಿಸಿದ್ದಾರೆ. ಈ ಹೇಳಿಕೆಯನ್ನು ಆಧರಿಸಿದ ಪ್ರಾಸಿಕ್ಯೂಷನ್ ವಾದ ಸಾಕಷ್ಟು ಬಲಿಷ್ಠವಾಗಿದ್ದು ಅದನ್ನು ತಳ್ಳಿಹಾಕಲು ಆಗದು' ಎಂದು ನ್ಯಾಯಪೀಠ ಉಲ್ಲೇಖಿಸಿದೆ.

'ಭೂ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಆಸ್ತಿಯ ಸ್ವಾಧೀನವನ್ನು ಬಿಟ್ಟುಕೊಡದಿದ್ದರೆ ಮತ್ತು ಅಸ್ತಿತ್ವದಲ್ಲಿರುವ ಸಾಮಾನ್ಯ ಅಧಿಕಾರ ಪತ್ರವನ್ನು (ಜಿಪಿಎ) ರದ್ದುಗೊಳಿಸದೇ ಹೋದಲ್ಲಿ ಮೊದಲನೇ ಆರೋಪಿ ಜಗದೀಶ್ ಅಲಿಯಾಸ್ ಜಗ್ಗ ಹಾಗೂ ಎರಡನೇ ಆರೋಪಿಯಾಗಿರುವ ಅವರ ಸೋದರಳಿಯ ಕಿರಣ್ ನನ್ನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾರೆ ಎಂದು ಬಿಕ್ಲು ಶಿವು ಮೊದಲೇ ನಿರ್ದಿಷ್ಟವಾಗಿ ಪ್ರತಿಪಾದಿಸಿರುವುದು ದಾಖಲೆಗಳಲ್ಲಿ ಗೋಚರಿಸುತ್ತದೆ. ಹೀಗಾಗಿ, ಶಿವುಗೆ ಜೀವ ಬೆದರಿಕೆ ಇತ್ತು ಮತ್ತು ಯಾವುದೇ ಅಹಿತಕರ ಘಟನೆ ಸಂಭವಿಸಿದಲ್ಲಿ, ಒಂದು ಮತ್ತು ಎರಡನೇ ಆರೋಪಿಗಳು ಹಾಗೂ ಬೈರತಿ ಬಸವರಾಜ ಅದಕ್ಕೆ ಜವಾಬ್ದಾರರಾಗುತ್ತಾರೆ ಎಂಬ ಅಂಶ ಲಿಖಿತವಾಗಿಯೇ ಇರುವುದು ಕಂಡು ಬರುತ್ತದೆ' ಎಂದು ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

'ನಿಯಮಗಳನ್ನು ನೆಚ್ಚಿಕೊಂಡು ನಿರೀಕ್ಷಣಾ ಜಾಮೀನು ನೀಡುವ ಪರಿಪಾಟಕ್ಕಿಂತಲೂ ಅಂತಹುದೊಂದು ಅಸಾಧಾರಣ ಪರಿಹಾರವನ್ನು ಆಶ್ರಯಿಸುವುದಕ್ಕೆ ಅಷ್ಟೇ ಮುಖ್ಯವಾದ ಅಸಾಧಾರಣ ಸಂದರ್ಭಗಳಿವೆ ಎಂಬುದು ನ್ಯಾಯಾಲಯಕ್ಕೆ ಮನವರಿಕೆಯಾದಾಗ ಮಾತ್ರ ಜಾಮೀನು ಮಂಜೂರು ಮಾಡಬೇಕು' ಎಂದು ಹೇಳಿದೆ.

ಸರ್ಕಾರದ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್.ಜಗದೀಶ್ ವಾದ ಮಂಡಿಸಿದ್ದರು.

ಪಿಸ್ತೂಲ್ ಹಿಡಿದು ಕಾಂಗ್ರೆಸ್ ಮುಖಂಡ ಡಾನ್ಸ್



ಪಿಸ್ತೂಲ್ ಹಿಡಿದು ನೃತ್ಯ ಮಾಡಿದ ಕಾಂಗ್ರೆಸ್ ಮುಖಂಡ ಮತಿನ್ ಪಟೇಲ್

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಅಫ್ಜಲಪುರದ ಕಾಂಗ್ರೆಸ್ ಮುಖಂಡ ಮತಿನ್ ಪಟೇಲ್ ಅವರು ಪಿಸ್ತೂಲ್ ಹಿಡಿದು ನೃತ್ಯ ಮಾಡಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

'ಕೈ' ಮುಖಂಡನ ನಡೆಗೆ ಆಕ್ರೋಶ ವ್ಯಕ್ತವಾಗಿದೆ. ಮತಿನ್ ಪಟೇಲ್ ಅಫಜಲಪುರದ ಕಾಂಗ್ರೆಸ್ ಶಾಸಕ ಎಂ.ವೈ.ಪಾಟೀಲ ಆಪ್ತರು. ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯರೂ ಹೌದು.

ಮತಿನ್ ಪಟೇಲ್ ಹಿಂದಿ ಚಲನಚಿತ್ರ 'ಧುರಂಧರ್'ನ ಹಾಡಿಗೆ ಡಾನ್ಸ್ ಮಾಡಿರುವುದು ವಿಡಿಯೊದಲ್ಲಿದೆ. ಕಲಬುರಗಿಯ ತಾಜ್‌ನಗರ ಪ್ರದೇಶದ ಹೋಟೆಲ್‌ನಲ್ಲಿ ತಮ್ಮ ತಂಗಿ ಮಗಳ ಮದುವೆಯ ಅರಿಸಿನ ಶಾಸ್ತ್ರ ಸಮಾರಂಭದಲ್ಲಿ ಇದನ್ನು ಚಿತ್ರೀಕರಿಸಲಾಗಿದೆ.

'ವಿಡಿಯೊದಲ್ಲಿ ಎರಡು ಮಾರಕ ಅಸ್ತ್ರಗಳು ಕಂಡಿವೆ. ಅದರಲ್ಲೊಂದು ಆಟಿಕೆ ಬಂದೂಕು, ಮತ್ತೊಂದು ಪರವಾನಗಿಯುಳ್ಳ ಪಿಸ್ತೂಲ್ ಎಂದು ಗೊತ್ತಾಗಿದೆ. 'ಈ ಕುರಿತು ಸ್ವಯಂ ಪ್ರೇರಿತ ಪ್ರಕರಣ ದಾಖಲಿಸಿ, ಕ್ರಮಕೈಗೊಳ್ಳಲಾಗುತ್ತಿದೆ' ಎಂದು ನಗರ ಪೊಲೀಸ್ ಕಮಿಷನರ್ ಶರಣಪ್ಪ ಎಸ್.ಡಿ. ಅವರು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

ಮಕ್ಕಳ ನಾಪತ್ತೆ ಜಾಲ ಪತ್ತೆ ಹಚ್ಚಿ: ಸುಪ್ರೀಂ

ರಾಜ್ಯ ಸರ್ಕಾರಗಳಿಂದ ದತ್ತಾಂಶ ಸಂಗ್ರಹಕ್ಕೆ ಕೇಂದ್ರಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಮಕ್ಕಳ ನಾಪತ್ತೆ ಪ್ರಕರಣಗಳ ಹಿಂದೆ ರಾಜ್ಯದಲ್ಲಿರುವ ನಿರ್ದಿಷ್ಟ ಗುಂಪು ಅಥವಾ ರಾಷ್ಟ್ರವ್ಯಾಪಿ ಜಾಲ ಇದೆಯೇ ಎಂಬುದನ್ನು ಪತ್ತೆ ಹಚ್ಚಬೇಕು ಎಂದು ಕೇಂದ್ರ ಸರ್ಕಾರಕ್ಕೆ ಸುಪ್ರೀಂಕೋರ್ಟ್ ಸೂಚನೆ ನೀಡಿದೆ.

ಮಕ್ಕಳ ನಾಪತ್ತೆ ಹಿಂದೆ ಯಾವುದಾದರೂ ಮಾದರಿ ಇದೆಯೇ ಎಂಬುದರ ಕುರಿತಂತೆ ಎಲ್ಲಾ ರಾಜ್ಯಗಳಿಂದ ಮಾಹಿತಿ ಸಂಗ್ರಹಿಸಬೇಕು ಎಂದು ನ್ಯಾಯಮೂರ್ತಿ ಬಿ.ವಿ.ನಾಗರತ್ನ ಹಾಗೂ ಉಜ್ಜಲ್ ಭುಯಾನ್ ನೇತೃತ್ವದ ನ್ಯಾಯಪೀಠ ತಿಳಿಸಿದೆ.

'ಮಕ್ಕಳ ಕಣ್ಮರೆ ಕುರಿತಂತೆ ಕೆಲವು ರಾಜ್ಯಗಳು ಮಾಹಿತಿ ನೀಡಿವೆ. ಡಜನ್‌ಗೂ ಅಧಿಕ ರಾಜ್ಯಗಳು ದತ್ತಾಂಶಗಳನ್ನೇ ನೀಡಿಲ್ಲ. ಎಲ್ಲಾ ದತ್ತಾಂಶಗಳು ಸಿಕ್ಕಿದ ನಂತರವೇ, ವಿಸ್ತೃತ ವಿಶ್ಲೇಷಣೆ ಮಾಡಲು ಸಾಧ್ಯ' ಎಂದು ಹೆಚ್ಚುವರಿ ಸಾಲಿಸಿಟರ್ ಜನರಲ್ ಐಶ್ವರ್ಯ ಭಾಟಿ ಅವರು ನ್ಯಾಯಪೀಠದ ಗಮನಸೆಳೆದರು.

'ಇದು ಇಡೀ ದೇಶಕ್ಕೆ ಹಬ್ಬಿದ ಜಾಲವೇ ಅಥವಾ ರಾಜ್ಯದಲ್ಲಿರುವ ನಿರ್ದಿಷ್ಟ ಗುಂಪು ಇದರ ಹಿಂದೆ ಕೈವಾಡ ವಹಿಸಿದೆಯಾ ಎಂಬುದು ನಮಗೆ ತಿಳಿಯಬೇಕು' ಎಂದು ನ್ಯಾಯಪೀಠವು ಭಾಟಿ ಅವರಿಗೆ ತಿಳಿಸಿತು.

ಈಗಾಗಲೇ ರಕ್ಷಿಸಲ್ಪಟ್ಟ ಮಕ್ಕಳಿಂದ ಹೊಣೆಗಾರರು ಯಾರು ಎಂಬುದನ್ನು ಪತ್ತೆಹಚ್ಚಿ ಎಂದು ಭಾಟಿ ಅವರಿಗೆ ನ್ಯಾಯಪೀಠ ಸಲಹೆ ನೀಡಿತು.

'ಗಂಭೀರ ಸಮಸ್ಯೆ ಇರುವ ರಾಜ್ಯಗಳೇ ಸರಿಯಾದ ದತ್ತಾಂಶ ಒದಗಿಸಿಲ್ಲ. ಅಗತ್ಯಬಿದ್ದರೆ ಕಠಿಣ ಆದೇಶ ಹೊರಡಿಸಲಾಗುವುದು' ಎಂದು ನ್ಯಾಯಪೀಠ ರಾಜ್ಯಗಳಿಗೆ ಎಚ್ಚರಿಕೆ ನೀಡಿದೆ. 'ಕೇಂದ್ರ ಸರ್ಕಾರವೇ ಈ ವಿಚಾರದಲ್ಲಿ ಹೆಚ್ಚಿನ ಆಸಕ್ತಿ ವಹಿಸಿ ರಾಜ್ಯ ಸರ್ಕಾರದಿಂದ ದತ್ತಾಂಶ ಸಂಗ್ರಹಕ್ಕೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಹಿರಿಯ ವಕೀಲೆ ಅಪರ್ಣಾ ಭಟ್ ಅವರು ಸಲಹೆ ನೀಡಿದರು.

ಸಾರ್ವಜನಿಕ ಹಿತಾಸಕ್ತಿ ಅರ್ಜಿ

ದೇಶದ ಹಲವು ರಾಜ್ಯಗಳಲ್ಲಿ ಕಣ್ಮರೆಯಾಗಿರುವ ಮಕ್ಕಳು ಇನ್ನೂ ಕೂಡ ಪತ್ತೆಯಾಗಿಲ್ಲ, ಇಂತಹ ಪ್ರಕರಣಗಳು ಹೆಚ್ಚುತ್ತಿದ್ದು, ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿ ಮಕ್ಕಳ ವೇಶ್ಯಾವಾಟಿಕೆ ವಿರುದ್ಧ ಹೋರಾಟ ನಡೆಸುತ್ತಿರುವ ಸ್ವಯಂಸೇವಾ ಸಂಸ್ಥೆ 'ಗುರಿಯಾ ಸ್ವಯಂ ಸೇವಿ ಸಂಸ್ಥಾನ್' ಸಂಸ್ಥೆಯು ಸುಪ್ರೀಂಕೋರ್ಟ್‌ನಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿತ್ತು.

ಮಣಿಪುರ: ಮತ್ತೆ ಭುಗಿಲೆದ್ದ ಹಿಂಸಾಚಾರ

ಇಂಫಾಲ (ಪಿಟಿಐ): ಮಣಿಪುರದ ಉಖರುಲ್ ಜಿಲ್ಲೆಯಲ್ಲಿ ತಾಂಗಖುಲ್ ನಾಗಾ ಸಮುದಾಯದ ಸದಸ್ಯರೊಬ್ಬರ ಮೇಲೆ ನಡೆದ ಹಲ್ಲೆ ಸಂಬಂಧ ಮತ್ತೆ ಹಿಂಸಾಚಾರ ಭುಗಿಲೆದ್ದಿದೆ. ಮಂಗಳವಾರ ಬೆಳಿಗ್ಗೆ ಶಸ್ತ್ರಸಜ್ಜಿತ ಬಂಡುಕೋರರು ಪಾಳುಬಿದ್ದ ಹಲವು ಮನೆಗಳಿಗೆ ಬೆಂಕಿ ಹಚ್ಚಿ, ಗುಂಡು ಹಾರಿಸಿದ್ದಾರೆ.

ರಾಜ್ಯ ಸರ್ಕಾರವು ಮುನ್ನೆಚ್ಚರಿಕೆ ಕ್ರಮವಾಗಿ ಉಖರುಲ್ ಜಿಲ್ಲೆಯಲ್ಲಿ ಇಂಟರ್ನೆಟ್ ಸೇವೆಗಳನ್ನು ಐದು ದಿನಗಳವರೆಗೆ ಸ್ಥಗಿತಗೊಳಿಸಿದೆ..

[illegible]

ಘಟನೆಯಲ್ಲಿ 21 ಮನೆಗಳು ಸುಟ್ಟುಹೋಗಿವೆ. ಪರಿಸ್ಥಿತಿಯನ್ನು ನಿಯಂತ್ರಿಸಲು ಹೆಚ್ಚುವರಿ ಭದ್ರತಾ ಪಡೆಗಳನ್ನು ನಿಯೋಜಿಸಲಾಗಿದೆ

ಗೋವಿಂದಾಸ್ ಕೋಂಥೌಜಾಮ್, ಮಣಿಪುರದ ಗೃಹ ಸಚಿವ

'ಈ ಪ್ರದೇಶದಲ್ಲಿ ನಡೆದ ಗುಂಡಿನ ದಾಳಿಯನ್ನು ತಡೆಯುವಲ್ಲಿ ಭದ್ರತಾ ಪಡೆಗಳು ವಿಫಲವಾಗಿವೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

ಗುಡ್ಡಗಾಡು ಪ್ರದೇಶದಲ್ಲಿ ದಟ್ಟವಾದ ಹೊಗೆ ಆವರಿಸಿರುವ ದೃಶ್ಯಗಳು ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿವೆ.

'ಕುಕಿ ಮತ್ತು ತಾಂಗಖುಲ್ ನಾಗಾ ಸಮುದಾಯದ ನೂರಾರು ಮಂದಿ ಕಳೆದ ಎರಡು ದಿನಗಳಿಂದ ಲಿಟನ್ ಸಾರೈಖೋಂಗ್ ಹಾಗೂ ನೆರೆಯ ಕುಕಿ ಗ್ರಾಮಗಳನ್ನು ತೊರೆದು ಕಾಂಗ್‌ಪೋಕ್ಪಿ ಮತ್ತು ಉಖರುಲ್ ಜಿಲ್ಲೆಗಳ ಸುರಕ್ಷಿತ ಸ್ಥಳಗಳಿಗೆ ತೆರಳುತ್ತಿದ್ದಾರೆ.

ಅಭಿಮತ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ


ಒಳ್ಳೆಯದನ್ನು ತಿಳಿಯುವ ಹಟ ಬಂದರೆ ಜನರ ಬಾಳಿಗೆ ಅದೊಂದೇ ಬೆಳಕು.

–ಸಾಕ್ರಟಿಸ್

ಸಂಪಾದಕೀಯ

ಬೀದಿಬದಿ ವ್ಯಾಪಾರಿಗಳ ಎತ್ತಂಗಡಿ ನ್ಯಾಯ, ಸಹಾನುಭೂತಿ ನಿರಾಕರಣೆ?

ಬೆಂಗಳೂರು ಮಹಾನಗರದಲ್ಲಿ ಬೀದಿಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಲು ನಡೆಯುತ್ತಿರುವ ಕಾರ್ಯವು ಆಡಳಿತ ವ್ಯವಸ್ಥೆ ಕುಸಿದುಬಿದ್ದಿರುವುದನ್ನು, ಕಾನೂನಿನ ಬಗ್ಗೆ ಗೌರವ ಇಲ್ಲದಿರುವುದನ್ನು ಹಾಗೂ ಮನುಷ್ಯರಾದವರಿಗೆ ಇರಬೇಕಾದ ಕನಿಷ್ಠ ಸೂಕ್ಷ್ಮತೆಗಳು ಇಲ್ಲದಿರುವುದನ್ನು ತೋರಿಸುತ್ತಿದೆ. ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಆಡಳಿತ ವ್ಯವಸ್ಥೆಯು ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಎಂಬ ಹೊಸ ಆಡಳಿತ ವ್ಯವಸ್ಥೆಯಾಗಿ ಬದಲಾವಣೆ ಕಂಡ ನಂತರ, ನಗರದ ಆಡಳಿತಕ್ಕೆ ಸಂಬಂಧಿಸಿದ ಸಹಜ ಚಟುವಟಿಕೆ ಎಂಬಂತೆ ಇದನ್ನು ಬಿಂಬಿಸಲಾಗುತ್ತಿದೆ. ಆದರೆ ಇದು ವಾಸ್ತವದಲ್ಲಿ ಕಾನೂನಿನ ಮೂಲಕ ನೀಡಲಾಗಿರುವ ರಕ್ಷಣೆಗಳು ಹಾಗೂ ಮೂಲಭೂತ ಹಕ್ಕುಗಳ ಉಲ್ಲಂಘನೆ. ಇಲ್ಲಿ ಆಡಳಿತಾತ್ಮಕ ಕ್ರಮವೊಂದು ವಿಕ್ಷಿಪ್ತವಾಗಿ ಪರಿಣಮಿಸಿದೆ. ಅಧಿಕಾರಶಾಹಿ ವ್ಯವಸ್ಥೆಯ ನಿರ್ಲಕ್ಷ್ಯಕ್ಕೆ ನಗರದ ಅತ್ಯಂತ ದುರ್ಬಲವಾದ ಜನವರ್ಗವು ಬೆಲೆ ತೆರುತ್ತಿದೆ. ಉದ್ದೇಶಪೂರ್ವಕವಾಗಿ ಸೃಷ್ಟಿಸಲಾದ ಹಾಗೂ ಉಳಿಸಲಾದ ಕಾನೂನಿನ ನಿರ್ವಾತವೊಂದು ಈ ಸಮಸ್ಯೆಯ ಹೃದಯಭಾಗದಲ್ಲಿದೆ. ಆಡಳಿತ ವ್ಯವಸ್ಥೆಯಲ್ಲಿನ ಬದಲಾವಣೆಯ ಕಾರಣದಿಂದಾಗಿ ಹೊಸ ಗುರುತಿನ ಚೀಟಿ ವಿತರಿಸುವುದನ್ನು ನಿಲ್ಲಿಸಲಾಗಿದೆ. ಹಳೆಯ ಬಿಬಿಎಂಪಿ ವಿತರಣೆ ಮಾಡಿದ್ದ ಗುರುತಿನ ಚೀಟಿಗಳನ್ನು ಅಮಾನ್ಯ ಎಂದು ಘೋಷಿಸಲಾಗಿದೆ. ಇದರಿಂದಾಗಿ ಈ ಜನವರ್ಗದ ಅಸ್ತಿತ್ವ ಸಂಕಷ್ಟಕ್ಕೆ ಸಿಲುಕಿದೆ. ಬೀದಿಬದಿ ವ್ಯಾಪಾರಿಗಳು ಈಗ ತಮ್ಮ ಬದುಕಿನ ಸಮಯವು ಪೊಲೀಸರ ಭಯದಲ್ಲಿಯೇ, ಎತ್ತಂಗಡಿಯ ಭೀತಿಯಲ್ಲಿಯೇ ಕಳೆದುಹೋಗುತ್ತಿದೆ ಎಂದು ಹೇಳುತ್ತಿದ್ದಾರೆ.



ಬೀದಿಬದಿ ವ್ಯಾಪಾರಿಗಳನ್ನು ತೆರವುಗೊಳಿಸಲು ಬೆಂಗಳೂರಿನಲ್ಲಿ ನಡೆಯುತ್ತಿರುವ ಕಾರ್ಯಾಚರಣೆಯು, ದುರ್ಬಲ ವರ್ಗಕ್ಕೆ ಆಡಳಿತ ವ್ಯವಸ್ಥೆಯೇ ನ್ಯಾಯ ಹಾಗೂ ಸಹಾನುಭೂತಿ ನಿರಾಕರಿಸುತ್ತಿರುವುದರ ಸಂಕೇತ.

ಪಾದಚಾರಿ ಮಾರ್ಗಗಳಲ್ಲಿ ನಡೆಸುವ ವ್ಯಾಪಾರ ಚಟುವಟಿಕೆಗಳಿಗೆ ನಿಯಂತ್ರಣ ಇಲ್ಲದಿದ್ದರೆ ಸಂಚಾರ ದಟ್ಟಣೆ ಉಂಟಾಗುತ್ತದೆ, ಜನರಿಗೆ ತೊಂದರೆ ಆಗುತ್ತದೆ ಎಂಬುದರಲ್ಲಿ ಎರಡು ಮಾತಿಲ್ಲ. ಆದರೆ, ವ್ಯಾಪಾರಕ್ಕೆಂದೇ ಸ್ಥಳಗಳನ್ನು ಸ್ಪಷ್ಟವಾಗಿ ಗುರುತಿಸುವ ಕೆಲಸವನ್ನು ಸರ್ಕಾರಗಳು ಮಾಡದ ಕಾರಣದಿಂದಾಗಿ ಈ ರೀತಿ ಆಗುತ್ತಿದೆ. ಜಿಬಿಎ ಅಧಿಕಾರಿಗಳ ಅಲಕ್ಷ್ಯಕ್ಕೆ ಜನರನ್ನು ಶಿಕ್ಷಿಸುವುದು ನ್ಯಾಯಸಮ್ಮತವಲ್ಲ. ಅಧಿಕಾರಿಗಳು ನಡೆಸಿದ ಸಮೀಕ್ಷೆಯೊಂದು 27 ಸಾವಿರ ವ್ಯಾಪಾರಿಗಳನ್ನು ಮಾತ್ರ ಗುರುತಿಸಿದೆ. ವ್ಯಾಪಾರಿಗಳ ಸಂಘಟನೆಗಳು ಇಂತಹ ವ್ಯಾಪಾರಿಗಳ ಸಂಖ್ಯೆ ಒಂದು ಲಕ್ಷಕ್ಕೂ ಹೆಚ್ಚು ಎಂದು ಹೇಳಿವೆ. ಇಲ್ಲಿನ ವ್ಯತ್ಯಾಸವು ಅನ್ಯಾಯದ ಪ್ರಮಾಣವನ್ನು ತೋರಿಸುತ್ತದೆ. ಕಡಿಮೆ ಸಂಖ್ಯೆಯನ್ನು ಆಧಾರವಾಗಿ ಇರಿಸಿಕೊಂಡು ಜಿಬಿಎ ಅಧಿಕಾರಿಗಳು ವಲಯಗಳನ್ನು ರೂಪಿಸಿದರೆ, 70 ಸಾವಿರಕ್ಕೂ ಹೆಚ್ಚಿನವರು ಅಕ್ರಮ ವ್ಯಾಪಾರಿಗಳು ಎಂದಾಗುತ್ತದೆ. ಅವರು ಶಾಶ್ವತವಾಗಿ ತಮ್ಮ ನೆಲೆ ಕಳೆದುಕೊಳ್ಳುತ್ತಾರೆ. ಮಹಿಳಾ ವ್ಯಾಪಾರಿಗಳಿಗೆ ಆದಾಯದ ಏಕೈಕ ಜೀವನೋಪಾಯ ಆಗಿರುತ್ತದೆಯಾದ ಕಾರಣಕ್ಕೆ, ಅವರು ನೆಲೆ ಕಳೆದುಕೊಂಡಾಗ ಅನುಭವಿಸುವ ಸಂಕಷ್ಟ ತೀವ್ರವಾಗಿರುತ್ತದೆ. ಒಮ್ಮೆ ಅವರನ್ನು ಎತ್ತಂಗಡಿ ಮಾಡಿದರೆ ಅವರ ದಿನದ ದುಡಿಮೆ ಇಲ್ಲವಾಗುತ್ತದೆ. ಹೀಗಿದ್ದರೂ ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಆಯೋಗ ಹಾಗೂ ರಾಜ್ಯ ಮಹಿಳಾ ಆಯೋಗ ಮೌನವಾಗಿ ಕುಳಿತಿವೆ. ಮಾನವ ಹಕ್ಕುಗಳ ಉಲ್ಲಂಘನೆಯ ಬಗ್ಗೆ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲು ಮಾಡಿಕೊಳ್ಳಲು ಸಂಬಂಧಪಟ್ಟವರು ವಿಫಲರಾಗಿದ್ದಾರೆ.

ಸಮಗ್ರವಾದ ಸಮೀಕ್ಷೆಯೊಂದು ಪೂರ್ಣಗೊಳ್ಳುವವರೆಗೆ ಬೀದಿಬದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡುವಂತಿಲ್ಲ ಎಂದು 'ಬೀದಿಬದಿ ವ್ಯಾಪಾರಿಗಳ (ಜೀವನೋಪಾಯದ ರಕ್ಷಣೆ ಮತ್ತು ಬೀದಿಬದಿ ವ್ಯಾಪಾರದ ನಿಯಂತ್ರಣ) ಕಾಯ್ದೆ - 2014' ಹೇಳುತ್ತದೆ. ಸಂವಿಧಾನದ ವಿಧಿ 19(1)(ಜಿ) ಅಡಿಯಲ್ಲಿ ಬೀದಿಬದಿ ವ್ಯಾಪಾರವು ಮೂಲಭೂತ ಹಕ್ಕು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ. ಬೀದಿಬದಿ ವ್ಯಾಪಾರಿಗಳು ಒತ್ತುವರಿದಾರರಲ್ಲ, ಅವರು ನಗರದ ಆಸ್ತಿ ಎಂದು ಹೇಳಿದೆ. ಹೀಗಾಗಿ, ಕಾನೂನಿನ ಪ್ರಕ್ರಿಯೆ ಪಾಲನೆ ಮಾಡದೆ ಅಥವಾ ಸರಿಯಾದ ರೀತಿಯಲ್ಲಿ ಪುನರ್ವಸತಿ ಕಲ್ಪಿಸದೆ ಅವರನ್ನು ಎತ್ತಂಗಡಿ ಮಾಡುವುದು ಮೂಲಭೂತ ಹಕ್ಕಿನ ಉಲ್ಲಂಘನೆ. ರಸ್ತೆಗಳ ಸುಗಮ ಸಂಚಾರಕ್ಕೆ ಕಾನೂನು ಪಾಲನೆ ಮಾಡಬೇಕು ಎಂಬುದರಲ್ಲಿ ಅನುಮಾನವೇನೂ ಇಲ್ಲ. ಆದರೆ ಅದು ಅನ್ಯಾಯ ಹಾಗೂ ಸಂಕಷ್ಟಕ್ಕೆ ಆಸ್ಪದ ನೀಡಬಾರದು. ಜಿಬಿಎ ಅಧಿಕಾರಿಗಳು ಈ ವ್ಯಾಪಾರಿಗಳ ತೆರವು ಕಾರ್ಯವನ್ನು ತಕ್ಷಣವೇ ನಿಲ್ಲಿಸಬೇಕು. ಹೊಸ ಗುರುತಿನ ಚೀಟಿ ವಿತರಣೆ ಮಾಡುವವರೆಗೆ ಈಗಾಗಲೇ ನೀಡಿರುವ ಗುರುತಿನ ಚೀಟಿಗಳನ್ನು ಮಾನ್ಯ ಮಾಡಬೇಕು. ಸರಿಯಾದ ರೀತಿಯಲ್ಲಿ ಸಮೀಕ್ಷೆ ನಡೆಸಬೇಕು. ಕಾನೂನುಬದ್ಧವಾದ ವ್ಯಾಪಾರ ವಲಯಗಳನ್ನು ಗುರುತಿಸಿ ಅಧಿಸೂಚನೆಯಲ್ಲಿ ಪ್ರಕಟಿಸಬೇಕು. ಪ್ರಗತಿಯ ಹೆಸರಿನಲ್ಲಿ ದಾಪುಗಾಲು ಇರಿಸುತ್ತಿರುವುದಾಗಿ ಹೇಳಿಕೊಳ್ಳುತ್ತಿರುವ ಮಹಾನಗರವೊಂದು, ತನ್ನ ಅಧಿಕಾರಿಗಳ ಸರ್ವಾಧಿಕಾರಿ ವರ್ತನೆಯಿಂದ ದುರ್ಬಲ ವರ್ಗದವರೊಂದಕ್ಕೆ ನ್ಯಾಯ ಮತ್ತು ಸಹಾನುಭೂತಿಯನ್ನು ನಿರಾಕರಿಸುವುದು ಸರಿಯಲ್ಲ.

'ಉತ್ತರ' ಬಯಸುವ ಪ್ರಶ್ನೆಗಳು!



ವಿಶ್ಲೇಷಣೆ

ಚಂದ್ರಕಾಂತ ವಡ್ಡು

> ನಂಜುಂಡಪ್ಪ ವರದಿಯಿಂದ ಈಗಿನ ಗೋವಿಂದರಾವ್ ವರದಿಯವರೆಗೆ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ಸಂಬಂಧಿಸಿದಂತೆ ಸಾಕಷ್ಟು ಪ್ರಯತ್ನಗಳು ನಡೆದಿವೆ; ಅದೆಲ್ಲದರ ಪರಿಣಾಮ ಹೊಳೆಯಲ್ಲಿ ಹುಣಸೆ ಹಣ್ಣು ತೊಳೆದಂತೆ ಆಗಿರುವುದನ್ನು ಕಂಡಿದ್ದೇವೆ.

ಪ್ರೊ. ಡಿ.ಎಂ.ನಂಜುಂಡಪ್ಪ ನೇತೃತ್ವದ ಪ್ರಾದೇಶಿಕ ಅಸಮತೋಲನ ಕುರಿತ ಸಮಿತಿಯ ವರದಿಯಲ್ಲಿದ್ದ ಹಿಂದುಳಿದ ತಾಲ್ಲೂಕುಗಳ ಸ್ಥಿತಿಗತಿ ಪರಿಶೀಲನೆಗಾಗಿ ರಚನೆಯಾದ ಪ್ರೊ. ಎಂ. ಗೋವಿಂದರಾವ್ ಅಧ್ಯಕ್ಷತೆಯ 'ಪ್ರಾದೇಶಿಕ ಅಸಮತೋಲನ ನಿವಾರಣೆ ಸಮಿತಿ'ಯು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಂತಿಮ ವರದಿ ಸಲ್ಲಿಸಿದೆ. ನಂಜುಂಡಪ್ಪ ಸಮಿತಿ ವರದಿ ಆಧರಿಸಿ ಹಿಂದುಳಿದ ತಾಲ್ಲೂಕುಗಳ ಅಭಿವೃದ್ಧಿಗೆ ಸಾಕಷ್ಟು ಅನುದಾನ ಹಂಚಿಕೆಯಾದರೂ ಸಮರ್ಪಕವಾಗಿ ಬಳಕೆಯಾಗದ ಕಾರಣ ಸ್ಥಿತಿಗತಿ ಸುಧಾರಣೆಯಾಗದಿರುವುದನ್ನು ಸಮಿತಿ ಪತ್ತೆಹಚ್ಚಿದೆ.

ನಂಜುಂಡಪ್ಪ ಸಮಿತಿ ಗುರುತಿಸಿದ್ದ ರಾಜ್ಯದ ಹಿಂದುಳಿದ ತಾಲ್ಲೂಕುಗಳ ಪ್ರಮಾಣ ಎರಡು ದಶಕಗಳ ಬಳಿಕ ಶೇ 65ರಿಂದ ಶೇ 72.8ಕ್ಕೆ ಹೆಚ್ಚಳವಾಗಿರುವ ಆತಂಕಕಾರಿ ಸಂಗತಿ ಬಯಲಾಗಿದೆ. ರಾಜ್ಯದಲ್ಲಿನ ಒಟ್ಟು 59 ಅತಿ ಹಿಂದುಳಿದ ತಾಲ್ಲೂಕುಗಳ ಪೈಕಿ ಕಲಬುರಗಿ ಕಂದಾಯ ವಿಭಾಗದ 39 ಹಾಗೂ ಬೆಳಗಾವಿ ವಿಭಾಗದ 20 ತಾಲ್ಲೂಕುಗಳು ಅತಿ ಹಿಂದುಳಿದಿವೆ. ಇವೆಲ್ಲವೂ ಉತ್ತರ ಕರ್ನಾಟಕ ಭಾಗದಲ್ಲಿರುವುದು ಗಮನಾರ್ಹ. ಈ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕದ ಹಿಂದುಳಿಯುವಿಕೆ ಮತ್ತು ಯಥಾಸ್ಥಿತಿಯ ಮುಂದುವರಿಕೆ ಕುರಿತಂತೆ ಬಹು ಆಯಾಮ ಮತ್ತು ಬಹು ಮಹತ್ವದ ಹಲವು ಪ್ರಶ್ನೆಗಳು 'ಉತ್ತರ ಇಲ್ಲದ' ಅಥವಾ 'ಉತ್ತರ ಒಲ್ಲದ' ಅಧಿಕಾರಸ್ಥರನ್ನು ಸುತ್ತುವರಿಯುತ್ತವೆ.

ಉತ್ತರ ಕರ್ನಾಟಕದವರನ್ನು ಹಳೇ ಮೈಸೂರಿನ ಜನ, 'ಓಹೋ, ನೀವು ಆ ಕಡೆಯವರಾ...! ಅಲ್ಲಿ ತುಂಬಾ ಬಿಸಿಲಂತೆ, ದೂಳಂತೆ... ಜನ ತುಂಬಾ ಒರಟಂತೆ... ಅಲ್ಲಿ ಹೇಗಿರ್ತಾರೋಪಾ...!' ಎಂದು ಆಡಿಕೊಳ್ಳುವುದು ಅಪರೂಪವೇನಲ್ಲ. ಹಾಗೆಯೇ ಹರಿಹರ ಬಳಿಯ ತುಂಗಭದ್ರಾ ಸೇತುವೆಯ ಆ ಕಡೆಯ ಭಾಗದವರು ದಕ್ಷಿಣ ಭಾಗದವರನ್ನು, 'ಓಹ್... ಹೊಳೆಯಾಚೆಯ ಜನ!' ಎಂದು ಮೂದಲಿಸುವುದೂ ಹೊಸದಲ್ಲ. ಹಾಗೆಯೇ ಬಳ್ಳಾರಿಯವರು ಗದಗ–ಧಾರವಾಡ ಕಡೆಯವರಿಗೆ, 'ಮೇಲ್ಗಡೆಯವರು...' ಎಂದು ತುಸು ಎಳೆದ ದನಿಯಲ್ಲಿ ಹೇಳುವಲ್ಲಿ ಬೇರೇನೋ ಕೇಳಿಸುತ್ತದೆ.

ಇತ್ತೀಚೆಗೆ ಹೆಗ್ಗಡದೇವನಕೋಟೆಯಲ್ಲಿ ಭೇಟಿಯಾಗಿದ್ದ ಹಿರಿಯರೊಬ್ಬರು ನಾನು ಮೂಲತಃ ಬಳ್ಳಾರಿ ಜಿಲ್ಲೆಯಾತ, ಈಗ ಬೆಂಗಳೂರಿನಲ್ಲಿ ನೆಲೆಸಿದ್ದೇನೆ ಎಂದು ತಿಳಿದಾಕ್ಷಣ, 'ಒಳ್ಳೇದಾತು ಬಿಡಿ... ನಮ್ಮ ಮೈಸೂರು ರಾಜ್ಯ ಸೇರಿಕೊಂಡ್ರಿ...' ಎಂದು ಯಾವ ಹಿಂಜರಿಕೆಯೂ ಇಲ್ಲದೇ ನುಡಿದರು. ಉತ್ತರ ಕರ್ನಾಟಕದ ಜಿಲ್ಲೆಗಳೆಲ್ಲಾ ಪರಕೀಯ ಎಂಬ ಅವರ ಭಾವನೆಯ ಹಿಂದೆ ದುರುದ್ದೇಶವಾಗಲೀ, ಗಂಭೀರ ಚಿಂತನೆಯಾಗಲೀ ಇರಲಿಲ್ಲ; ಸಹಜ ನುಡಿಗಳಷ್ಟೇ. ಗಾಬರಿ ಹುಟ್ಟಿಸುವ ಸಂಗತಿಯೇನೆಂದರೆ, ಕರ್ನಾಟಕ ಏಕೀಕರಣಗೊಂಡು ದಶಕಗಳ ನಂತರವೂ ಇಂಥ ಉದ್ಗಾರಗಳು ಇನ್ನೂ ಉಳಿದುಕೊಂಡಿವೆ ಎಂಬುದು. ಇಂತಹ ಭಾವನೆಗಳ ಹಿಂದೆ ಚಾರಿತ್ರಿಕ ಮಹತ್ವದ ರಾಜಕೀಯ, ಆರ್ಥಿಕ ಹಾಗೂ ಸಾಂಸ್ಕೃತಿಕ ಕಾರಣಗಳು ಸುಪ್ತಗಾಮಿನಿಯಾಗಿ ಹರಿಯುವುದನ್ನು ಮರೆಯಲಾಗದು.

ಹಾಗೆ ನೋಡಿದರೆ, ಇವೇ ಚಾರಿತ್ರಿಕ ಕಾರಣಗಳ ಹಿನ್ನೆಲೆಯಲ್ಲಿ ಉತ್ತರ ಕರ್ನಾಟಕ ಕೂಡ ಅಖಂಡ ಪ್ರದೇಶವೆಂಬ ಪರಿಗಣನೆಗೂ ಒಳಪಡುವುದಿಲ್ಲ. ಅಲ್ಲಿಯೂ ಹಿಂದಿನ ಹೈದರಾಬಾದ್ ನಿಜಾಮ ಆಳ್ವಿಕೆಯ ಕಲ್ಯಾಣ ಕರ್ನಾಟಕ ಹಾಗೂ ಕಿತ್ತೂರು ಕರ್ನಾಟಕ ಎಂದು ಕರೆಯಿಸಿಕೊಳ್ಳುವ ಮುಂಬೈ-ಕರ್ನಾಟಕದ ನಡುವಿನ ಬಿರುಕು ಕೂಡ ಸಾಕಷ್ಟು ದೊಡ್ಡದಾಗಿದೆ. ಇಲ್ಲಿನ ಜನಜೀವನ ಭಿನ್ನತೆಗೆ, ಬಹುತ್ವಕ್ಕೆ ಹೇರಳ ಅವಕಾಶಗಳನ್ನು ಅಂತರ್ಗತಗೊಳಿಸಿಕೊಂಡಿರುವ ದೆಸೆಯಿಂದಾಗಿಯೇ ಸ್ವಂತಿಕೆ ಅನ್ನುವುದು ಈ ಭಾಗಗಳ ಗಾಢ ಅಸ್ಮಿತೆಯಾಗಿ ರೂಪು ತಳೆದಿರುವುದನ್ನು ಗಮನಿಸಬೇಕಾಗುತ್ತದೆ. ಆದರೆ, ಜನಮಾನಸದ ಈ 'ವಿಶಿಷ್ಟತೆ'ಯು ರಾಜಕಾರಣಿಗಳ ಮಾತಿನಲ್ಲಿ ತೂರಾಡುವ 'ಪ್ರತ್ಯೇಕತೆ'ಯ ಅರ್ಥ ಮತ್ತು ವ್ಯಾಖ್ಯಾನ ತೀರಾ ಭಿನ್ನ. ಅಂತೆಯೇ ಏಕತೆಯಲ್ಲಿನ ಈ ಬಗೆಯ ವಿವಿಧತೆಯನ್ನು ರಾಜಕಾರಣಿಗಳು ಕಾಲಕಾಲಕ್ಕೆ ಮುನ್ನೆಲೆಗೆ ತರುವ ಪ್ರತ್ಯೇಕತೆಯ ಕೂಗಿನ ಜೊತೆಗೆ ಸಮೀಕರಿಸುವ ಅವಿವೇಕ ಮತ್ತು ಅಪಾಯದ ಅರಿವು ಎಲ್ಲರಲ್ಲೂ ಮೂಡಬೇಕಿದೆ.

ಉತ್ತರ ಕರ್ನಾಟಕವನ್ನು ಪ್ರತ್ಯೇಕ ರಾಜ್ಯ ಮಾಡಬೇಕೆಂಬ ಬೇಡಿಕೆಯನ್ನು ಮಾಜಿ ಸಚಿವ ದಿವಂಗತ ಉಮೇಶ್ ಕತ್ತಿ ಹಲವಾರು ಸಲ ಸಾರ್ವಜನಿಕ ಚರ್ಚೆಗೆ ಇರಿಸಿದ್ದನ್ನು ನಾಡು ಕಂಡಿದೆ. 2023ರ ಡಿಸೆಂಬರಿನಲ್ಲಿ ಬೆಳಗಾವಿಯ ಚಳಿಗಾಲದ ಅಧಿವೇಶನದಲ್ಲಿ ಉತ್ತರ ಕರ್ನಾಟಕ ಜಿಲ್ಲೆಗಳ ಸಮಸ್ಯೆಗಳು ಎಂದಿನಂತೆ ಕಾಟಾಚಾರದ ಚರ್ಚೆಗೆ ಒಳಪಟ್ಟಿದ್ದವು. ಬಿಜೆಪಿ ಶಾಸಕ ಅಭಯ ಪಾಟೀಲ್ ಪ್ರತ್ಯೇಕ ರಾಜ್ಯದ ಬೇಡಿಕೆಯನ್ನೂ ಪ್ರಸ್ತಾಪಿಸಿದ್ದರು. ಆಗ ಸಿಎಂ ಸಿದ್ದರಾಮಯ್ಯ, 'ಉತ್ತರ ಕರ್ನಾಟಕದ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದ್ದು, ಪ್ರತ್ಯೇಕ ರಾಜ್ಯದ ಬೇಡಿಕೆ ಸಲ್ಲಿಸುವುದು ಕರ್ನಾಟಕ ಏಕೀಕರಣಕ್ಕೆ ಹೋರಾಡಿದವರಿಗೆ ಮಾಡುವ ಅವಮಾನ' ಎಂದು ಚರ್ಚೆಗೆ ತೆರೆ ಎಳೆದಿದ್ದರು.

ಇತ್ತೀಚೆಗೆ ಆಡಳಿತ ಪಕ್ಷದ ಶಾಸಕ ರಾಜು ಕಾಗೆ ಅವರು ರಾಷ್ಟ್ರಪತಿ, ಪ್ರಧಾನಿ, ರಾಜ್ಯಪಾಲರು ಮತ್ತು ಮುಖ್ಯಮಂತ್ರಿ ಅವರಿಗೆ ಪತ್ರ ಬರೆದು, 'ಉತ್ತರ ಕರ್ನಾಟಕ ಭಾಗದ ಬೀದರ್, ಕಲಬುರಗಿ, ವಿಜಯಪುರ, ಯಾದಗಿರಿ, ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಕೊಪ್ಪಳ, ರಾಯಚೂರು, ಉತ್ತರ ಕನ್ನಡ, ಹಾವೇರಿ, ವಿಜಯನಗರ, ಬಳ್ಳಾರಿ ಮತ್ತು ದಾವಣಗೆರೆ ಒಳಗೊಂಡಂತೆ 15 ಜಿಲ್ಲೆಗಳ ಉತ್ತರ ಕರ್ನಾಟಕ ಪ್ರತ್ಯೇಕ ರಾಜ್ಯ ರಚನೆಯಾಗಲಿ' ಎಂಬ ಬೇಡಿಕೆ ಮಂಡಿಸಿ ಸುದ್ದಿಯಾಗಿದ್ದರು.

ಈ ಭಾಗದ ಅಭಿವೃದ್ಧಿಯಲ್ಲಿನ ನಿರ್ಲಕ್ಷ್ಯ, ಅನುದಾನದ ಕೊರತೆ ಮತ್ತು ಆಡಳಿತಾತ್ಮಕ ತಾರತಮ್ಯವನ್ನು ನೀಗಿಸಲು ಪ್ರತ್ಯೇಕ ರಾಜ್ಯವೇ ಏಕೈಕ ಪರಿಹಾರ ಎಂಬುದು ಕೆಲವು 'ಪ್ರತ್ಯೇಕತಾವಾದಿ'ಗಳ ತೋರಿಕೆಯ ತರ್ಕ; ಒಳಗೆ ಮಾತ್ರ ಭ್ರಷ್ಟ–ಸ್ವಾರ್ಥ ರಾಜಕಾರಣದ ಸರೋವರ. ತೊಂಬತ್ತರ ದಶಕದಲ್ಲಿ ಇವರೆಲ್ಲರಿಗಿಂತ ಮುಂಚಿತವಾಗಿ ಇಂತಹದೊಂದು ದನಿ ಎತ್ತಿದ್ದು ಕನ್ನಡದ ಕಟ್ಟಾಳು ಪಾಟೀಲ ಪುಟ್ಟಪ್ಪ. ಉತ್ತರ ಕರ್ನಾಟಕದ ಜನರು ಅನುಭವಿಸುತ್ತಿದ್ದ ತಾರತಮ್ಯದ ನೋವಿನ ನೊರೆಯಾಗಿ, ಎಚ್ಚರಿಸುವ ವಿವೇಕವಾಗಿ, ಬೆದರಿಕೆಯ ತಂತ್ರವಾಗಿ ಪಾಪು ಅವರು 'ಪ್ರತ್ಯೇಕ ರಾಜ್ಯ ಬೇಡಬೇಕಾದೀತು...' ಎಂದು ಗುಡುಗಿದ್ದರು. ಅವರ ದನಿಯಲ್ಲಾಗಲೀ ಹೃದಯದಲ್ಲಾಗಲೀ ಸ್ವಾರ್ಥದ ಲವಲೇಶವೂ ಇರಲಿಲ್ಲ; ವಾಸ್ತವ ಮೀರಿದ ಪ್ರಚೋದನೆಯೂ ಇರಲಿಲ್ಲ. ಅವರ ಧ್ವನಿ ಎಲ್ಲರನ್ನೂ ತಟ್ಟಿತ್ತು.


ದಕ್ಷಿಣ ಕರ್ನಾಟಕದ ಜಿಲ್ಲೆಗಳಿಗೆ ಹೋಲಿಸಿದರೆ ಉತ್ತರ ಕರ್ನಾಟಕ ಕೈಗಾರಿಕೆ, ನೀರಾವರಿ ಮತ್ತು ಮೂಲಸೌಕರ್ಯಗಳಲ್ಲಿ ಹಿಂದುಳಿದಿದೆ; ರಾಜಕೀಯ ಮತ್ತು ಆರ್ಥಿಕ ನಿರ್ಧಾರಗಳಲ್ಲಿ ಉತ್ತರ ಕರ್ನಾಟಕದ ಭಾಗಕ್ಕೆ ಸೂಕ್ತ ಪ್ರಾತಿನಿಧ್ಯ ಮತ್ತು ಅನುದಾನ ಸಿಗುತ್ತಿಲ್ಲ ಎಂಬುದು ಪ್ರತ್ಯೇಕ ರಾಜ್ಯ ಬಯಸುವ ರಾಜಕಾರಣಿಗಳು ಮುಂದಿಡುವ ಪ್ರಮುಖ ಕಾರಣಗಳು. ಹಾಗಾದರೆ ಪ್ರತ್ಯೇಕ ರಾಜ್ಯ ರಚನೆಯಿಂದ ಈ ಎಲ್ಲಾ ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರಕಿಬಿಡುತ್ತದೆಯೆ?

ಆಡಳಿತಾತ್ಮಕ ಅನುಕೂಲ ಮತ್ತು ದಕ್ಷತೆಯ ದೃಷ್ಟಿಯಿಂದ ಚಿಕ್ಕ ಚಿಕ್ಕ ಪ್ರದೇಶಗಳು ಹೆಚ್ಚು ಪರಿಣಾಮಕಾರಿ, ಪ್ರಭಾವಶಾಲಿ ಎಂಬ ಆಲೋಚನಾ ಕ್ರಮವೂ ಇದೆ. ಆದರೆ, ಕರ್ನಾಟಕದ ವಿಭಜನೆಯ ಮೂಲಕ ಅಭಿವೃದ್ಧಿ ಮತ್ತು ಸಮತೋಲನ ಸಾಧಿಸುವ ಸಾಧ್ಯತೆ ಕುರಿತು ವಾಸ್ತವಿಕ ನೆಲೆಗಟ್ಟಿನಲ್ಲಿ ಯಾವುದೇ ಸುಳಿವು ಕಾಣಿಸುವುದಿಲ್ಲ. ಏಕೆಂದರೆ, ಉತ್ತರ ಕರ್ನಾಟಕವು ಸಮೃದ್ಧ ರಾಜಕಾರಣಿಗಳು ಮತ್ತು ಅಧಿಕಾರಿಗಳನ್ನು 'ಬೆಳೆಸಿದ' ಅತ್ಯಂತ ಹಿಂದುಳಿದ ಪ್ರದೇಶ ಎಂಬ ಕಟುಸತ್ಯ ಕಣ್ಣೆದುರಿಗಿದೆ. ಹೊಸ ರಾಜ್ಯದಲ್ಲಿಯೂ ಈ ಹಳೆಯ ಸಂತತಿಯ ಅಭಿವೃದ್ಧಿ ಇನ್ನಷ್ಟು ಮುಂದುವರಿದು ಜನಸಾಮಾನ್ಯರ ಬದುಕು ಮತ್ತಷ್ಟು ಹಿಂದುಳಿಯಲಾರದು ಎಂದು ನಂಬಬಹುದೆ?

ಉತ್ತರ ಕರ್ನಾಟಕದ ರಾಜಕಾರಣಿಗಳಿಗೆ ಈ ನಿಟ್ಟಿನ ಕಳಕಳಿ, ಇಚ್ಛಾಶಕ್ತಿ ಮತ್ತು ಪ್ರಾಮಾಣಿಕತೆ ಇದೆಯೇ ಎಂಬ ಪ್ರಶ್ನೆಗೆ ಸಕಾರಾತ್ಮಕ ಉತ್ತರ ನೀಡಬಲ್ಲ ಏಕೈಕ ನಿದರ್ಶನವೂ ಸಿಗುವುದಿಲ್ಲ. ಉತ್ತರ ಕರ್ನಾಟಕದವರೇ ಆದ ಎಸ್. ನಿಜಲಿಂಗಪ್ಪ, ಬಿ.ಡಿ. ಜತ್ತಿ, ಎಸ್.ಆರ್. ಕಂಠಿ, ವೀರೇಂದ್ರ ಪಾಟೀಲ, ಧರ್ಮಸಿಂಗ್, ರಾಮಕೃಷ್ಣ ಹೆಗಡೆ, ಎಸ್.ಆರ್. ಬೊಮ್ಮಾಯಿ, ಜೆ.ಎಚ್. ಪಟೇಲ್, ಜಗದೀಶ್ ಶೆಟ್ಟರ್, ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಗಳಾಗಿ ರಾಜ್ಯಭಾರ ಮಾಡಿದರೂ ಅಸಮತೋಲನ ಉಳಿದಿದ್ದಾದರೂ ಏಕೆ? ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ಪಾಟೀಲ, ಭೀಮಣ್ಣ ಖಂಡ್ರೆ, ಎಂ.ಬಿ. ಪಾಟೀಲ, ಸತೀಶ ಜಾರಕಿಹೊಳಿ ಹಾಗೂ ಅವರ ಕುಟುಂಬಗಳು ಉತ್ತರ ಕರ್ನಾಟಕ 'ಮುಂದುವರಿಯದಿರಲು ನೀಡಿದ ಕೊಡುಗೆ'ಯನ್ನು ಸ್ಮರಿಸದಿದ್ದರೆ ಹೇಗೆ?

ಏಳು ದಶಕಗಳ ಹಿಂದಿನ ಅಸಮತೋಲನದ ಕಾರಣಗಳನ್ನೇ ಈಗಲೂ ಮುಂದಿಟ್ಟುಕೊಂಡು ವಿಮರ್ಶೆಗಿಳಿಯುವುದು ಸರಿಯಾದ ನಡೆ ಎನ್ನಿಸುವುದಿಲ್ಲ. ಈ ಅವಧಿಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಸಂಭವಿಸಿದ ಲೋಪದೋಷಗಳ ಹೊಣೆಗಾರಿಕೆಯನ್ನು ಯಾರಾದರೂ ಹೊರಬೇಕಲ್ಲವೆ?

ಹಿಂದುಳಿದ ಪ್ರದೇಶದ ಸಮಗ್ರ ಅಭಿವೃದ್ಧಿಗಾಗಿ ಮುಂದಿನ ಐದು ವರ್ಷಗಳಲ್ಲಿ ₹43,914 ಕೋಟಿ ಹೆಚ್ಚುವರಿ ಅನುದಾನ ನೀಡಿ ಪರಿಣಾಮಕಾರಿಯಾಗಿ ಬಳಸಬೇಕೆಂಬ ಪ್ರೊ. ಎಂ. ಗೋವಿಂದರಾವ್ ಸಮಿತಿಯ ಶಿಫಾರಸನ್ನು ಆಧರಿಸಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮುಂಬರುವ ಬಜೆಟ್‌ನಲ್ಲಿಯೇ ಹಣ ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಆದರೆ, ಅನುದಾನವೇ ಅಭಿವೃದ್ಧಿಯ ಅಳತೆಗೋಲು ಆಗಲು ಸಾಧ್ಯವೇ? ಕಬಳಿಕೆಗೆ ಕಾದುಕುಳಿತಿರುವ ತಿಮಿಂಗಿಲಗಳ ನಡುವೆ ಬಿಡುಗಡೆ ಆಗುವ ಅನುದಾನ ಅಭಿವೃದ್ಧಿಯನ್ನು ಯಾವ ದಿಕ್ಕಿನಲ್ಲಿ, ಯಾರ ಲಾಭದಲ್ಲಿ ಸಾಧಿಸುತ್ತದೆ ಎಂಬ ಪ್ರಶ್ನೆ ಸಹ ಉತ್ತರ ಬಯಸುತ್ತದೆ.



ವಾಚಕರ ವಾಣಿ

ಸಮೀಕ್ಷೆಯ ಹಣ ಪಾವತಿಗೆ ಮೀನಮೇಷ

ಸರ್ಕಾರದಿಂದ ನಡೆದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯಲ್ಲಿ ವಿವಿಧ ಇಲಾಖೆ ನೌಕರರು, ಶಿಕ್ಷಕರು, ಮಂಡಳಿ ಮತ್ತು ನಿಗಮದ ಸಿಬ್ಬಂದಿ ಪಾಲ್ಗೊಂಡಿದ್ದರು. ಸಮೀಕ್ಷೆ ಮುಗಿದ ಕೆಲವೇ ದಿನಗಳಲ್ಲಿ ಸಮೀಕ್ಷೆದಾರರ ಬ್ಯಾಂಕ್ ಖಾತೆಗೆ ಗೌರವಧನ ಸಂದಾಯ ಮಾಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆಯಿತ್ತಿದ್ದರು. ಸಮೀಕ್ಷೆ ಮುಗಿದು ಮೂರೂವರೆ ತಿಂಗಳಾಗುತ್ತಾ ಬಂದರೂ ಈವರೆಗೂ ಹಣ ಸಂದಾಯವಾಗಿಲ್ಲ. ಸಮೀಕ್ಷಕರು ಹಗಲುರಾತ್ರಿಯೆನ್ನದೆ, ಸರಿಯಾದ ಸಮಯಕ್ಕೆ ಊಟ, ನೀರಿಲ್ಲದೆ ಕೆಲಸ ನಿರ್ವಹಿಸಿದ್ದಾರೆ. ಸರ್ಕಾರದ ತಾತ್ಸಾರ ಸರಿಯಲ್ಲ. ವಿಪರೀತ ಒತ್ತಡ ಹೇರಿ ಕೆಲಸ ಮಾಡಿಸಿಕೊಳ್ಳುವ ಸರ್ಕಾರ, ಗೌರವಧನ ಕೊಡುವ ವಿಷಯದಲ್ಲಿ ವಿಳಂಬನೀತಿ ಅನುಸರಬಾರದು.

ವಿ.ಎಸ್. ಕುಮಾರ್, ಬೆಂಗಳೂರು

ಕಾವೇರಿ ನದಿ ಮಲಿನ; ತಡೆಗಿಲ್ಲ ಗಮನ

ಇತ್ತೀಚೆಗೆ ನಾನು, ನನ್ನ ಪತ್ನಿ ಮತ್ತು ಅವರ ಅಣ್ಣ ಮೇಕೆದಾಟು ಸಮೀಪದ ಸಂಗಮದಲ್ಲಿ ಸ್ನಾನ ಮಾಡಲು ಹೋಗಿದ್ದೆವು. ಅರ್ಕಾವತಿ ರಾಜ್ಯದ ಅತ್ಯಂತ ಕಲುಷಿತ ನದಿಯಾಗಿದೆಯೆಂದು ಅರಣ್ಯ ಸಚಿವರೇ ಹೇಳಿರುವುದರಿಂದ ಸಂಗಮಕ್ಕೆ ಮೇಲಿರುವ ಕಾವೇರಿ ನದಿಯಲ್ಲಿ ಸ್ನಾನಕ್ಕೆ ಹೋದೆವು. ನದಿ ಹರಿಯುವ ದಾರಿ ಯುದ್ದಕ್ಕೂ ಪ್ಲಾಸ್ಟಿಕ್ ಬಾಟಲ್ ಮತ್ತಿತರ ತ್ಯಾಜ್ಯದ ಜೊತೆಗೆ ಮದ್ಯದ ಬಾಟಲ್‌ಗಳನ್ನು ದಾಟಿಕೊಂಡು ನದಿಯ ಹತ್ತಿರ ಹೋದೆವು. ಅಲ್ಲಿ ಭಕ್ತರು ಬಿಟ್ಟುಹೋಗಿದ್ದ ಕೊಳೆತ ಬಟ್ಟೆಗಳು, ಪೂಜಾವಸ್ತುಗಳು ಬಿದ್ದಿದ್ದವು. ನದಿ ನೀರಿನ ಬಣ್ಣ, ಮಾಲಿನ್ಯ ನೋಡಿ ದಿಗಿಲಾಯಿತು. ಕೊನೆಗೆ ಸ್ನಾನ ಮಾಡದೆ ವಾಪಸ್ ಬಂದೆವು. ನದಿಯಲ್ಲಿ ಮಿಂದು ನಾವು ಶುಚಿಯಾಗಿ ಬರುವುದೆಂದರೆ, ನಮ್ಮ ಹೊಲಸನ್ನೆಲ್ಲ ಅಲ್ಲಿ ಬಿಟ್ಟು ಬರುವುದಲ್ಲ. ಜನರು ಈ ಸತ್ಯ ಅರಿಯಬೇಕಿದೆ.

ರಾ.ನಂ. ಚಂದ್ರಶೇಖರ, ಬೆಂಗಳೂರು

ಪ್ರೀತಿ ಪ್ರದರ್ಶನವಲ್ಲ, ಜೀವನದ ಬದ್ಧತೆ

ಫೆ. 14 ಬಂತೆಂದರೆ ಮೊಬೈಲ್ ಸ್ಟೇಟಸ್‌ನಲ್ಲಿ ಪ್ರೀತಿಯ ಸುರಿಮಳೆ ಯಾಗುತ್ತದೆ. ಆದರೆ, ವರ್ಷಕ್ಕೆ ಒಂದು ದಿನ ಕೆಂಪು ಗುಲಾಬಿ ನೀಡುವುದರಿಂದ ಅಥವಾ ಸಾಮಾಜಿಕ ಜಾಲತಾಣದಲ್ಲಿ ಫೋಟೊ ಹಂಚಿಕೊಳ್ಳುವುದರಿಂದ ನಿಜವಾದ ಪ್ರೀತಿ ವ್ಯಕ್ತವಾಗುತ್ತದೆಯೆ? ಇಂದಿನ ಫಾಸ್ಟ್‌ಫುಡ್ ಸಂಸ್ಕೃತಿಯಲ್ಲಿ ಪ್ರೀತಿ ಪ್ರದರ್ಶನದ ವಸ್ತುವಾಗುತ್ತಿದೆ. ಆದರೆ, ನಿಜವಾದ ಪ್ರೀತಿ ಇರುವುದು ಒಬ್ಬರು ಇನ್ನೊಬ್ಬರ ವ್ಯಕ್ತಿತ್ವಕ್ಕೆ ನೀಡುವ ಗೌರವದಲ್ಲಿ. ಒಬ್ಬರ ಕನಸುಗಳಿಗೆ ಮತ್ತೊಬ್ಬರು ನೀಡುವ ಬೆಂಬಲದಲ್ಲಿ ಮತ್ತು ಹೆತ್ತವರ ನಂಬಿಕೆ ಉಳಿಸಿಕೊಳ್ಳುವ ಜವಾಬ್ದಾರಿಯಲ್ಲಿ. ಕ್ಷಣಿಕ ಆಕರ್ಷಣೆಗೆ ಬಲಿಯಾಗಿ ಭವಿಷ್ಯವನ್ನು ಬಲಿಗೊಡುವುದು ಸರಿಯಲ್ಲ. ಪ್ರೀತಿ ಒಬ್ಬ ವ್ಯಕ್ತಿಗೆ ಸೀಮಿತವಾದುದಲ್ಲ. ಬದುಕನ್ನು ರೂಪಿಸಿದ ಪೋಷಕರು ಮತ್ತು ಹಿತೈಷಿಗಳ ಮೇಲೂ ನಮಗೆ ಪ್ರೀತಿ, ಗೌರವವಿರಲಿ.

ಸುಜಾತ ನಾಯಕ, ಶಕ್ತಿನಗರ

ರಣಜಿ ಪ್ರಶಸ್ತಿ: ರಾಜ್ಯದ ನಿರೀಕ್ಷೆಗೆ ಚೈತನ್ಯ

ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ಮುಂಬೈ ವಿರುದ್ಧ ಕರ್ನಾಟಕ 325 ರನ್‌ಗಳನ್ನು ಬೆನ್ನಟ್ಟಿ ಗುರಿ ಮುಟ್ಟಿದ್ದು ಕ್ರಿಕೆಟ್ ಪ್ರಿಯರಿಗೆ ರಸದೌತಣ ಉಣಬಡಿಸಿತು. ನಾಲ್ಕನೇ ಇನ್ನಿಂಗ್ಸ್ ಆಟದ ಒತ್ತಡದಲ್ಲಿ ಕೆ.ಎಲ್. ರಾಹುಲ್ ಅವರ ಆತ್ಮವಿಶ್ವಾಸ ಭರಿತ ಇನ್ನಿಂಗ್ಸ್ ಈ ಗೆಲುವಿಗೆ ಆಧಾರ. ರವಿಚಂದ್ರನ್ ಸ್ಮರಣ್ ಕೂಡ ಅತ್ಯುತ್ತಮ ಆಟದೊಂದಿಗೆ ಸಂಯಮವನ್ನು ಪ್ರದರ್ಶಿಸಿ ಕೈಜಾರುತ್ತಿದ್ದ ಗೆಲುವನ್ನು ದೊರಕಿಸಿಕೊಟ್ಟರು. ಈ ಗೆಲುವು 2010ರ ರಣಜಿ ಟ್ರೋಫಿ ಫೈನಲ್‌ನಲ್ಲಿ ಮುಂಬೈ ವಿರುದ್ಧ ಕೇವಲ ಆರು ರನ್‌ಗಳಿಂದ ಕರ್ನಾಟಕ ಪ್ರಶಸ್ತಿ ಕಳೆದುಕೊಂಡ ನೆನಪುಗಳನ್ನು ಮತ್ತೆ ಜೀವಂತಗೊಳಿಸಿತು! ಬಲಿಷ್ಠ ಎದುರಾಳಿಯ ವಿರುದ್ಧ ಸಾಧಿಸಿದ ಈ ಮಹತ್ವದ ಜಯ ರಣಜಿ ಟ್ರೋಫಿ ಪ್ರಶಸ್ತಿಯನ್ನು ಮತ್ತೆ ಗೆಲ್ಲುವತ್ತ ಕರ್ನಾಟಕದ ಆತ್ಮವಿಶ್ವಾಸವನ್ನು ಹೆಚ್ಚಿಸಲಿದೆ.

ಕಲ್ಯಾಣ ರಾಮನ್ ಚಂದ್ರಶೇಖರನ್, ಬೆಂಗಳೂರು

ವೀಸಾ ನೀಡಿಕೆ: ಕಾರ್ಯವಿಧಾನ ಬದಲಾಗಲಿ

ಈ ಮೊದಲೆಲ್ಲಾ ಅರ್ಜಿ ಅಂಗೀಕೃತವಾಗಿ ವೀಸಾ ನೀಡಲು ಅನುಮತಿ ಸಿಕ್ಕ ನಂತರವಷ್ಟೆ ಬೆರಳಚ್ಚು, ಮುಖ, ಕಣ್ಣಿನ ಐರೀಸ್ ಬಳಸಿಕೊಂಡು ಬಯೊಮೆಟ್ರಿಕ್ ದಾಖಲಿಸಲಾಗುತ್ತಿತ್ತು. ಈಗ ಮೊದಲೇ ಬಯೊಮೆಟ್ರಿಕ್ ದಾಖಲಿಸಿ, ನಂತರ ಅರ್ಜಿ ಪರಿಶೀಲಿಸಿ, ವೀಸಾ ನೀಡುವ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗುತ್ತದೆ. ವೀಸಾ ಸಿಕ್ಕರೆ ಸಾಕೆಂದು ಇದನ್ನು ಯಾರೂ ಪ್ರಶ್ನಿಸಲು ಹೋಗುವುದಿಲ್ಲ. ಆದರೆ, ವೀಸಾ ಕೊಡುವ ಮೊದಲೇ ಬಯೊಮೆಟ್ರಿಕ್‌ನ ಅಗತ್ಯ ಏನಿದೆ? ವೀಸಾ ತಿರಸ್ಕೃತವಾದರೆ ತೀರಾ ಖಾಸಗಿ ದಾಖಲೆಗಳಾದ ಬಯೊಮೆಟ್ರಿಕ್ ದತ್ತಾಂಶಗಳಿಂದ ಯಾರಿಗೆ ಪ್ರಯೋಜನ? ಆ ದಾಖಲೆಗಳು ಸೈಬರ್ ಅಪರಾಧಗಳಿಗೆ ಬಳಕೆಯಾಗುವುದಿಲ್ಲ ಎಂಬ ಖಾತರಿ ಇದೆಯೆ? ಈಗಿನ ಕಾರ್ಯವಿಧಾನದಲ್ಲಿ ಬದಲಾವಣೆ ತರಬೇಕಿದೆ.

ಟಿ.ವಿ.ಬಿ. ರಾಜನ್, ಬೆಂಗಳೂರು

'ಕಲ್ಯಾಣ'ದಲ್ಲಿ 'ಪ್ರತಿಭಾ ಕಾರಂಜಿ' ಯಶಸ್ವಿ

ರಾಜ್ಯಮಟ್ಟದ ಪ್ರೌಢಶಾಲೆಗಳ ಪ್ರತಿಭಾ ಕಾರಂಜಿ ಸ್ಪರ್ಧೆಯು ಕೊಪ್ಪಳ ಜಿಲ್ಲೆಯ ಕಾರಟಗಿ ಪಟ್ಟಣದಲ್ಲಿ ಯಶಸ್ವಿಯಾಗಿ ನಡೆಯಿತು. ಕಲ್ಯಾಣ ಕರ್ನಾಟಕದ ಜಿಲ್ಲೆಗಳಲ್ಲಿ ಈವರೆಗೂ ರಾಜ್ಯಮಟ್ಟದ ಈ ಸ್ಪರ್ಧೆ ನಡೆದಿರಲಿಲ್ಲ. ವಿದ್ಯಾರ್ಥಿಗಳಿಗೆ ಊಟದ ದಾರಿ ಹುಡುಕಲು ಕ್ಯುಆರ್ ಕೋಡ್ ವ್ಯವಸ್ಥೆ, ಆಕರ್ಷಕ ಗುರುತಿನ ಚೀಟಿ, ಉತ್ತಮ ಸಾರಿಗೆ ವ್ಯವಸ್ಥೆ, 'ಸಂಪ್ರೀತಿ' ಶಿಕ್ಷಕರ ತಂಡದ ನಾಡಗೀತೆ, ರೈತಗೀತೆ, ಪಿಎಂಶ್ರೀ ಶಾಲೆಗಳ ಕಲಿಕಾ ವಸ್ತುಪ್ರದರ್ಶನ, ಜೊತೆಗೆ ವಸತಿ ವ್ಯವಸ್ಥೆಯು ಅಚ್ಚುಕಟ್ಟಾಗಿತ್ತು. ಕಲ್ಯಾಣ ಕರ್ನಾಟಕದ ಜಿಲ್ಲೆಗಳು ಆತಿಥ್ಯಕ್ಕೆ ಹೆಸರಾಗಿವೆ. ರಾಜ್ಯಮಟ್ಟದ ಸ್ಪರ್ಧೆಗಳು ಈ ಜಿಲ್ಲೆಗಳಲ್ಲಿ ಹೆಚ್ಚು ನಡೆಯುವಂತಾಗಲಿ.

ಮಲ್ಲಪ್ಪ ಫ. ಕರೇಣ್ಣನವರ, ಹಾವೇರಿ



ವ್ಯವಸ್ಥಿತ ಷಡ್ಯಂತ್ರ

ಗುರುಗಳನ್ನು ಗುಮಾಸ್ತರನ್ನಾಗಿಸಿದ, ಬೋಧನೆ ಬಿಡಿಸಿ ಲೆಕ್ಕಾಧಿಕಾರಿಗಳನ್ನಾಗಿಸಿದ, ಶಾಲೆ ಬಿಡಿಸಿ ಗ್ರಾಮ ಉಸ್ತುವಾರಿಗಳನ್ನಾಗಿಸಿದ ಏಕೈಕ ವ್ಯವಸ್ಥೆ ನಮ್ಮದು!

ವೀರಕಪುತ್ರ ಶ್ರೀನಿವಾಸ, ಪುಸ್ತಕೋದ್ಯಮಿ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಕನ್ನಡನಾಡಿನ ನಟಿಯರನ್ನು ಬಿಟ್ಟು ಬೇರೆಯವರಿಗೆ ಮಣೆ ಹಾಕುವ ಕಾಂಗ್ರೆಸ್ ಪಕ್ಷದ ಧೋರಣೆ ಕನ್ನಡನಾಡಿನ ಪ್ರತಿಭೆಗಳಿಗೆ ಮಾಡಿರುವ ಅಪಮಾನ ಮಾತ್ರವಲ್ಲ, ಮೈಸೂರು ಸ್ಯಾಂಡಲ್ ಸೋಪಿನ ಅಸ್ಮಿತೆಗೂ ಮಾಡಿರುವ ಘೋರ ಅಪಮಾನ.

ಡಾ. ಕೆ. ಸುಧಾಕರ್, ಬಿಜೆಪಿ ಸಂಸದ

25 ವರ್ಷಗಳ ಹಿಂದೆ

ಭಾನುವಾರ, 11-2-2001

• ಜಮ್ಮು: ಬುಡಕಟ್ಟು ಜನಾಂಗದ 15 ಜನರ ಹತ್ಯೆ

ಜಮ್ಮು, ಫೆ. 10 (ಪಿಟಿಐ)– ಜಮ್ಮು ಮತ್ತು ಕಾಶ್ಮೀರದ ರಾಜೌರಿ ಜಿಲ್ಲೆಯ ಕೊಚತ್ವಾಲ್ ಎಂಬ ಹಳ್ಳಿಯಲ್ಲಿ ನಿನ್ನೆ ರಾತ್ರಿ ಶಸ್ತ್ರಸಜ್ಜಿತ ಉಗ್ರಗಾಮಿಗಳು ಅಲೆಮಾರಿ ಬುಡಕಟ್ಟು ಜನಾಂಗಕ್ಕೆ ಸೇರಿದ ಮೂವರು ಮಹಿಳೆಯರು, ಏಳು ಮಕ್ಕಳು ಸೇರಿದಂತೆ ಹದಿನೈದು ಜನರನ್ನು ಗುಂಡಿಟ್ಟು ಕೊಂದಿದ್ದಾರೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ನಿನ್ನೆ ಮಧ್ಯರಾತ್ರಿ ಹಳ್ಳಿಗೆ ದಾಳಿ ಯಿಟ್ಟ ಉಗ್ರರು ಮೊದಲು ಮಕ್ಕಳನ್ನು ಹೊಡೆದರು. ನಂತರ ಒಂದೇ ಸಮನೆ ಗುಂಡಿನ ಮಳೆಗರೆದರು. ಇದರಿಂದ ಬಾಕರ್ವಾಲ್ ಸಮುದಾಯದ 15 ಜನರು ಮೃತರಾದರು. ತಕ್ಷಣ ಗ್ರಾಮ ರಕ್ಷಣಾ ಸಮಿತಿಯ ಸದಸ್ಯರು ಧಾವಿಸಿ ಪ್ರತಿದಾಳಿ ನಡೆಸಿದರು.

• ಅಪಘಾತ: ಹೊತ್ತಿಕೊಂಡ ಬೆಂಕಿಗೆ 10 ಜನ ಸಜೀವ ದಹನ

ಬೆಳಗಾವಿ, ಫೆ. 10– ಸಂಕೇಶ್ವರ ಬಳಿಯ ಹೆಬ್ಬಾಳ ಸಮೀಪ ರಾಷ್ಟ್ರೀಯ ಹೆದ್ದಾರಿ (ಪುಣೆ–ಬೆಂಗಳೂರು) ನಂ. 4ರಲ್ಲಿ ಮಧ್ಯರಾತ್ರಿ 12.30ರ ಸುಮಾರಿಗೆ ಟೆಂಪೋಟ್ರ್ಯಾಕ್ಸ್ ಮತ್ತು ಲಾರಿ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಎಂಟು ವಿದ್ಯಾರ್ಥಿಗಳು ಸೇರಿದಂತೆ 10 ಜನರು ಸಜೀವ ದಹನವಾಗಿದ್ದು, ಮೂವರು ವಿದ್ಯಾರ್ಥಿಗಳು ತೀವ್ರವಾಗಿ ಗಾಯಗೊಂಡಿದ್ದಾರೆ.

ಅಪಘಾತದಲ್ಲಿ ಹೊತ್ತಿಕೊಂಡ ಬೆಂಕಿಯಿಂದ ಟೆಂಪೋಟ್ರ್ಯಾಕ್ಸ್, ಲಾರಿ ಹಾಗೂ 8 ವಿದ್ಯಾರ್ಥಿಗಳು, ಒಬ್ಬ ಶಿಕ್ಷಕ, ಟೆಂಪೋಟ್ರ್ಯಾಕ್ಸ್ ಚಾಲಕ ಸಂಪೂರ್ಣ ಸುಟ್ಟು ಕರಕಲಾಗಿದ್ದಾರೆ.

75 ವರ್ಷಗಳ ಹಿಂದೆ

ಭಾನುವಾರ, 11-2-1951

• ಕ್ಷಾಮಪೀಡಿತ ಪ್ರದೇಶದಲ್ಲಿ ಪರಿಹಾರ ಕಾರ್ಯ ಪರಿಶೀಲನೆ

ಬೆಂಗಳೂರು, ಫೆ. 9– ಇಂದು ತಮ್ಮ ಮೂರು ದಿನಗಳ ಕೋಲಾರದ ಪ್ರವಾಸ ಮುಗಿಸಿದ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರು, ನಿನ್ನೆ ಮತ್ತು ಇಂದು ಹೋದ ಸಾರಿ ಮಳೆ ಬಾರದೆ ಕ್ಷಾಮಪೀಡಿತವಾಗಿರುವ ಜಿಲ್ಲೆಯ ಪ್ರದೇಶಗಳಿಗೆ ಭೇಟಿಯಿತ್ತು ಜನ, ಜಾನುವಾರುಗಳ ಸ್ಥಿತಿಗತಿಗಳನ್ನು ವಿಚಾರಿಸಿ, ನಡೆಯುತ್ತಿರುವ ಪರಿಹಾರ ಕಾರ್ಯಗಳನ್ನು ಪರಿಶೀಲಿಸಿ, ಸರ್ಕಾರ ಮುಂದೇನು ಮಾಡಬೇಕು ಎಂಬುದನ್ನು ಅರಿತುಕೊಂಡರು.

ಮೊದಲ ದಿನದಲ್ಲಿ ಕೋಲಾರ ಜಿಲ್ಲೆಯ ಗೌರಿಬಿದನೂರು ತಾಲ್ಲೂಕು ಪ್ರವಾಸ ಮುಗಿಸಿದ ಮುಖ್ಯಮಂತ್ರಿ ಅವರು, ಬೌರಿಂಗ್ ಪೇಟೆ, ಮುಳಬಾಗಿಲು, ಕೋಲಾರ, ಬಾಗೇಪಲ್ಲಿ, ಗುಡಿಬಂಡೆ ತಾಲ್ಲೂಕುಗಳ ಕ್ಷಾಮಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ಚುರುಮುರಿ



ಕಲಾಪ ಪ್ರತಾಪ

• ಮಣ್ಣೆ ರಾಜು

'ಕಲಾಪದಲ್ಲಿನ ನಿಮ್ಮ ಪ್ರತಾಪವನ್ನು ಟೀವಿಯಲ್ಲಿ ನೋಡಿ ಆನಂದಪಟ್ಟೆ! ಮಹಾನ್ ನಾಯಕರಾಗಿ ಬೆಳೆಯುವ ಎಲ್ಲಾ ಲಕ್ಷಣಗಳೂ ನಿಮಗಿವೆ ಕಣ್ರೀ...' ಮನೆಗೆ ಬಂದ ನಾಯಕರನ್ನು ಪತ್ನಿ ಅಭಿಮಾನದಿಂದ ಹೊಗಳಿದರು.

'ಹಿಂದೆ ರಾಜಮಹಾರಾಜರು ರಾಜ್ಯದ ರಕ್ಷಣೆಗಾಗಿ ಹೋರಾಡುತ್ತಿದ್ದರಲ್ಲ, ಹಾಗೇ ನಾವೂ ಕಲಾಪದಲ್ಲಿ ಹೋರಾಟ ಮಾಡಬೇಕು. ಕಲಾಪಗಳು ರಣರಂಗ ಆಗ್ತಿವೆ. ಜಟ್ಟಿ, ಗಟ್ಟಿಗಳು ಮಾತ್ರವೇ ಗೆಲ್ಲಲು ಸಾಧ್ಯ' ಎಂದು ನಾಯಕರು ಬೀಗಿದರು.

'ರಾಜರು ಯುದ್ಧಭೂಮಿಯಲ್ಲಿ ಕತ್ತಿ, ಗುರಾಣಿ, ಬಿಲ್ಲು-ಬಾಣ ಹಿಡಿದು ಹೋರಾಡ್ತಿದ್ದರು, ಕಲಾಪ ಹೋರಾಟಕ್ಕೆ ಶಸ್ತ್ರಾಸ್ತ್ರವಿಲ್ಲ'.

'ನಾಲಿಗೆಯೇ ನಮಗೆ ಅಸ್ತ್ರ! ಹರಿತ ನಾಲಿಗೆಯಿಂದ ಎದುರಾಳಿಗಳನ್ನು ಸದೆಬಡಿಯಬಹುದು!'

'ನಾಲಿಗೆ ಹರಿಬಿಟ್ಟು ಅಸಾಂವಿಧಾನಿಕ ಪದಗಳನ್ನು ಹೆಚ್ಚಾಗಿ ಬಳಸ್ತೀರಿ ಎಂಬ ಆರೋಪ ನಿಮ್ಮ ಮೇಲಿದೆ'.

'ಕಲಾಪದಲ್ಲಿ ಗದೆ, ಒದೆ ಬಳಕೆಗೆ ಅವಕಾಶವಿಲ್ಲ. ನಾಲಿಗೆ ಬಳಸದಿದ್ದರೆ ಶತ್ರುನಿಗ್ರಹ ಸಾಧ್ಯವಾಗುವುದಿಲ್ಲ'.

'ಗಂಟಲು ಹರಿದುಕೊಂಡು, ಬೆವರು ಹರಿಸಿಕೊಂಡು ಕಲಾಪದಲ್ಲಿ ಪ್ರತಾಪ ತೋರಿದ ಪರಾಕ್ರಮಿ ನೀವು!'

'ಪ್ರಜೆಗಳ ಹಿತಕ್ಕಾಗಿ ಹೋರಾಡುವಾಗ ಬೆವರೂ, ಬಟ್ಟೆಯೂ ಹರಿಯುತ್ತದೆ'.

'ಇವತ್ತೂ ಬಟ್ಟೆ ಹರಿದುಕೊಂಡು ಬಂದ್ರಾ... ಮಕ್ಕಳು ಜಗಳವಾಡಿ ಬಟ್ಟೆ ಹರಿದುಕೊಳ್ಳುವಂತೆ ನೀವು ಪ್ರತಿ ಬಾರಿಯೂ ಬಟ್ಟೆ ಹರಿದುಕೊಳ್ತೀರಿ...' ಪತಿಯ ಹರಿದ ಜುಬ್ಬಾ ಬಿಚ್ಚಿದರು.

'ಪ್ರಜೆಗಳ ರಕ್ಷಣೆಗಾಗಿ ಬಟ್ಟೆ ತ್ಯಾಗಕ್ಕೂ ಸಿದ್ಧರಿರಬೇಕು'.

'ಸರ್ಕಾರಿ ನೌಕರರು ತಿಂಗಳಿಗೊಮ್ಮೆ ಖಾದಿ ಡ್ರೆಸ್ ಧರಿಸುವುದನ್ನು ಸರ್ಕಾರ ಕಡ್ಡಾಯ ಮಾಡಲಿದೆಯಂತೆ. ನಿಮ್ಮಂತಹ ಕಲಾಪ ಕಲಿಗಳಿಗೆ ಸರ್ಕಾರ ಪ್ರತ್ಯೇಕ ಬಟ್ಟೆ ಕೊಡಬೇಕು'.

'ಬಟ್ಟೆ ಹರಿಯೋದು, ಸರ್ಕಾರದ ಸುತ್ತೋಲೆ ಹರಿಯೋದು ಕಲಾಪದಲ್ಲಿ ಸಹಜ'.

'ಆದರೆ, ಜನನಾಯಕರ ವರ್ತನೆಯಿಂದ ಅಸೆಂಬ್ಲಿ, ಪಾರ್ಲಿಮೆಂಟ್‌ನ ಘನತೆ, ಗೌರವಕ್ಕೆ ಧಕ್ಕೆಯಾಗುತ್ತಿದೆ. ಎಂದು ಪೇಪರ್‌ನವರು ಟೀಕೆ ಮಾಡಿ ಬರೆಯುತ್ತಿದ್ದಾರೆ ಕಣ್ರೀ...' ಬೇಸರಗೊಂಡ ಪತ್ನಿ ನಾಯಕರಿಗೆ ಹೊಸ ಜುಬ್ಬಾ ತೊಡಿಸಿದರು.

ಸಂಗತ

ಕೊಪ್ಪಳದ ಸಂಕಟ ಸರ್ಕಾರಕ್ಕೆ ಕಾಣಿಸದೆ?

ಕೊಪ್ಪಳ ಜಿಲ್ಲೆ ಪರಿಸರ ವಿಷಮಯವಾಗಿದೆ. ಮಾಲಿನ್ಯ ವಿರೋಧಿಸಿ ನಡೆಯುತ್ತಿರುವ ಹೋರಾಟಕ್ಕೆ ನೂರು ದಿನ ತುಂಬಿದರೂ, ಸರ್ಕಾರ ಮೌನವಾಗಿದೆ.

• ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಲೇಖಕ ಅಲ್ಲಮಪ್ರಭು ಬೆಟ್ಟದೂರರು ನಮ್ಮನ್ನು ಕೊಪ್ಪಳ ಜಿಲ್ಲೆಯ ಹಿರೇಬಗನಾಳ್ ಮತ್ತು ಹಾಲವರ್ತಿ ಗ್ರಾಮಗಳಿಗೆ ಕರೆದುಕೊಂಡು ಹೋಗಿದ್ದರು. ನಾವು ದೇವಾಲಯದೊಳಗೆ ಹೋಗುವುದು ವಿರಳವಾದರೂ, ಅಲ್ಲಿಯ ಜನರ ಒತ್ತಾಯ ತಿರಸ್ಕರಿಸಲಾಗಲಿಲ್ಲ. ನೆಲಕ್ಕೆ ಹಾಕಿರುವ ಕಲ್ಲುಹಾಸಿಗೆಯ ಮೇಲೆ ಕಾಲಿಟ್ಟಾಗ ಅಂಗಾಲುಗಳಿಗೆ ಮಸಿ ಮೆತ್ತಿಕೊಂಡಿತು. 'ಬುದ್ಧಿ, ಬೆಳಗ್ಗೆ ಕಸ ಹೊಡೆದು ತೊಳೆದಿದ್ದೇವೆ. ಇದು ಈ ಭಾಗದಲ್ಲಿರುವ 200ಕ್ಕೂ ಹೆಚ್ಚಿನ ಕಬ್ಬಿಣ ಕಾರ್ಖಾನೆಗಳ ದೇಣಿಗೆ' ಎಂದರು. 'ಮನೆಯೊಳಗೂ ಇದೇ ಹಣೇಬರಹ. ರೊಟ್ಟಿ ಬಯಲಿಗಿಟ್ಟರೆ ಅದೂ ಮಸಿಯಾಗುತ್ತದೆ' ಎಂದರು.

ಪರಿಸರ ಮಾಲಿನ್ಯರಹಿತ ಆಗಿರಬೇಕೆಂದರೆ ಕಾರ್ಖಾನೆಗಳು ಉಗುಳುವ ಹೊಗೆ, ಕಿಟ್ಟ ಮತ್ತಿತರ ವಿಷಕಾರಿ ಅನಿಲಗಳ ಶುದ್ಧೀಕರಣವಾಗಬೇಕು. ಈ ಬಗ್ಗೆ ಸಂಬಂಧಿಸಿದವರು ಎಚ್ಚರ ವಹಿಸಬೇಕು. ಆದರೆ, ಕಾರ್ಖಾನೆಗಳ ಮಾಲೀಕರಾಗಲಿ, ಸರ್ಕಾರವಾಗಲಿ ಈ ಬಗ್ಗೆ ಕಾಳಜಿ ವಹಿಸುತ್ತಿಲ್ಲ ಎನ್ನುವುದು ಜನರ ಅಳಲು. ಜಿಲ್ಲಾಧಿಕಾರಿ, ತಹಶೀಲ್ದಾರ್ ಮತ್ತಿತರ ಅಧಿಕಾರಿಗಳು ನಮ್ಮ ಊರೊಳಗೆ ಬಂದಿಲ್ಲ. ನಮ್ಮ ಬೇಡಿಕೆ 'ಕೋಣನ ಮುಂದೆ ಕಿನ್ನುರಿ ಬಾರಿಸಿದಂತಾಗಿದೆ' ಎನ್ನುವುದು ಜನರ ನೊಂದ ನುಡಿ. ಅದಕ್ಕೆ ನಾವು ಹೇಳಿದ್ದು: ಮಾಲಿನ್ಯಕ್ಕೆ ಕಡಿವಾಣ ಹಾಕದಿದ್ದರೆ ಮುಂಬರುವ ಎಲ್ಲ ಚುನಾವಣೆಗಳನ್ನೂ ಜಿಲ್ಲೆಯ ಮತದಾರಪ್ರಭುಗಳು ಬಹಿಷ್ಕರಿಸಬೇಕು. ಅಳದ ಮಗುವಿಗೆ ತಾಯಿಯೂ ಹಾಲು ಕೊಡುವುದಿಲ್ಲ.



ಮಾಲಿನ್ಯದಿಂದಾಗಿ ಕೊಪ್ಪಳ ಜಿಲ್ಲೆಯ ಜನರು ಮುಖಕ್ಕೆ ಮಾಸ್ಕ್ ಧರಿಸಲೇಬೇಕಾಗಿದೆ. ನಾವು ಹಾಲವರ್ತಿ ಗ್ರಾಮದ ರಸ್ತೆಯಲ್ಲಿ ಜನರ ಜೊತೆ ಮಾತನಾಡುತ್ತ ನಿಂತಾಗ ಒಬ್ಬ ವ್ಯಕ್ತಿ ಬೈಕ್‌ನಲ್ಲಿ ಹಸಿ ಮೆಕ್ಕೆಜೋಳದ ಸೊಪ್ಪೆಯನ್ನು ತರುತ್ತಿದ್ದ. ಸೊಪ್ಪೆಗರಿಗಳ ಒಳ ಮತ್ತು ಹೊರಭಾಗದಲ್ಲಿ ಮಸಿ ಮೆತ್ತಿತ್ತು. ಅಂಥ ಸೊಪ್ಪೆಯನ್ನು ತಿಂದ ಜಾನುವಾರು ಮತ್ತು ಅವುಗಳ ಹಾಲು ಸೇವಿಸಿದವರ ಆರೋಗ್ಯ ಏನಾಗಬಹುದು? ಕೃಷಿ ರೋಗಪೀಡಿತವಾದರೆ ಮನುಷ್ಯ ಆರೋಗ್ಯವಾಗಿ ಬಾಳಲು ಸಾಧ್ಯವೆ?

ಕೊಪ್ಪಳದಲ್ಲಿ ಕಾರ್ಖಾನೆಯ ಮಾಲಿನ್ಯ ನಿವಾರಣೆ ಬಗ್ಗೆ ನೂರು ದಿನಗಳ ಕಾಲ ನಿರಂತರ ಹೋರಾಟ ನಡೆದಿದೆ. ಹೋರಾಟ ನೂರು ದಿನಗಳ ಕಾಲ ನಡೆಯಬೇಕಿತ್ತೆ? ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳ ಗಮನಕ್ಕೆ ಈ ಹೋರಾಟ ಬಂದಿಲ್ಲವೆ? ವಿಷಾದದ ಸಂಗತಿ ಎಂದರೆ, ಜಿಲ್ಲಾಧಿಕಾರಿಯೂ ಒಳಗೊಂಡಂತೆ ಯಾವ ಅಧಿಕಾರಿಯೂ ಮಾಲಿನ್ಯಬಾಧಿತ ಊರುಗಳಿಗೆ ಹೋಗಿ ಜನರ ಸಮಸ್ಯೆಗಳನ್ನು ಕೇಳದಿರುವುದು ನಾಚಿಕೆಗೇಡಿನ ಸಂಗತಿ. ನಾವು ಜಿಲ್ಲಾಧಿಕಾರಿ ಸುರೇಶ ಹಿಟ್ನಾಳ್ ಅವರಿಗೆ ಫೋನ್ ಮಾಡಿದಾಗ, 'ನನಗೂ ಅದರ ಅರಿವಾಗಿದೆ. ತಾವಿದ್ದಲ್ಲಿಗೆ ಬಂದು ಮಾತನಾಡುವೆ' ಎಂದರು.

ಈ ಹೋರಾಟ ಯಶಸ್ವಿಯಾಗಬೇಕೆಂದರೆ ಕೊಪ್ಪಳ ಜಿಲ್ಲೆಯ ಪ್ರತಿಯೊಬ್ಬರೂ ಹೋರಾಟದ ಬದ್ಧತೆ ಬೆಳೆಸಿಕೊಳ್ಳಬೇಕು. ಆಗಷ್ಟೇ ಪರಿಸರದ ಪಾವಿತ್ರ್ಯ ಉಳಿಸಿಕೊಳ್ಳಲು ಸಾಧ್ಯ. ಇಲ್ಲವಾದರೆ ದೇವಸ್ಥಾನಕ್ಕೆ ಹೋಗಿ ಗಂಟೆ ಹೊಡೆದು ಬಂದಂತಾಗುತ್ತದೆ. ಯಾವ ದೇವಸ್ಥಾನಕ್ಕೆ ಹೋಗಿ ಗಂಟೆ ಬಾರಿಸಿ ಬಂದರೂ ಪ್ರಯೋಜನವಿಲ್ಲ. ಪರಿವರ್ತನೆ ಆಗಬೇಕಿರುವುದು ಜನರ ನಡೆ, ನುಡಿಗಳಲ್ಲಿ.

ಈ ಭಾಗದ ಜನರ ಸುಖ, ದುಃಖ ತಮ್ಮದೂ ಹೌದು ಎಂದು ಕಾರ್ಖಾನೆಗಳ ಮಾಲೀಕರು, ಸರ್ಕಾರ ಪರಿಗಣಿಸಿದಾಗ ಮಾತ್ರ ಪರಿಹಾರ ಸಾಧ್ಯ. ಪಾಲನೆ, ಪೋಷಣೆ ಮಾಡಬೇಕಾದವರೇ ಬೇಜವಾಬ್ದಾರಿ ತೋರಿಸಿದರೆ 'ಬೇಲಿಯೇ ಎದ್ದು ಹೊಲ ಮೇಯ್ದಂತೆ'. ಈ ನಿಟ್ಟಿನಲ್ಲಿ ಸರ್ಕಾರ, ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಜಾಗೃತರಾಗಿ ಹೊಸ ಕಾರ್ಖಾನೆಗಳಿಗೆ ಅನುಮತಿಸಬಾರದು; ಇರುವ ಕಾರ್ಖಾನೆಗಳ ವಿಸ್ತರಣೆಗೆ ಕೊಟ್ಟಿರುವ ಅನುಮತಿ ರದ್ದುಪಡಿಸಬೇಕು. ಕಾರ್ಖಾನೆಗಳು ಮಾಲಿನ್ಯ ತಡೆಗಟ್ಟಲು ಬೇಕಾದ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಕೊಪ್ಪಳದ ಸುತ್ತ ಇರುವ ಕಾರ್ಖಾನೆಗಳು ಉಗುಳುವ ವಿಷಗಾಳಿಯನ್ನು ನಿಯಂತ್ರಿಸುವ ಕೆಲಸವನ್ನು ಪರಿಸರ ಇಲಾಖೆ ಏಕೆ ಮಾಡುತ್ತಿಲ್ಲ?

ಕೊಪ್ಪಳ ಜಿಲ್ಲೆ ಜಗತ್ತಿನ 250 ಕಲುಷಿತ ನಗರಗಳ ಪಟ್ಟಿಯಲ್ಲಿ ಸೇರಿದೆಯಂತೆ. ಬಲ್ಡೋಟಾ ಕಂಪನಿಯನ್ನು ವಿಸ್ತರಿಸಲು ಪರಿಸರ ಇಲಾಖೆ ಮತ್ತು ಸರ್ಕಾರ ಅನುಮತಿಸಿವೆ. 'ಭದ್ರಶ್ರೀ ಕಂಪನಿ'ಯ ವಿಸ್ತರಣೆಗೂ ಪರಿಸರ ಇಲಾಖೆ ಅನುಮತಿ ನೀಡಿದೆ. 'ಜಿಲ್ಲಾ ಬಚಾವೋ ಆಂದೋಲನ ಸಮಿತಿ ಮತ್ತು ಪರಿಸರ ಹಿತರಕ್ಷಣಾ ವೇದಿಕೆ' ಜಂಟಿಯಾಗಿ ಎಲ್ಲ ಕಾರ್ಖಾನೆಗಳ, ಪ್ರಮುಖವಾಗಿ ಬಲ್ಡೋಟಾ ಕಾರ್ಖಾನೆಯ ವಿಸ್ತರಣೆಯ ವಿರುದ್ಧ ಹೋರಾಟ ಪ್ರಾರಂಭಿಸಿ ಫೆ. 7ಕ್ಕೆ ನೂರು ದಿನಗಳಾಗಿವೆ. 2025ರ ಫೆ. 24ರಂದು ಕೊಪ್ಪಳದ ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ ನೇತೃತ್ವದಲ್ಲಿ ಬಹಿರಂಗ ಸಭೆ ನಡೆಸಿದ್ದರು. ಆಗ ಸ್ವಾಮೀಜಿಯವರ ಅಭಿಲಾಷೆಯಂತೆ 'ಬಲ್ಡೋಟಾ' ವಿಸ್ತರಣೆಗೆ ತಡೆ ಆದೇಶ ತರುವುದಾಗಿ ಜನಪ್ರತಿನಿಧಿಗಳು ಒಪ್ಪಿದ್ದರಂತೆ. ಅದರಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಕಂಡು ಅನಾಹುತದ ಮಾಹಿತಿ ನೀಡಿದಾಗ ಅವರು ತಕ್ಷಣ ಬಲ್ಡೋಟಾ ವಿಸ್ತರಣಾ ಚಟುವಟಿಕೆಗಳನ್ನು ನಿಲ್ಲಿಸಲು ಮೌಖಿಕವಾಗಿ ಆದೇಶ ನೀಡಿದ್ದರಂತೆ. ಆದರೆ, ಇದುವರೆಗೂ ಕಾನೂನಾತ್ಮಕ ಲಿಖಿತ ಆದೇಶ ಆಗಿಲ್ಲ.

ನಾವು ನೂರನೆಯ ದಿನದ ಹೋರಾಟದಲ್ಲಿ ಭಾಗವಹಿಸಿದ್ದೆವು. ನಮ್ಮೊಂದಿಗೆ ಸಾವಿರಾರು ಜನರಲ್ಲದೆ, ರೈತರು, ಮಹಿಳೆಯರು, ಮಕ್ಕಳು ಸಹ ಭಾಗವಹಿಸಿ ತಮ್ಮ ಅಳಲನ್ನು ತೋಡಿಕೊಂಡರು. ಇದೇ 24ರಂದು ಬೃಹತ್ ಪಾದಯಾತ್ರೆ ಮತ್ತು ನಗರ ಬಂದ್ ಮಾಡುವ ನಿರ್ಣಯ ತೆಗೆದುಕೊಂಡರು.

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಬೇಡಿಕೆಗೆ ಮಾನ್ಯತೆ ಇಲ್ಲದಿದ್ದರೆ ಅದು ಸರ್ವಾಧಿಕಾರವಾಗುತ್ತದೆ. ಆಗ ನಮ್ಮ ಸಂವಿಧಾನವೂ ಮೌಲ್ಯ ಕಳೆದುಕೊಳ್ಳುವಂತೆ ಆಗುತ್ತದೆ. ಇದಾಗದಂತೆ ಎಚ್ಚರಿಕೆ ವಹಿಸಬೇಕು.

ಈ ಲೇಖನದ ಪೂರ್ಣಪಠ್ಯ prajavani.netನಲ್ಲಿ ಲಭ್ಯ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಎಐ ಚಿತ್ರ: ಹಳೆಮನಿ

ಜಾಗತಿಕವಾಗಿ ಇನ್ನೂ ತಯಾರಾಗಿಲ್ಲ ಪರಿಣಾಮಕಾರಿ ಔಷಧ, ಭಾರತದಲ್ಲಿ ಲಸಿಕೆ ಅಭಿವೃದ್ಧಿಗೆ ಆಮೆ ವೇಗ

ಲಸಿಕೆಯ ಅಂಕೆಗೆ ಸಿಗದ ಹಕ್ಕಿಜ್ವರ

• ಅಮೃತ್ ಕಿರಣ್ ಬಿ.ಎಂ

ಅಮೆರಿಕ, ಯುರೋಪಿನ ವಿವಿಧ ದೇಶಗಳಲ್ಲಿ ಕಳೆದ ವರ್ಷ ಸಾಕಷ್ಟು ಆತಂಕ ಸೃಷ್ಟಿಸಿದ ಹಕ್ಕಿಜ್ವರದ (ಏವಿಯನ್ ಇನ್‌ಫ್ಲುಯೆನ್ಜಾ) ಪ್ರಭಾವ ಇನ್ನೇನು ಕಡಿಮೆಯಾಯಿತು ಎನ್ನುತ್ತಿರುವಾಗಲೇ ಅದು ಮಗ್ಗುಲು ಬದಲಿಸಿದೆ. ಈ ಬಾರಿ ಏಷ್ಯಾದಲ್ಲೂ ತನ್ನ ಜಾಲ ವಿಸ್ತರಿಸಿಕೊಂಡಿದೆ. ನಮ್ಮ ದೇಶದಲ್ಲಿ ಅದರಲ್ಲೂ ದಕ್ಷಿಣ ಭಾರತದಲ್ಲಿ ವ್ಯಾಪಕವಾಗುತ್ತಿರುವ ಲಕ್ಷಣಗಳು ಕಾಣಿಸುತ್ತಿವೆ.

ತಮಿಳುನಾಡಿನ ಚೆನ್ನೈ ನಗರ ಸೇರಿದಂತೆ ಅಡ್ಯಾರ್, ವೆಲ್ಲೋರ್, ತಿರುವಣ್ಣಾಮಲೈ ಜಿಲ್ಲೆಗಳಲ್ಲಿ ಕೆಲವು ದಿನಗಳ ಹಿಂದೆ ಬೃಹತ್ ಸಂಖ್ಯೆಯ ಕಾಗೆಗಳು ಹಕ್ಕಿಜ್ವರ ಸೋಂಕಿನಿಂದ ಮೃತಪಟ್ಟವು. ಮೃತಪಟ್ಟ ಕಾಗೆಗಳಲ್ಲಿ ಎಚ್5ಎನ್1 ಸೋಂಕಿನ ಇರುವಿಕೆಯನ್ನು ಭೋಪಾಲ್‌ನ ಐಸಿಎಆರ್ ಪ್ರಯೋಗಾಲಯವು ಖಚಿತಪಡಿಸಿತು. ಆಂಧ್ರಪ್ರದೇಶದ ಅನ್ನಮಯ್ಯ ಮತ್ತು ಚಿತ್ತೂರು ಜಿಲ್ಲೆಗಳಲ್ಲೂ ಸೋಂಕು ದೃಢಪಟ್ಟಿದ್ದು, ಸರ್ಕಾರ ಹೈ ಅಲರ್ಟ್ ಘೋಷಿಸಿದೆ.

ಕೇರಳದಲ್ಲೂ ಕಳೆದ ವಾರಾಂತ್ಯದಲ್ಲೇ ಇದರ ಹಾವಳಿ ಶುರುವಾಗಿತ್ತು. ಕೊಟ್ಟಾಯಂ, ಕೊಲ್ಲಂ ಜಿಲ್ಲೆಗಳಲ್ಲಿ ಕೋಳಿಗಳಲ್ಲಿ ಸೋಂಕು ಖಚಿತಪಡುತ್ತಿದ್ದಂತೆಯೇ ಅವುಗಳ ಸಾಗಾಟವನ್ನು ನಿರ್ಬಂಧಿಸಲಾಯಿತು. ಸೋಂಕುಪೀಡಿತ ಹಕ್ಕಿಗಳನ್ನು ಕೊಲ್ಲಲಾಯಿತು. ಎಲ್ಲ ಹಕ್ಕಿಗಳ ಮೇಲೆ ನಿಗಾ ಇಡುವಂತೆ ಪುದುಚೇರಿ ಸರ್ಕಾರ ಆದೇಶ ಹೊರಡಿಸಿದೆ. ಬಿಹಾರದ ದರ್ಬಾಂಗ್ ಜಿಲ್ಲೆಯಲ್ಲಿ ವೈರಸ್ ಕಂಡುಬಂದಿದ್ದು, ತೀವ್ರ ನಿಗಾಕ್ಕೆ ಸೂಚಿಸಲಾಗಿದೆ. ಕೇಂದ್ರದ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವಾಲಯವು ರಾಷ್ಟ್ರೀಯ ಕ್ರಿಯಾ ಯೋಜನೆ ನಿಯಮಗಳನ್ನು ಜಾರಿಗೆ ತರುವಂತೆ ಸೋಂಕು ಬಾಧಿತ ರಾಜ್ಯಗಳಿಗೆ ನಿರ್ದೇಶನ ನೀಡಿದೆ.

485 ಪ್ರಭೇದದ ಹಕ್ಕಿಗಳಲ್ಲಿ ಸೋಂಕು: ಹಕ್ಕಿಜ್ವರದ ವ್ಯಾಪ್ತಿ ಅಂದುಕೊಂಡದ್ದಕ್ಕಿಂತ ತುಸು ಹೆಚ್ಚೇ ಇದೆ. ಕೋಳಿಗಳನ್ನೂ ಒಳಗೊಂಡಂತೆ ಅಂದಾಜು 485 ಪ್ರಭೇದದ ಹಕ್ಕಿಗಳಲ್ಲಿ ಎಚ್5ಎನ್1 ವೈರಾಣುವಿನ ಇರುವಿಕೆಯನ್ನು ಗುರುತಿಸಲಾಗಿದೆ. ಹಕ್ಕಿಗಳಷ್ಟೇ ಅಲ್ಲದೇ, ಸಸ್ತನಿಗಳನ್ನೂ ಇದು ಬಿಟ್ಟಿಲ್ಲ. ಸೀಲ್, ಸಮುದ್ರದ ನೀರುನಾಯಿ, ಡಾಲ್ಫಿನ್, ನರಿ, ಹಸು, ಕುರಿಗಳಲ್ಲೂ ಕಾಣಿಸಿಕೊಂಡಿದ್ದು, ಸರ್ವವ್ಯಾಪಿ ಎನಿಸಿದೆ. ಇಲ್ಲಿಯವರೆಗೆ 15 ಕೋಟಿ ಹಕ್ಕಿಗಳ ದೇಹವನ್ನು ವೈರಾಣು ಹೊಕ್ಕಿದೆ ಎಂದು ಅಂದಾಜಿಸಲಾಗಿದೆ. ಜಾನುವಾರುಗಳ ಜತೆ ನಿಕಟ ಸಂಪರ್ಕದಲ್ಲಿ ಇರುವ ವ್ಯಕ್ತಿಗಳಿಗೂ ಈ ಸೋಂಕು ಹರಡಬಹುದು ಎಂಬುದು ತಜ್ಞರ ಅಂದಾಜು.

ವೈರಾಣು ಪ್ರಾಣಿ-ಪಕ್ಷಿಗಳಿಂದ ಮನುಷ್ಯರಿಗೆ ಹರಡುವ ಸಾಧ್ಯತೆ ಇದೆ. ಆದರೆ ಅದು ಅಪಾಯದ ಮಟ್ಟದಲ್ಲಿ ಇಲ್ಲ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಸ್ಪಷ್ಟಪಡಿಸಿದೆ. ಒಂದು ವೇಳೆ ವೈರಾಣು ರೂಪಾಂತರ ಹೊಂದಿ, ಮನುಷ್ಯನಿಂದ-ಮನುಷ್ಯನಿಗೆ ಹರಡಲು ಶುರುವಾದರೆ, ಕೋವಿಡ್ ರೀತಿಯ ಮತ್ತೊಂದು ಸಾಂಕ್ರಾಮಿಕ ಎದುರಿಸಲು ಜಗತ್ತು ಸಿದ್ಧವಾಗಬೇಕಿದೆ.

ಪ್ರಬಲ ಲಸಿಕೆಗಳ ಸಂಶೋಧನೆ ಪ್ರಕ್ರಿಯೆ ತುಂಬಾ ನಿಧಾನಗತಿಯಲ್ಲಿರುವ ಕಾರಣ, ವೈರಸ್ ಹರಡುವಿಕೆ ತಡೆಯಲು, ಸೋಂಕಿತ ಹಕ್ಕಿಗಳನ್ನು ಕೊಲ್ಲುವುದೊಂದೇ ಸದ್ಯಕ್ಕಿರುವ ಮಾರ್ಗ. ಈಗಾಗಲೇ ಅಭಿವೃದ್ಧಿಪಡಿಸಿರುವ ಕೆಲ ಲಸಿಕೆಗಳು ಅಷ್ಟು ಪರಿಣಾಮಕಾರಿ ಆಗಿಲ್ಲ. ಇದು 'ಸೀಸನಲ್ ಫ್ಲೂ' ರೀತಿ ಆಗಾಗ್ಗೆ ಕಾಣಿಸಿಕೊಂಡು ಮಾಯವಾಗುವ ಕಾರಣ, ದೀರ್ಘಕಾಲ ಬಾಧಿಸದು ಎಂಬ ಕಾರಣಕ್ಕೆ ಲಸಿಕೆ ತಯಾರಿಕೆಯ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ ಎಂಬ ಅಭಿಪ್ರಾಯ ಇದೆ.

ವೈರಸ್‌ಗಳಲ್ಲಿ 'ರೂಪಾಂತರ' (ಮ್ಯುಟೇಷನ್) ಎಂಬುದು ಸಹಜ ಪ್ರಕ್ರಿಯೆ ಆಗಿದ್ದರೂ, ಹಕ್ಕಿಜ್ವರಕ್ಕೆ ಕಾರಣವಾಗಿರುವ ಎಚ್5ಎನ್1 ವೈರಾಣು ಪ್ರತಿ ಬಾರಿಯೂ ಹೊಸ ಅತಿಥೇಯ ಜೀವಿಯ (ಹೋಸ್ಟ್) ದೇಹವನ್ನು ಹೊಕ್ಕು ದಿಗಿಲು ಮೂಡಿಸುತ್ತಿದೆ. ಈಗ ಹೆಚ್ಚು ಬಾಧಿಸುತ್ತಿರುವ ಎಚ್5ಎನ್1 ವೈರಾಣು, ಈಗಾಗಲೇ ಅಭಿವೃದ್ಧಿಪಡಿಸಿರುವ ಲಸಿಕೆಯ ಎಚ್‌ಎನ್ ವೈರಾಣು ತಳಿಗಳಿಗಿಂತ ಭಿನ್ನವಾಗಿದ್ದು, ಲಸಿಕೆಯ ಲಗಾಮಿಗೆ ಸಿಗುತ್ತಿಲ್ಲ.



ವೈರಾಣು ಸಂರಚನೆ: ಸಾಮಾನ್ಯ ಜ್ವರ, ನೆಗಡಿಗೆ (ಫ್ಲೂ) ಇನ್‌ಫ್ಲುಯೆನ್ಜಾ 'ಎ' ವೈರಸ್ ಕಾರಣ. ಈ ವೈರಸ್‌ನ ಮೇಲ್ಭಾಗದಲ್ಲಿ ಎರಡು ರೀತಿಯ ಪ್ರೊಟೀನ್‌ಗಳು (ಹೆಮಗ್ಲುಟೆನಿನ್-H ಮತ್ತು ನ್ಯೂರಾಮಿನಿಡೇಸ್ -N) ಅಂಟಿಕೊಂಡಿವೆ. 18 ರೀತಿಯ ಹೆಮಗ್ಲುಟೆನಿನ್ (ಎಚ್1ನಿಂದ ಎಚ್18ವರೆಗೆ) ಹಾಗೂ 11 ವಿಧದ ನ್ಯೂರಾಮಿನಿಡೇಸ್‌ನ (ಎನ್1ನಿಂದ ಎನ್11ವರೆಗೆ) ಉಪತಳಿಗಳನ್ನು ಗುರುತಿಸಲಾಗಿದೆ. ಈ ಪ್ರೊಟೀನ್‌ಗಳ ಸಂರಚನೆಯ ಪೈಕಿ, ಎಚ್3ಎನ್1 ಹಾಗೂ ಎಚ್5ಎನ್1 ಹೆಚ್ಚು ಅಪಾಯಕಾರಿ ಎನಿಸಿವೆ.

ಎಂಆರ್‌ಎನ್‌ಎ ಲಸಿಕೆಗಳಿಗೆ ಬೇಡಿಕೆ: ಕೋವಿಡ್ ಅವಧಿಯಲ್ಲಿ ಸಾಕಷ್ಟು ಪ್ರಚಲಿತಕ್ಕೆ ಬಂದು, ಅಪಾರ ವಿಶ್ವಾಸಾರ್ಹತೆ ಗಳಿಸಿರುವ 'ಎಂಆರ್‌ಎನ್‌ಎ' (mRNA) ಕಾರ್ಯ ವಿಧಾನದ ಲಸಿಕೆಗಳಿಗೆ ಈಗ ಹೆಚ್ಚು ಒತ್ತು ನೀಡಲಾಗುತ್ತಿದೆ. ಇವುಗಳನ್ನು ಕಡಿಮೆ ಅವಧಿಯಲ್ಲಿ ಅಭಿವೃದ್ಧಿಪಡಿಸಬಹುದು ಹಾಗೂ ವೈರಾಣು ಮತ್ತೆ ರೂಪಾಂತರಕ್ಕೆ ಒಳಗಾದಲ್ಲಿ, ಹೊಸ ಉಪತಳಿಗಳನ್ನೂ ಅದು ನಿಗ್ರಹಿಸಬಲ್ಲದು ಎಂಬುದು ಅದರ ಜನಪ್ರಿಯತೆಗೆ ಕಾರಣ.

ಎಂಆರ್‌ಎನ್‌ಎ ಕಾರ್ಯವಿಧಾನದ ಲಸಿಕೆಗಳ ಕ್ಲಿನಿಕಲ್ ಹಂತದ ಪ್ರಯೋಗಗಳು ಈಗಾಗಲೇ ಚಾಲ್ತಿಯಲ್ಲಿವೆ. 'ಆರ್ಕ್ಟುರಸ್ ಥೆರಪ್ಯೂಟಿಕ್ಸ್' ಸಂಸ್ಥೆಯು 2024ರ ಡಿಸೆಂಬರ್‌ನಲ್ಲಿ ಎಂಆರ್‌ಎನ್‌ಎ ಲಸಿಕೆಯ ಮೊದಲ ಕ್ಲಿನಿಕಲ್ ಪ್ರಯೋಗವನ್ನು ಕೈಗೊಂಡಿದ್ದು, ಲಸಿಕೆಯ ಸುರಕ್ಷತೆ ಮತ್ತು ರೋಗನಿರೋಧಕ ಶಕ್ತಿಯ ಪ್ರತಿಕ್ರಿಯೆಯನ್ನು ವಿಶ್ಲೇಷಣೆ ಮಾಡುತ್ತಿದೆ. ಮೊಡೆರ್ನಾ ಸಂಸ್ಥೆಯೂ ಎಂಆರ್‌ಎನ್‌ಎ ಮಾದರಿಯ ಲಸಿಕೆ ಅಭಿವೃದ್ಧಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿವೆ.

ಆಧಾರ: ಅಮೆರಿಕದ ರೋಗ ನಿಯಂತ್ರಣ ಮತ್ತು ಮುನ್ನೆಚ್ಚರಿಕೆ ಕೇಂದ್ರ (ಸಿಡಿಸಿ), ಡಬ್ಲ್ಯುಎಚ್‌ಒ, ಸೈನ್ಸ್ ಡೈರೆಕ್ಟ್, ಅಮೆರಿಕನ್ ಸೊಸೈಟಿ ಫಾರ್ ಮೈಕ್ರೊಬಯಾಲಜಿ ವೆಬ್‌ಸೈಟ್, ಐಸಿಎಂಆರ್ ಸುತ್ತೋಲೆಗಳು

ಹೇಗೆ ನಡೆಯುತ್ತಿದೆ ಲಸಿಕೆ ಅಭಿವೃದ್ಧಿ?

ಇದೇ ಜನವರಿಯಲ್ಲಿ ರಷ್ಯಾ ಸೇಂಟ್ ಪೀಟರ್ಸ್‌ಬರ್ಗ್ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿದ 'ರಿವರ್ಸ್ ಜನೆಟಿಕ್' ತತ್ವದ ಆಧಾರದ ಲಸಿಕೆಯು ಈಗಿನ ರೂಪಾಂತರಿ ವಿರುದ್ಧ ಹೋರಾಡಲು ಸಮರ್ಥವಾಗಿದೆ ಎನ್ನಲಾಗಿದೆ. ಅರ್ಜೆಂಟೀನಾದ ಸಂಗೆಲಿಯಾ ಬಯೋಟೆಕ್, ಎಂಆರ್‌ಎನ್‌ಎ ಸ್ವರೂಪದ ಲಸಿಕೆ ಅಭಿವೃದ್ಧಿಯಲ್ಲಿ ಗಂಭೀರವಾಗಿ ತೊಡಗಿಸಿಕೊಂಡಿದೆ. ಈ ತಂತ್ರಜ್ಞಾನವನ್ನು ಬಡ-ಮಧ್ಯಮ ಆದಾಯದ ದೇಶಗಳೊಂದಿಗೆ ಹಂಚಿಕೊಳ್ಳಲು ಸಿದ್ಧವಾಗಿದೆ.

ಅಮೆರಿಕದಲ್ಲಿ ಸಾರ್ವಜನಿಕರಿಗೆ ಯಾವುದೇ ಎಚ್5ಎನ್1 ಲಸಿಕೆ ಲಭ್ಯವಿಲ್ಲ. ಹಳೆಯ ರೂಪಾಂತರಿ ವಿರುದ್ಧ ಹೋರಾಡಬಲ್ಲ ಸಾಮರ್ಥ್ಯದ ಲಸಿಕೆಗಳನ್ನು ಶೇಖರಿಸಿ ಇಟ್ಟುಕೊಂಡಿದ್ದು, ತುರ್ತು ಸಂದರ್ಭದಲ್ಲಿ ಬಳಸಲು ನಿರ್ಧರಿಸಿದೆ. ಸನೋಫಿ ಪಾಶ್ಚರ್ ಮತ್ತು ಜಿಎಸ್‌ಕೆ ಕಂಪನಿಗಳಿಗೆ ಲಸಿಕೆ ಉತ್ಪಾದಿಸಲು ಪರವಾನಗಿ ನೀಡಿದೆ.

ಮೊಡರ್ನಾ ಮತ್ತು ಆರ್ಕ್ಟುರಸ್ ಥೆರಪ್ಯೂಟಿಕ್ಸ್ ಸಂಸ್ಥೆಗಳು ಹೊಸ ತಲೆಮಾರಿನ ಎಂಆರ್‌ಎನ್‌ಎ ಲಸಿಕೆ ಕ್ಯಾಂಡಿಟೇಟ್‌ಗಳನ್ನು ಅಭಿವೃದ್ಧಿಪಡಿಸಲು ಸರ್ಕಾರದಿಂದ ಪರವಾನಗಿ ಪಡೆದಿವೆ. ವಾಷಿಂಗ್ಟನ್ ವಿಶ್ವವಿದ್ಯಾಲಯವು ಮೂಗಿನ ಮೂಲಕ ಹಾಕುವ ಲಸಿಕೆ ಅಭಿವೃದ್ಧಿಪಡಿಸಿದ್ದು, ಪರಿಣಾಮಕಾರಿಯಾಗಿದೆ ಎಂದು ಹೇಳಿಕೊಂಡಿದೆ.

2025ರಲ್ಲಿ ಜಾನುವಾರು ಸೋಂಕು ತಡೆಯಬಲ್ಲ ಏಳು ಲಸಿಕೆ ಕ್ಯಾಂಡಿಡೇಟ್‌ಗಳ ಪ್ರಾಯೋಗಿಕ ಪರೀಕ್ಷೆಗೆ ಅಮೆರಿಕ ಅನುಮತಿ ನೀಡಿತು. ಈ ಪೈಕಿ ಮೆಡ್ಜೀನ್‌ನ ಎಚ್5ಎನ್1 ಲಸಿಕೆಯು ಅಂತಿಮ ಹಂತ ಪ್ರವೇಶಿಸಿತು. ಈ ನಿಟ್ಟಿನಲ್ಲಿ ಉಳಿದ ಕಡೆಗಳಲ್ಲಿ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲ.

ಭಾರತದಲ್ಲಿ ನಿಧಾನ


ಭಾರತದಲ್ಲಿ ಏವಿಯನ್ ಇನ್‌ಫ್ಲುಯೆನ್ಜಾ ವಿರುದ್ಧ ಹೋರಾಡಬಲ್ಲ ಲಸಿಕೆ ಅಭಿವೃದ್ಧಿಗೆ ಪುಣೆಯ ರಾಷ್ಟ್ರೀಯ ವೈರಾಣು ಸಂಸ್ಥೆಯು (ಎನ್‌ಐವಿ) ಜೊತೆ ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) 2025ರಲ್ಲಿ ಒಡಂಬಡಿಕೆ ಮಾಡಿಕೊಂಡಿದೆ.

ಜಂಟಿಯಾಗಿ ಸಂಶೋಧನೆ ಮತ್ತು ಅಭಿವೃದ್ಧಿ ಕೈಗೊಳ್ಳಲು ಆಸಕ್ತಿ ವ್ಯಕ್ತಪಡಿಸುವಂತೆ ಔಷಧ ಸಂಸ್ಥೆಗಳು, ತಯಾರಕರಿಗೆ ಕಳೆದ ವರ್ಷದ ಫೆಬ್ರುವರಿಯಲ್ಲಿ ಐಸಿಎಂಆರ್ ಆಹ್ವಾನ ನೀಡಿತ್ತು. ಸಾಂಪ್ರದಾಯಿಕ ಅಥವಾ ಎಂಆರ್‌ಎನ್‌ಎ ಆಧಾರಿತ ಲಸಿಕೆ ಅಭಿವೃದ್ಧಿಗೆ ಎನ್‌ಐವಿಯಲ್ಲಿ ಸಿದ್ಧತೆಗಳು ನಡೆದಿವೆ. 2026ರ ಅಂತ್ಯಕ್ಕೆ ಲಸಿಕೆಯ ಕ್ಯಾಂಡಿಡೇಟ್ ಸಿದ್ಧವಾಗುವ ಸಾಧ್ಯತೆಯಿದ್ದು, ಅನಂತರ ಲಸಿಕೆಯನ್ನು ಹಲವು ಹಂತಗಳಲ್ಲಿ ಪರೀಕ್ಷೆಗೆ ಒಳಪಡಿಸಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ಸೀರಂ ಇನ್‌ಸ್ಟಿಟ್ಯೂಟ್, ಜೆನ್ನೋವಾ ಬಯೋಫಾರ್ಮಾ ಕಂಪನಿ, ಐಸಿಎಂಆರ್-ಎನ್‌ಐವಿ ಜಂಟಿಯಾಗಿ ವಿವಿಧ ಮಾದರಿಯ ಲಸಿಕೆ ಅಭಿವೃದ್ಧಿಯಲ್ಲಿ ತೊಡಗಿಸಿಕೊಂಡಿವೆ.

ಭೋಪಾಲ್‌ನ ಐಸಿಎಆರ್ ಪ್ರಯೋಗಾಲಯ ಅಭಿವೃದ್ಧಿಪಡಿಸಿದ ಕಡಿಮೆ ರೋಗಕಾರಕ ಹಕ್ಕಿಜ್ವರ ಎಚ್9ಎನ್2 ತಡೆ ಲಸಿಕೆಯು ಕಳೆದ ವರ್ಷ ಮಾರುಕಟ್ಟೆಯಲ್ಲಿತ್ತು. ಆದರೆ ಅದರ ಬಳಕೆ ಸೀಮಿತವಾಗಿದ್ದು, ಆರು ತಿಂಗಳು ಮಾತ್ರ ರಕ್ಷಣೆ ನೀಡಬಲ್ಲದು ಎನ್ನಲಾಗಿದೆ. ಮೇಲಾಗಿ ಈಗಿನ ರೂಪಾಂತರಿ ವೈರಾಣುವನ್ನು ಎದುರಿಸುವ ಬಗ್ಗೆ ಇನ್ನೂ ಖಚಿತತೆ ಇಲ್ಲ.

ಏನಿದು ಎಂಆರ್‌ಎನ್‌ಎ, ಕೆಲಸ ಹೇಗೆ?



ಲಸಿಕೆ ತಯಾರಿಕೆಗೂ ಮುನ್ನ, ವೈರಸ್‌ಗಳು ಹೊಂದಿರುವ ಪ್ರೊಟೀನ್ ಸಂಯೋಜನೆಯನ್ನು ತಿಳಿಯುವುದು ಅತಿಮುಖ್ಯ. ಈ ಪ್ರಕ್ರಿಯೆಯಲ್ಲಿ ಎಂಆರ್‌ಎನ್‌ಎ ಒಂದು ಟೆಂಪ್ಲೇಟ್ ಅಥವಾ ವಾಹಕದ ರೀತಿಯಲ್ಲಿ ಕೆಲಸ ಮಾಡುತ್ತದೆ. ಡಿಎನ್‌ಎಯಿಂದ ರೈಬೋಸೋಮ್‌ಗಳಿಗೆ ಆನುವಂಶಿಕ ಮಾಹಿತಿಯನ್ನು ರವಾನಿಸುವ ವಾಹಕವಾಗಿ ಮೆಸೆಂಜರ್ ರೈಬೋನ್ಯೂಕ್ಲಿಯಿಕ್ ಆಮ್ಲ (mRNA) ಕಾರ್ಯ ನಿರ್ವಹಿಸುತ್ತದೆ. ನಿರ್ದಿಷ್ಟ ಪ್ರೊಟೀನ್‌ವೊಂದನ್ನು ಉತ್ಪಾದನೆ ಮಾಡುವುದಕ್ಕೆ ರೈಬೊಸೋಮ್‌ಗಳಿಗೆ ಸೂಚನೆಗಳನ್ನು ರವಾನಿಸುವ ಇದು, ನಂತರದಲ್ಲಿ ತಾನೇ ಆ್ಯಂಟಿಜನ್ (ಪ್ರತಿಕಾಯ) ಆಗಿ ಕೆಲಸ ಮಾಡಲು ಶುರುಮಾಡಿ, ದೇಹದ ಪ್ರತಿರಕ್ಷಣಾ ವ್ಯವಸ್ಥೆಯನ್ನು (ಇಮ್ಯೂನ್ ಸಿಸ್ಟಂ) ಪ್ರಚೋದಿಸುತ್ತದೆ.

ಪ್ರಕ್ರಿಯೆ: ವೈರಾಣುವಿನ ಪ್ರೊಟೀನ್ ಸಂಕೇತಗಳನ್ನು ಎಂಆರ್‌ಎನ್‌ಎ ಮೂಲಕ ಎಂಆರ್‌ಎನ್‌ಎ ಲಸಿಕೆಗಳು ದೇಹಕ್ಕೆ ಪರಿಚಯಿಸುತ್ತವೆ. ತಕ್ಷಣವೇ, ದೇಹದ ಜೀವಕೋಶಗಳು ಎಂಆರ್‌ಎನ್‌ಎ ಸಂಕೇತಗಳನ್ನು ಬಳಸಿಕೊಂಡು ವೈರಾಣುವಿನ ಪ್ರೊಟೀನ್‌ಗಳನ್ನೇ ಹೆಚ್ಚೆಚ್ಚು ಉತ್ಪಾದಿಸಲು ಆರಂಭಿಸುತ್ತವೆ. ಆಗ ಪ್ರತಿರಕ್ಷಣಾ ವ್ಯವಸ್ಥೆಯು ಜಾಗೃತಗೊಂಡು, ಇವು ಹೊರಗಿನ ಕಣಗಳು ಎಂಬುದನ್ನು ಗುರುತಿಸಲು ಶುರು ಮಾಡುತ್ತದೆ. ತಕ್ಷಣವೇ, ಶತ್ರುಗಳ ವಿರುದ್ಧ ಹೋರಾಡಬಲ್ಲ ಪ್ರತಿಕಾಯಗಳನ್ನು ದೇಹ ಉತ್ಪಾದಿಸಲು ತೊಡಗುತ್ತದೆ. ದೇಹವನ್ನು ಹೊಕ್ಕಿರುವ ವೈರಲ್ ಪ್ರೊಟೀನ್‌ಗಳನ್ನು ತಟಸ್ಥಗೊಳಿಸುತ್ತದೆ. ಈ ತಂತ್ರಗಾರಿಕೆಯ ಕಾರಣಕ್ಕೆ ಎಂಆರ್‌ಎನ್‌ಎ ಕಾರ್ಯ ವಿಧಾನದ ಲಸಿಕೆಗಳು ಜನಪ್ರಿಯತೆ ಗಳಿಸಿವೆ.

ರಾಷ್ಟ್ರೀಯ

'ಘೋಸ್‌ಖೋರ್ ಪಂಡತ್' ಶೀರ್ಷಿಕೆ ಬದಲು: ನೆಟ್‌ಫ್ಲಿಕ್ಸ್



ನವದೆಹಲಿ (ಪಿಟಿಐ): ನಟ ಮನೋಜ್ ಬಾಜಪೇಯಿ ಅಭಿನಯದ 'ಘೂಸ್‌ಖೋರ್ ಪಂಡತ್' ಸಿನಿಮಾದ ಹೆಸರನ್ನು ಬದಲಿಸಲಾಗುವುದು ಎಂದು ಒಟಿಟಿ ವೇದಿಕೆ ನೆಟ್‌ಫ್ಲಿಕ್ಸ್ ಇಂಡಿಯಾ, ದೆಹಲಿ ಹೈಕೋರ್ಟ್‌ಗೆ ಮಂಗಳವಾರ ತಿಳಿಸಿದೆ.

ಸಿನಿಮಾ ಶೀರ್ಷಿಕೆಯು ಆಕ್ಷೇಪಾರ್ಹ ಮತ್ತು ಮಾನಹಾನಿಕರವಾಗಿದ್ದು, ಅದರ ಬಿಡುಗಡೆಗೆ ತಡೆ ನೀಡಬೇಕೆಂದು ಕೋರಿ ಸಲ್ಲಿಕೆಯಾಗಿರುವ ಅರ್ಜಿಗೆ ಸಂಬಂಧಿಸಿದಂತೆ ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ಅವರ ಪೀಠಕ್ಕೆ ನೆಟ್‌ಫ್ಲಿಕ್ಸ್ ಈ ಅರಿಕೆ ಮಾಡಿಕೊಂಡಿದೆ.

ಸಿನಿಮಾ ಈಗಾಗಲೇ ಸಂಕಲನದ ಹಂತದಲ್ಲಿದ್ದು, ಇದೊಂದು ಕಾಲ್ಪನಿಕ ಪೊಲೀಸ್ ಕಥಾಹಂದರವನ್ನು ಹೊಂದಿದೆ. ಸಿನಿಮಾದ ಶೀರ್ಷಿಕೆಯು ಅನಿರೀಕ್ಷಿತ ಅಡಚಣೆಗೆ ಕಾರಣ ವಾಯಿತಾದರೂ ಕಥಾವಸ್ತು ಅಂತಹ ಅಂಶಗಳನ್ನು ಒಳಗೊಂಡಿಲ್ಲ. ಆದರೂ, ಸಿನಿಮಾ ಪ್ರಚಾರದ ಎಲ್ಲ ವಸ್ತುಗಳು, ವಿಷಯಗಳನ್ನೂ ತೆಗೆದುಹಾಕಲಾಗುವುದು ಎಂದು ನೆಟ್‌ಫ್ಲಿಕ್ಸ್ ಪರ ವಕೀಲರು ನ್ಯಾಯಪೀಠಕ್ಕೆ ತಿಳಿಸಿದ್ದಾರೆ.

ನೆಟ್‌ಫ್ಲಿಕ್ಸ್‌ನ ಈ ನಿರ್ಧಾರವನ್ನು ಪುರಸ್ಕರಿಸಿದ ನ್ಯಾಯಪೀಠ, 'ಚಿತ್ರದ ಶೀರ್ಷಿಕೆ ವಿಚಾರವಾಗಿ ಉದ್ಭವಿಸಿದ ಕಳವಳಗಳನ್ನು ಅರಿತು, ಚಿತ್ರದ ನಿರೂಪಣೆ ಮತ್ತು ಉದ್ದೇಶಕ್ಕೆ ಪೂರಕವಾಗುವಂತಹ ಪರ್ಯಾಯ ಶೀರ್ಷಿಕೆಯನ್ನು ನೀಡುವ ಬಗ್ಗೆ ನಿರ್ಮಾಪಕರು ಪ್ರಜ್ಞಾಪೂರ್ವಕ ನಿರ್ಧಾರವನ್ನು ತೆಗದುಕೊಂಡಿದ್ದಾರೆ. ಹೀಗಾಗಿ ಇದರಲ್ಲಿ ಮತ್ತೇನೂ ತೀರ್ಮಾನಿಸುವ ಅಗತ್ಯವಿಲ್ಲ' ಎಂದು ತಿಳಿಸಿ, ವಿಚಾರಣೆ ಮುಕ್ತಾಯಗೊಳಿಸಿದೆ.

ನೀರಜ್‌ಪಾಂಡೆ ನಿರ್ದೇಶನದ ಈ ಸಿನಿಮಾದ ಶೀರ್ಷಿಕೆಯ ಬಗ್ಗೆ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕ ಆಕ್ಷೇಪ ವ್ಯಕ್ತವಾಗಿತ್ತು.

'ಘೂಸ್‌ಖೋರ್' ಎಂಬುದು ಲಂಚಕೋರ ಅಥವಾ ಭ್ರಷ್ಟ ಎನ್ನುವ ಅರ್ಥವನ್ನು ಹೊಂದಿದ್ದು, ಅದರೊಂದಿಗೆ 'ಪಂಡತ್' ಎಂಬ ಪದ ಸಂಯೋಜನೆಯು ಪಂಡಿತ ಸಮುದಾಯದ ಘನತೆಗೆ ಧಕ್ಕೆ ತರುವಂಥದ್ದು ಎಂದು ಆರೋಪಿಸಿ, ಅರ್ಜಿದಾರ ಮಹೇಂದರ್ ಚತುರ್ವೇದಿ ಎಂಬವರು ಸಿನಿಮಾ ಬಿಡುಗಡೆಗೆ ತಡೆ ಕೋರಿದ್ದರು.

ತಾನ್ಯಾ ಕೇರಳದ ಮೊದಲ ಅಂಧ ನ್ಯಾಯಾಂಗ ಅಧಿಕಾರಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಕಣ್ಣೂರಿನ 24 ವರ್ಷದ ತಾನ್ಯಾ ನಾಥನ್ ಸಿ. ಅವರು ಸಿವಿಲ್ ನ್ಯಾಯಾಧೀಶ (ಜೂನಿಯರ್ ಡಿವಿಷನ್) ಹುದ್ದೆಗಾಗಿ ನಡೆದ ನ್ಯಾಯಾಂಗ ಸೇವೆ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾರೆ. ಈ ಮೂಲಕ ರಾಜ್ಯದ ಮೊದಲ ಅಂಧ ನ್ಯಾಯಾಂಗ ಅಧಿಕಾರಿ ಎಂಬ ಹಿರಿಮೆಗೆ ಪಾತ್ರರಾಗಿದ್ದಾರೆ.


ತಾನ್ಯಾ ನಾಥನ್

ತಾನ್ಯಾ ಅವರು ಒಂದು ವರ್ಷದಿಂದ ವಕೀಲಿಕೆ ಅಭ್ಯಾಸ ಮಾಡುತ್ತಿದ್ದಾರೆ. ಸ್ಕ್ರೀನ್ ರೀಡರ್ ಮತ್ತು ಡಿಕ್ಟೇಷನ್ ಆ್ಯಪ್‌ಗಳನ್ನು ಬಳಸಿಕೊಂಡು ಅವರು ಕಾರ್ಯನಿರ್ವಹಿಸುತ್ತಿದ್ದಾರೆ.

ತಾನ್ಯಾ ಅವರು ಕಣ್ಣೂರಿನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದು, ಅಲ್ಲಿನ ವಿಶ್ವವಿದ್ಯಾಲಯದಲ್ಲಿ ಕಾನೂನು ಪದವಿ ಪಡೆದಿದ್ದಾರೆ. ಹುಟ್ಟಿನಿಂದಲೇ ಅಂಧರಾಗಿರುವ ಅವರು, ಪ್ರೌಢಶಾಲೆಯಲ್ಲಿ ಕಲಿಯುತ್ತಿರುವಾಗಲೇ ಕಾನೂನು ಕ್ಷೇತ್ರದಲ್ಲಿ ಮುಂದುವರಿಯುವ ಕನಸು ಕಂಡಿದ್ದರು.

ಈ ಬಗ್ಗೆ ಪ್ರತಿಕ್ರಿಯಿಸಿರುವ ತಾನ್ಯಾ ಅವರು, 'ಕಾನೂನು ಸೇವೆಯು ವಿಭಿನ್ನ ವೃತ್ತಿ ಎಂದು ಪರಿಗಣಿಸುತ್ತೇನೆ. ಅಲ್ಲದೆ, ಪ್ರತಿಯೊಬ್ಬರ ಪಾಲಿಗೂ ಕಾನೂನು ಬಲಿಷ್ಠವಾದ ಅಸ್ತ್ರ. ಇದು ಈ ಕ್ಷೇತ್ರದಲ್ಲಿ ಮುಂದುವರಿಯಲು ಪ್ರೇರೇಪಿಸಿತು' ಎಂದರು.

'ಇ-ನ್ಯಾಯಾಲಯಗಳ ಅನುಷ್ಠಾನದೊಂದಿಗೆ ಕೋರ್ಟ್‌ಗಳ ಆಧುನೀಕರಣವು ಅಂಗವಿಕಲರಿಗೆ ನ್ಯಾಯಾಲಯಗಳಲ್ಲಿ ವೃತ್ತಿ ಮಾಡಲು ಅನುವುಮಾಡಿಕೊಡುತ್ತದೆ' ಎಂದರು.

'ಕಿರಿಯ ವಕೀಲೆಯಾಗಿದ್ದರೂ ಸಾಕಷ್ಟು ಬೆಂಬಲ ದೊರೆತಿದೆ. ಅಂಧತ್ವದ ಮಿತಿಯಿಂದ ಹೊರಬಂದು ನ್ಯಾಯದಾನ ಮಾಡುವ ವಿಶ್ವಾಸವಿದೆ' ಎಂದು ಹೇಳಿದರು.

ಲಡ್ಡು: ಇ.ಡಿ ಪ್ರಕರಣ ದಾಖಲು

ಅಮರಾವತಿ/ನವದೆಹಲಿ (ಪಿಟಿಐ): ತಿರುಮಲ ತಿರುಪತಿ ದೇಗುಲದ ಲಡ್ಡು ಪ್ರಸಾದ ತಯಾರಿಕೆಯಲ್ಲಿ ಕಲಬೆರಕೆ ತುಪ್ಪ ಬಳಕೆ ಮಾಡಲಾಗಿದೆ ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು(ಇ.ಡಿ) ಹಣ ಅಕ್ರಮ ವರ್ಗಾವಣೆ ಪ್ರಕರಣವನ್ನು ದಾಖಲಿಸಿಕೊಂಡಿದೆ.

ಆರೋಪಿಗಳು ಹಣ ಅಕ್ರಮ ವರ್ಗಾವಣೆ ನಡೆಸಿದ್ದಾರೆಯೇ ಮತ್ತು ಕಲಬೆರಕೆ ತುಪ್ಪದ ಮೂಲಕ ಅಕ್ರಮವಾಗಿ ಹಣ ಗಳಿಸಿದ್ದಾರೆಯೇ ಎಂಬ ಬಗ್ಗೆ ಇ.ಡಿಯು ಹಣ ಅಕ್ರಮ ವರ್ಗಾವಣೆ ನಿಯಂತ್ರಣ ಕಾಯ್ದೆ (ಪಿಎಂಎಲ್‌ಎ) ಅಡಿ ತನಿಖೆ ನಡೆಸುತ್ತಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಪಂಜರದೊಳಗೆ ಗರ್ಭಿಣಿ ಮಹಿಳೆಯನ್ನು ಕೂಡಿ ಹಾಕಿರುವ ವಿಡಿಯೊ ತುಣುಕೊಂದನ್ನು 'ಎಕ್ಸ್' ಖಾತೆ-ದಾರರೊಬ್ಬರು ಹಂಚಿಕೊಂಡಿದ್ದು, ಅದನ್ನು ಎಪ್‌ಸ್ಟೈನ್ ಫೈಲ್ಸ್‌ಗೆ ತಳಕು ಹಾಕಿದ್ದಾರೆ. 'ಗರ್ಭಿಣಿ ಬಾಲಕಿಯರನ್ನು ಪ್ರಾಣಿಗಳ ರೀತಿಯಲ್ಲಿ ನೋಡಲಾಗಿದೆ. ಮತ್ತು ಜಗತ್ತು ಈಗಲೂ 'ಸಾಕ್ಷ್ಯ'ದ ಬಗ್ಗೆ ಚರ್ಚೆ ಮಾಡುತ್ತಿದೆ' ಎಂದು ಆ ಪೋಸ್ಟ್‌ನಲ್ಲಿ ಹೇಳಲಾಗಿದೆ. ನಂತರ ಹ್ಯಾಶ್‌ಟ್ಯಾಗ್ ಹಾಕಿ ಎಪ್‌ಸ್ಟೈನ್‌ಫೈಲ್ಸ್ ಎಂದು ಬರೆಯಲಾಗಿದೆ. ಆದರೆ, ಇದು ಸುಳ್ಳು.



ವಿಡಿಯೊದಿಂದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ ರಿವರ್ಸ್ ಸರ್ಚ್ ವಿಧಾನದಲ್ಲಿ ಗೂಗಲ್ ಲೆನ್ಸ್ ಬಳಸಿ ಹುಡುಕಿದಾಗ ಟಿಕ್‌ಟಾಕ್‌ನಲ್ಲಿ ಪೋಸ್ಟ್ ಮಾಡಲಾಗಿದ್ದ 'ಐ ಆ್ಯಮ್ ದಿ ವೆಸೆಲ್ ಲೈಫ್ ಆಫ್ ಲಕ್ಷುರಿ ಫುಲ್ ವಿಡಿಯೊ' ಎಂಬ ತಲೆಬರಹದ ಲಿಂಕ್ ಸಿಕ್ಕಿತು. ಅದರ ಆಧಾರದಲ್ಲಿ ಹುಡುಕಾಟ ನಡೆಸಿದಾಗ, 'ಲೈಫ್ ಆಫ್ ಲಕ್ಷುರಿ' ಎಂಬ ಯೂಟ್ಯೂಬ್ ಚಾನೆಲ್‌ನಲ್ಲಿ ಹೆಚ್ಚು ಗುಣಮಟ್ಟದ, ಮೂಲ ವಿಡಿಯೊ ಸಿಕ್ಕಿತು. 2025ರ ಏಪ್ರಿಲ್ 5ರಂದು ಇದನ್ನು ಅಪ್‌ಲೋಡ್ ಮಾಡಲಾಗಿದೆ. ಈ ವಿಡಿಯೊದಲ್ಲಿ 0.28ರಿಂದ 0.40 ಸೆಕೆಂಡುಗಳ ನಡುವೆ ಇರುವ ದೃಶ್ಯಾವಳಿಗಳು, ಈಗ ಎಕ್ಸ್‌ನಲ್ಲಿ ಪೋಸ್ಟ್ ಮಾಡಲಾಗಿರುವ ತುಣುಕಿನ ದೃಶ್ಯಗಳೇ ಆಗಿವೆ. ಆ ವಿಡಿಯೊದ ವಿವರಣೆಯಲ್ಲಿ, 'ಇದನ್ನು ಕಲೆ ಮತ್ತು ಮನರಂಜನೆಯ ಉದ್ದೇಶಕ್ಕೆ ನಿರ್ಮಿಸಲಾಗಿದೆ' ಎಂದು ಸ್ಪಷ್ಟವಾಗಿ ಬರೆಯಲಾಗಿದೆ. ಇದು ಹಾರರ್ ವಿಡಿಯೊವಾಗಿದ್ದು, ಎಪ್‌ಸ್ಟೈನ್ ಫೈಲ್ಸ್‌ಗೂ ಇದಕ್ಕೂ ಸಂಬಂಧವಿಲ್ಲ ಎಂದು ಬೂಮ್ ಫ್ಯಾಕ್ಟ್‌ಚೆಕ್ ವರದಿ ತಿಳಿಸಿದೆ.

ಇಲ್ಲ ಎನ್ನುವುದೂ ವಿವೇಕ


ನುಡಿ ಬೆಳಗು
ವಾಸುದೇವ ನಾಡಿಗ್

ಬರೀ ದಾಕ್ಷಿಣ್ಯಗಳಲ್ಲೇ ಬಾಳು ಸಾಗಿಸುವ ಜೀವಗಳಿವೆ. ಇಲ್ಲಿರಲಾರೆ, ಅಲ್ಲಿ ಹೋಗಲಾರೆ ಎಂಬ ಇಬ್ಬಂದಿಯ ದ್ವಂದ್ವ ಅದು. ಒಲ್ಲೆ ಅನ್ನದೆ ದಿಕ್ಕಾಪಾಲಾಗುವ ಸಮಯ. ಭಾರ ಹೊರುವುದಕ್ಕೂ ಒಂದು ಮಿತಿ ಇದೆ. ಒಪ್ಪಿಕೊಳ್ಳುವುದಕ್ಕೂ ಒಂದು ಮೇರೆ ಇದೆ. ಸಣ್ಣ ನಿಷ್ಠುರ ನಮ್ಮ ಮನಸನ್ನು ಒಂದಿನಿತು ತಹಬದಿಗೆ ನಿಲ್ಲಿಸಬಹುದು ಎನ್ನುವುದಾದರೆ ಅದು ಒಳ್ಳೆಯದೇ. ಆಗಲ್ಲ ಎಂದು ನೇರವಾಗಿ ಹೇಳದೆ ಕೈಲಾಗದ ಕೆಲಸವನ್ನು ಒಪ್ಪಿಕೊಂಡು ಜರ್ಜರಿತರಾಗುತ್ತಾರೆ. ಬಿಸಿತುಪ್ಪದ ಸ್ಥಿತಿ ಇದು.

ಒಂಟೆಯೊಂದನ್ನು ಸಾಕುತ್ತ ಜೀವನ ನಿರ್ವಹಣೆ ನಡೆಸುವ ವೃದ್ಧನ ಕತೆಯೂ ಇದೆ. ವೃದ್ಧನ ಒಂಟೆ ಮುಂಜಾವ ಬೀದಿಗೆ ಬಂತು ಎಂದರೆ ಕ್ರಮೇಣ ಬೆನ್ನಿನ ಮೇಲೆ ಮೂಟೆಗಳ ಭಾರ ಹೆಚ್ಚುತ್ತಾ ಹೋಗುತ್ತದೆ. ವೃದ್ಧ ತಾನು ಒಪ್ಪಿಕೊಂಡ ಹೊಣೆಯನ್ನೆಲ್ಲ ಒಂಟೆ ಬೆನ್ನ ಮೇಲೆ ಹೊರಿಸುತ್ತ ಹೋದ. ಇದು ಪ್ರತಿ ನಿತ್ಯದ ಪಾಡು. ಮೂಕ ಒಂಟೆಗೆ ಮಾತು ಬರುವುದಿಲ್ಲ. ವೃದ್ಧ ದಾಕ್ಷಿಣ್ಯದ ಮೂಟೆ. ಒಮ್ಮೊಮ್ಮೆ ಹಣದ ಆಸೆಗೆ ಒಮ್ಮೊಮ್ಮೆ ಉಪಕಾರದ ಭಾವಕ್ಕೆ ಬಿದ್ದು ಶಹರಕ್ಕೆ ಹೋಗುವ ದಾರಿಯಲ್ಲಿ ಯಾರೇ ಬಂದು ಸರಕನ್ನು ತಲುಪಿಸಲು ಹೇಳಿದರೂ ಒಪ್ಪಿಕೊಳ್ಳುವ ಮನುಷ್ಯ. ಈ ತರಹದ ದೃಷ್ಟಾಂತವು ಅದೆಷ್ಟು ಬಗೆಯ ಅನುಭವಗಳನ್ನು ಅನಾವರಣಗೊಳಿಸುತ್ತದೆ ನೋಡಿ.

ಬಂಧು ಬಳಗ ಸ್ನೇಹ ನೆಂಟಸ್ತಿಕೆ ಅಂತ ಕೆಲವೊಮ್ಮೆ ಇದ್ದ ಬದ್ದ ಚೈತನ್ಯವನ್ನೆಲ್ಲ ಬಸಿದು ಬಿಡುತ್ತದೆ. ಹತ್ತು ಹಲವರ ಚಿಂತೆಗಳನ್ನು ಮೈಮೇಲೆ ಹಾಕಿಕೊಳ್ಳುವ ಪರಿ ಇದು. ಊರ ಉಸಾಬರಿ ಅಂತಾರಲ್ಲ ಅದು. ಆದರೆ, ಎಷ್ಟು ಅಂತ ಹೆಣಗಲು ಸಾಧ್ಯ? ನಮ್ಮ ಮಿತಿ ಮತ್ತು ಸಾಧ್ಯತೆಗಳ ಬಗ್ಗೆ ಕೂಡಾ ಯೋಚಿಸಬೇಕಾಗುತ್ತದೆ. ಊರಿನ ಒಂಟೆಯ ಕತೆಯ ತರಹ. ಇಲ್ಲಿ ಆದದ್ದೂ ಹೀಗೇ. ಆ ಮುಂಜಾನೆ ವೃದ್ಧನ ಬುದ್ಧಿ ಭಾವಕ್ಕೆ ಏನು ಬಡಿದಿತ್ತೋ ಗೊತ್ತಿಲ್ಲ. ಶಹರದ ಬೀದಿಗುಂಟ ದುಡ್ಡು ಕೊಟ್ಟು ವಿನಂತಿಸಿಕೊಂಡ ವ್ಯಾಪಾರಿಗಳ ಸರಕುಗಳನ್ನು ಒಂಟೆಯ ಬೆನ್ನ ಮೇಲೆ ಹೇರುತ್ತ ಹೋದ. ತೊನೆದಾಡುತ್ತ ಹೊರಟ ಒಂಟೆ. 'ಭಾರ ಇಲ್ಲ ಹಗುರ' ಅಂತೆಲ್ಲ ಬಂದ ವ್ಯಾಪಾರಿಗಳ ಚೀಲಗಳನ್ನು ಹೊತ್ತು ಸಾಗಿತು. ಒಂಟೆಗೆ ಒಂದು ಹೆಜ್ಜೆಯೂ ಇಡಲು ಆಗದ ಆಯಾಸ ಏದುಸಿರು ಭಾರ. ಕಾಲುಗಳೆಲ್ಲ ಮಡಚಿಕೊಳ್ಳುತ್ತ ಕೂಡಲು ಹವಣಿಸುತ್ತಿತ್ತು. ಇನ್ನೇನು ಶಹರ ಅರ್ಧ ಮೈಲಿ ಇರಬಹುದು ಪುಟ್ಟ ಹುಡುಗಿಯೊಬ್ಬಳು ಓಡೋಡಿ ಬಂದಳು. ಸಣ್ಣ ಪೊಟ್ಟಣ ಅದು ಸ್ವಲ್ಪ ತಿಂಡಿ ತಿನಿಸು ಇರಬೇಕು. ವೃದ್ಧ ಒಲ್ಲೆ ಅನ್ನದೆ ಅದನ್ನು ಒಂಟೆಯ ಬೆನ್ನಿಗೆ ಸಿಕ್ಕಿಸಿದ. ಹತ್ತು ಹೆಜ್ಜೆ ನಡೆದಿರಬೇಕು. ಒಂಟೆ ಕುಸಿದು ಕೂತು ಬಿಟ್ಟಿತು. ಮಣಭಾರದ ಸರಕು ಇರಲಿ ಗ್ರಾಂ ತೂಕದ ಸರಕು ಇರಲಿ ಭಾರ ಭಾರವೇ ಮಿತಿ ಮಿತಿಯೇ ಶಕ್ತಿ ಶಕ್ತಿಯೇ. 'ವೃದ್ಧ ಇಲ್ಲ ಆಗೊಲ್ಲ' ಅಂತ ಹೇಳಿದ್ದರೆ ಒಂಟೆ ಕುಸಿದು ಕೂಡುತ್ತ ಇರಲಿಲ್ಲ. ಸಣ್ಣದೇ ಇರಬಹುದು ಅದು ಆ ಕ್ಷಣದ ಬಲು ಭಾರ.

ದುಡಿಮೆ, ಬದ್ಧತೆ, ಕ್ಷಮತೆಗೂ ಒಂದು ಮಿತಿ ಇದೆ. ನಿರ್ದಾಕ್ಷಿಣ್ಯವಾಗಿ ಒಮ್ಮೆ ಇಲ್ಲ ಅನ್ನಲೇ ಬೇಕಾಗುತ್ತದೆ. ಇಲ್ಲ ಅನ್ನುವುದು ಸ್ವಾರ್ಥವಲ್ಲ. ಅದು ವಿವೇಕವೂ ಹೌದು. ಆಗದೆ ಇದ್ದರೂ ಹತ್ತು ಹಲವರ ಸಣ್ಣ ಪುಟ್ಟ ಚಿಂತೆಗಳನ್ನು ಹೊರುವವರು ಒಂದು ಸಲ ಇಲ್ಲ ಅನ್ನಬಾರದೆ.

ಪದಬಂಧ 6312

ವಿದ್ಯಾ ವಿನಯ್

1	■	2			■	■	3	■
4			■	■	5			
	■	6				■		■
	■		■	■		■	■	■
■	■	7	8	■	9	10	■	■
■	■	■		■	■		■	11
■	12	■	13				■	
14				■	■	15		
■		■	■	16			■	

ಎಡದಿಂದ ಬಲಕ್ಕೆ
2.ಬಾವಲಿ ಇಲ್ಲಿದೆ (3)
4.ಕೊನೆಗೆ ವೃಕ್ಷವಿದ್ದಾಗ ಆವರಿಸಿದ ಕ್ಷಾಮ (3)
5.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು (4)
6.ನಡುವೆ ಪತ್ರ ಬಂದದಕ್ಕೇ ಈ ತೊಂದರೆ! (4)
7.ತಿರುಗಿರುವ ಮಂದಿ (2)
9.ತರತಮ ಮಾಡಿದಾಗ ಆವರಿಸಿದ ಕತ್ತಲು (2)
13.ಕಳವಳ ಹೀಗೆ ಬಂದಿದೆ (4)
14.ಹಾರ ಹಿಡಿದುಕೊಂಡಿರುವ ದ್ವಾರಪಾಲಕ (4)
15.ದನಕರುಗಳ ಮೂತ್ರ (3)
16.ಆಶ್ಚರ್ಯಕರವಾದ ಘಟನೆ (3)

ಮೇಲಿಂದ ಕೆಳಕ್ಕೆ
1.ಗಾದೆಯಂತೆ,ಗಡಿಗೆ ತುಪ್ಪ ತಿನ್ನಲು ಮಾಡಬೇಕಾದ್ದು! (4)
2.ಕೈಯನ್ನು ತಟ್ಟುವಿಕೆ (5)
3.ಅನುಭೂತಿಗಾಗಿ ಧರಿಸಿರುವ ಭಸ್ಮ (3)
5.ಕಬ್ಬಿಣವನ್ನು ಆಕರ್ಷಿಸುವ ಗುಣ ಇದಕ್ಕಿದೆ (4)
8.ಹಿಂದಿನ ಅಥವಾ ಮುಂದಿನ ಜನ್ಮ (4)
10.ಅಳಿಯನನ್ನು ಹೀಗೆನ್ನಿ (5)
11.ಮರ ಬಳ್ಳಿ ಇಲ್ಲಿ ಕಾಣುತ್ತಿವೆ (4)
12.ಇದು ಗುರುತು (3)

6311ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಆನಂದ 4.ನಗುಮೊಗ 6.ರಥೋತ್ಸವ 8.ಹಿಜರಿ 11.ರಿಕಾಪು 13.ದಿನಮಣಿ 17.ಗಡಿರುಗಾ 18.ಸುಯೋಗ

ಮೇಲಿಂದ ಕೆಳಕ್ಕೆ: 1.ಆಚಾರ್ಯ 2.ದನಗಾಹಿ 3.ಜಾಗರ 4.ಭೀಭತ್ಸ 7.ವರ್ಣನೆ 9.ರಿಪೇರಿ 10.ವರದಿ 12.ಪುದಿಗಾಸು 14.ನಲ್ನುಡಿ 15.ಣಿಗಸ 16.ಪರಾಗ

ಸುಡೊಕು 6696

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7			2		3		5
3		6	5		8			
	4			7		2		6
	6				5			9
9		1		8			6	2
4			2			1		
		2	3		7		5	4
7	1					6		
5		3	4		2			1

6695 ಸುಡೊಕು

4	9	7	1	8	3	5	2	6
2	3	1	4	6	5	9	7	8
6	8	5	7	9	2	4	1	3
9	2	4	6	7	8	1	3	5
5	7	3	2	4	1	8	6	9
8	1	6	3	5	9	7	4	2
1	6	9	5	2	7	3	8	4
3	4	8	9	1	6	2	5	7
7	5	2	8	3	4	6	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

11 ಫೆಬ್ರುವರಿ 2026 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣನವಮಿ ಗಂ 9-59 ನಕ್ಷತ್ರ: ಅನುರಾಧ ಗಂ.10-53 ಯೋಗ: ವ್ಯಾಘಾತ ಗಂ. 26-30 ಕರಣ: ಗರ ಗಂ 9-59 ಮಕರ ಮಾಸದ 28 ನೇ ದಿನ. ಮಳೆ ನಕ್ಷತ್ರ : ಧನಿಷ್ಠ 2 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 - 01-30, **ಸೂರ್ಯೋದಯ :** 06-58 ಸೂರ್ಯಾಸ್ತ : 06-31, **ಮುಸ್ಲಿಂ ದಿನಾಂಕ :** 22 ಶಬನ್, ಅದೃಷ್ಟ ಸಂಖ್ಯೆ : 10, 7.

ಮೇಷ: ಸಮಯ ಮತ್ತು ಅನುಕೂಲತೆಯ ಮೇಲೆ ಹೊಸ ಕೆಲಸಗಳನ್ನು ಒಪ್ಪಿಕೊಳ್ಳುವ ನಿರ್ಧಾರಕ್ಕೆ ಬನ್ನಿ. ಹಣಕಾಸು ಪರಿಸ್ಥಿತಿ ಸಂಪೂರ್ಣ ಹಿಡಿತದಲ್ಲಿಡಲು ಪ್ರಯತ್ನಿಸಿ. ಆಲಸ್ಯತನ ಕುಟುಂಬದ ಅಭಿವೃದ್ಧಿ ಹಾಳು ಮಾಡುತ್ತದೆ.

ವೃಷಭ: ವಿದ್ಯಾ ಸಂಸ್ಥೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ಕೆಲಸದಲ್ಲಿ ಉತ್ಸಾಹ ವೃದ್ಧಿ. ದಾಂಪತ್ಯದಲ್ಲಿ ಹೊಂದಾಣಿಕೆಯಿಂದ ಜೀವನ ಹಸನು. ಬಂಧು-ಮಿತ್ರರ ಒಡನಾಟದಿಂದ ಸಂತೋಷ ತೋರಿಬರಲಿದೆ.

ಮಿಥುನ: ಧನಾಗಮನಕ್ಕೆ ಹಲವು ದಾರಿಗಳು ಕಂಡರೂ, ಸರಿ ದಾರಿಯನ್ನು ಆರಿಸಿಕೊಳ್ಳಿ. ಕಚೇರಿಯಲ್ಲಿ ಇದ್ದ ಭಿನ್ನಾಭಿಪ್ರಾಯಗಳು ಬಗೆಹರಿಯಲಿದ್ದು, ನೆಮ್ಮದಿ ಸಿಗಲಿದೆ.

ಕರ್ಕಾಟಕ: ಬಿಡುವಿಲ್ಲದ ಕೆಲಸಗಳು ಮತ್ತು ಮೇಲಧಿಕಾರಿಗಳ ಒತ್ತಡಗಳಿಂದ ವೈಯಕ್ತಿಕ ವಿಷಯಗಳತ್ತ ಗಮನ ಹರಿಸಲು ಸಮಯವಿಲ್ಲದಂತಾಗುವುದು. ಕೃಷಿ ಕಾರ್ಮಿಕರಿಗೆ ಕೆಲ ಕಾರಣದಿಂದ ಕೆಲಸದ ಒತ್ತಡ ಉಂಟಾಗುವುದು.

ಸಿಂಹ: ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದುಕೊಡಲಿದೆ. ಗಮನಕ್ಕೆ ಬರುವ ತಪ್ಪುಗಳು ಪುನರಾವರ್ತನೆಯಾಗದಂತೆ ಗಮನಿಸಿ. ಹೊಸ ಕೆಲಸದ ಬಗ್ಗೆ ವಿಮರ್ಶಿಸಿ , ಕಾರ್ಯರೂಪಕ್ಕೆ ತನ್ನಿರಿ.

ಕನ್ಯಾ: ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿರುವಿರಿ ಮತ್ತು ಶಕ್ತರಾಗಿರುವಿರಿ. ಮನಸ್ಸು ಬೇಡದ ದಿಕ್ಕಿನಲ್ಲಿ ಹರಿಯುವುದನ್ನು ತಡೆಗಟ್ಟುವ ಬಗ್ಗೆ ಅಭ್ಯಾಸ ಮಾಡಿಕೊಳ್ಳಿ. ಪ್ರಮುಖ ಸ್ಥಾನ ಪಡೆಯಲು ತಯಾರಿ ನಡೆಸುವಿರಿ.

ತುಲಾ: ಮೊಬೈಲ್ ಫೋನ್‌ಗಳ ಮಾರಾಟಗಾರರಿಗೆ ಅಥವಾ ರಿಪೇರಿ ಮಾಡುವವರಿಗೆ ಆದಾಯ ಇರುವುದು. ಇಂದಿನ ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿವೆ. ಸದಾ ತಾಳ್ಮೆಯಿಂದ ವ್ಯವಹರಿಸಿ.

ವೃಶ್ಚಿಕ: ಬಂಧು ಮಿತ್ರರ ಸಹಾಯಗಳನ್ನು ಬಯಸದೆ ಕಾರ್ಯಗಳನ್ನು ಮಾಡಿಕೊಳ್ಳಲು ಅಭ್ಯಾಸ ಮಾಡಿ. ಬಾಕಿ ಉಳಿಸಿಕೊಂಡಿರುವ ಕೆಲಸಗಳನ್ನು ಬೇಗ ಮುಗಿಸಿಕೊಳ್ಳುವಂಥ ಪ್ರಯತ್ನಗಳು ನಡೆಯಲಿವೆ.


ಧನು: ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ಹಿರಿಯರೊಂದಿಗೆ ಕುಳಿತು ನಿಶ್ಚಯ ಮಾಡಬಹುದು. ನೌಕರಿಯಲ್ಲಿ ಬಡ್ತಿ ಹೊಂದುವ ಬಗ್ಗೆ ಪ್ರಯತ್ನ ಇರಲಿ. ಪ್ರಯತ್ನಗಳು ನಿಷ್ಫಲವೆನಿಸುವುದಿಲ್ಲ.

ಮಕರ: ವೈಯಕ್ತಿಕ ವಿಚಾರಗಳನ್ನು ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇಬೇಕಾದ ಸಂದರ್ಭ ಬರಲಿದೆ. ಇತರರೆಲ್ಲರಿಗಿಂತ ಭಿನ್ನ ಹಾಗೂ ಧನಾತ್ಮಕ ನಿರ್ಧಾರಗಳನ್ನು ತಗೆದುಕೊಳ್ಳುವಿರಿ.

ಕುಂಭ: ದುರಾಲೋಚನೆಗಳನ್ನು ಬದಲಿಸಿಕೊಳ್ಳುವ ಸಮಯವಾಗಿದೆ. ಅನುಯಾಯಿಗಳಿಗೆ ನೀವಾಡುವ ಮಾತುಗಳಿಂದ ಬಹಳ ಸಂತಸ ಉಂಟಾಗುವುದು. ನಿಶ್ಚಿತ ರೂಪದಲ್ಲಿ ಕೆಲಸಗಳು ಜರುಗಲಿವೆ.

ಮೀನ: ಕೋರ್ಟ್ ವ್ಯವಹಾರಗಳು ಬಗೆಹರಿಯಬಹುದೆಂಬ ಆಲೋಚನೆ ದುರ್ಬುದ್ಧಿಯಿಂದ ವ್ಯತ್ಯಾಸಗಳಾಗುತ್ತದೆ. ಹೆಂಡತಿಯ ಆರೋಗ್ಯ ಸುಧಾರಿಸುತ್ತದೆ. ವಿದ್ಯಾಭ್ಯಾಸಕ್ಕಾಗಿ ದೂರ ಪ್ರಯಾಣ ಮಾಡಬೇಕಾಗುವುದು.

ಗುಂಡಣ್ಣ




ಜನವರಿ: ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): 2026ರ ಜನವರಿಯಲ್ಲಿ ವಾಹನಗಳ ಮಾರಾಟ ಪ್ರಮಾಣವು ಹಿಂದಿನ ವರ್ಷದ ಜನವರಿಗೆ ಹೋಲಿಸಿದರೆ ಶೇಕಡ 17.61ರಷ್ಟು ಹೆಚ್ಚಳ ದಾಖಲಿಸಿದೆ. ಈ ವರ್ಷದ ಜನವರಿಯಲ್ಲಿ 27 ಲಕ್ಷಕ್ಕಿಂತ ಹೆಚ್ಚು ವಾಹನಗಳು ಮಾರಾಟವಾಗಿವೆ.

ಜಿಎಸ್‌ಟಿ ದರ ಇಳಿಕೆಯ ನಂತರದಲ್ಲಿ ಬೇಡಿಕೆಯಲ್ಲಿ ಆಗಿರುವ ಚೇತರಿಕೆಯು ಮುಂದುವರಿದಿದೆ ಎಂದು ಡೀಲರುಗಳ ಸಂಘಟನೆ ಎಫ್‌ಎಡಿಎ ಹೇಳಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,867
ಇಂದಿನ ಅಂತ್ಯ:	25,935
ದಿನದ ಕನಿಷ್ಠ:	25,870
	67

ಮೊಟ್ಟೆ ಧಾರಣೆ (ಎನ್‌ಇಸಿಸಿ)	
ಬೆಂಗಳೂರು 100 ಕ್ಕೆ	₹560
12 ಕ್ಕೆ	₹80
ಮೈಸೂರು: 100 ಕ್ಕೆ	₹562

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಪ್ರ.ಕೆ)	₹600-777
ದ್ವಿತಳಿ (ಪ್ರ.ಕೆ)	₹282-985

ಎನ್.ಆರ್.ಪುರ ರಬ್ಬರ್ (ಪ್ರ.ಕೆ.ಜಿಗೆ)	
ಆರ್‌ಎಸ್‌ಎಸ್-4	₹203.50
ಆರ್‌ಎಸ್‌ಎಸ್-5	₹198.50
ಗುಡ್ ಲಾಟ್	₹186.50

ಮುದ್ದೆ ಮನೆ ಕಾಫಿ (50 ಕೆ.ಜಿ)	
ಎಪಿ	₹23,750
ಎಸಿ	₹12,600
ಆರ್‌ಪಿ	₹18,100
ಆರ್‌ಸಿ	₹10,180

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1740 (1740)
ಸೋಯಾ (ರಿಫೈನ್ಡ್)	₹1410 (1410)
ಸೂರ್ಯಕಾಂತಿ (ರಿಫೈನ್ಡ್)	₹1630 (1630)
ಪಾಮೋಲಿನ್	₹1320 (1330)

ಕೆಎಸ್‌ಡಿಎಲ್ ಪ್ರಚಾರಕ್ಕಿಳಿದ ತಮನ್ನಾ

ಮೈಸೂರ್ ಸ್ಯಾಂಡಲ್ ಉತ್ಪನ್ನಗಳಿಗೆ ನಟಿ ಎರಡು ವರ್ಷ ರಾಯಭಾರಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಮಲ್ಲಿಗೆ ಪರಿಮಳದ ಸೋಪಿಗೆ ಬೇಡಿಕೆ: ಎಂ.ಬಿ. ಪಾಟೀಲ
- ₹500 ಕೋಟಿಯಷ್ಟು ಲಾಭ ನಿರೀಕ್ಷೆ

ಬೆಂಗಳೂರು: ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಗಮದ (ಕೆಎಸ್‌ಡಿಎಲ್) ರಾಯಭಾರಿಯನ್ನಾಗಿ ಹೊಣೆಯನ್ನು ಮಂಗಳವಾರ ಹೊತ್ತ ನಟಿ ತಮನ್ನಾ ಭಾಟಿಯಾ ಅವರು, ನಿಗಮದ 57 ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

ನಗರದ ತಾಜ್ ವೆಸ್ಟ್‌ಎಂಡ್ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ತಮನ್ನಾ ಅವರು ಕೆಎಸ್‌ಡಿಎಲ್‌ನ ರಾಯಭಾರಿಯಾಗಿ ಪ್ರಚಾರ ಆರಂಭಿಸಿದರು. ಮಂಗಳವಾರದಿಂದ ಎರಡು ವರ್ಷ ಅವರು ಕೆಎಸ್‌ಡಿಎಲ್ ಉತ್ಪನ್ನಗಳ ಪ್ರಚಾರ ನಡೆಸಲಿದ್ದಾರೆ.

ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, 'ಕೆಎಸ್‌ಡಿಎಲ್ ಈಗ ಕೇವಲ ಮೈಸೂರು ಸ್ಯಾಂಡಲ್ ಸೋಪುಗಳಿಗೆ ಸೀಮಿತವಾಗಿಲ್ಲ. ಮಲ್ಲಿಗೆ ಪರಿಮಳದ ಸೋಪನ್ನೂ ತಯಾರಿಸುತ್ತಿದೆ. ಒಂದು ಲೀಟರ್ ಮಲ್ಲಿಗೆ ತೈಲಕ್ಕೆ ₹4 ಲಕ್ಷಕ್ಕಿಂತ ಹೆಚ್ಚಿನ ಬೆಲೆ ಇದೆ. ಮಲ್ಲಿಗೆ ಪರಿಮಳದ ಸೋಪಿಗೆ ₹400 ನಿಗದಿ ಮಾಡಿದ್ದೇವೆ. ಯುರೋಪ್‌ನಲ್ಲಿ ಈ ರೀತಿಯ ಸೋಪುಗಳಿಗೆ ಭಾರಿ ಬೇಡಿಕೆ ಇದೆ' ಎಂದರು.

'ಕೆಎಸ್‌ಡಿಎಲ್ ಒಟ್ಟು ಉತ್ಪಾದನೆಯ ಶೇ 1ರಷ್ಟು ಮಾತ್ರ ರಫ್ತಾಗುತ್ತಿದೆ. ಇದನ್ನು ಹೆಚ್ಚಿಸಲು ನೀಲನಕ್ಷೆ ಸಿದ್ಧಪಡಿಸಲಾಗಿದೆ. ಹೊಸ ಉತ್ಪನ್ನಗಳಲ್ಲಿ ಮಹಾರಾಜ ಮತ್ತು ಮಹಾರಾಣಿ ಸರಣಿ ಇವೆ. ಪರಂಪರೆಯ ಮತ್ತಷ್ಟನ್ನು ಬಿಟ್ಟುಕೊಡದೆ ಸಮಕಾಲೀನ ಅಭಿರುಚಿಯನ್ನು ಇಲ್ಲಿ ಬೆಸೆದಿದ್ದೇವೆ' ಎಂದು ವಿವರಿಸಿದರು.

ನಿಗಮದ ಅಧ್ಯಕ್ಷ ಸಿ.ಎಸ್. ಅಪ್ಪಾಜಿ ನಾಡಗೌಡ, 'ಈ ಸಾಲಿನಲ್ಲಿ ನಿಗಮದ ವಹಿವಾಟು ₹2,000 ಕೋಟಿ ಮುಟ್ಟಲಿದ್ದು, ₹500 ಕೋಟಿಯಷ್ಟು ಲಾಭ ನಿರೀಕ್ಷಿಸಲಾಗಿದೆ. ಇದಕ್ಕಾಗಿ ಆಧುನಿಕ ವಹಿವಾಟು ತಂತ್ರ ಅನುಸರಿಸಲಾಗುತ್ತಿದೆ. ದೇಶದಾದ್ಯಂತ ವರ್ಚಸ್ಸು ಹೊಂದಿರುವ ಮತ್ತು ಸಾಮಾಜಿಕ ಜಾಲತಾಣಗಳಲ್ಲಿ 3 ಕೋಟಿಗೂ ಹೆಚ್ಚು ಫಾಲೋವರ್ಸ್ ಇರುವ ತಮನ್ನಾ ಅವರನ್ನು ರಾಯಭಾರಿಯಾಗಿ ಆಯ್ಕೆ ಮಾಡಲಾಗಿದೆ. ಇದರಿಂದ ನಿಗಮದ ವಹಿವಾಟು ಹೆಚ್ಚಲಿದೆ' ಎಂದರು.



ತಮನ್ನಾ ಭಾಟಿಯಾ ಅವರು ಕೆಎಸ್‌ಡಿಎಲ್‌ನ ನೂತನ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು. ಸಿ.ಎಸ್. ಅಪ್ಪಾಜಿ ನಾಡಗೌಡ, ಎಂ.ಬಿ.ಪಾಟೀಲ, ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ.ಎಂ.ಪ್ರಶಾಂತ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಹೊಸ ಉತ್ಪನ್ನಗಳು

ಮೈಸೂರ್ ಸ್ಯಾಂಡಲ್ ಸೋಪುಗಳಿಗೆ ಹೆಸರುವಾಸಿಯಾದ ಕೆಎಸ್‌ಡಿಎಲ್ ಈಗ ಗಂಧದ ಎಣ್ಣೆ, ವಿವಿಧ ಪರಿಮಳದ ಸೋಪುಗಳು, ಸುಗಂಧದ್ರವ್ಯ, ಹಲ್ಲುಜ್ಜುವ ಪೇಸ್ಟ್, ಕೊಬ್ಬರಿ ಎಣ್ಣೆ, ಪೆಟ್ರೋಲಿಯಂ ಜೆಲ್ಲಿ, ವಿವಿಧ ಸಾವಯವ ಉತ್ಪನ್ನಗಳು ಸೇರಿ 57 ನೂತನ ಉತ್ಪನ್ನಗಳನ್ನು ಮಂಗಳವಾರ ಬಿಡುಗಡೆ ಮಾಡಿದೆ.

ನಿಗಮದ 100ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ವಿವರಿಸುವ 'ಸುಗಂಧ ಸಿರಿ' ಮತ್ತು 'ಅರೋಮ್ಯಾಟಿಕ್ ಜರ್ನಿ' ಕಾಫಿ ಟೇಬಲ್ ಪುಸ್ತಕಗಳೂ ಮಾರುಕಟ್ಟೆಗೆ ಬಂದಿವೆ.

'ಮೈಸೂರ್ ಸ್ಯಾಂಡಲ್ ಪರಿಪೂರ್ಣತೆಯ ಸಂಗಮ'

'ಮೈಸೂರು ಸ್ಯಾಂಡಲ್ ಸೋಪು, ಕೇವಲ ಒಂದು ಸಾಬೂನಲ್ಲ. ಇದರೊಂದಿಗೆ ಭಾವನೆಗಳು, ಬಾಲ್ಯ ಮತ್ತು ಸುಮಧುರ ನೆನಪುಗಳೆಲ್ಲ ಬೆಸೆದುಕೊಂಡಿವೆ. ಇದು ಪರಿಪೂರ್ಣತೆ ಮತ್ತು ಸತ್ಯಗಳ ಸಂಗಮ. ಮಾರುಕಟ್ಟೆಯಲ್ಲಿ ಇದಕ್ಕೆ ಸಾಟಿಯಾದ ಇನ್ನೊಂದು ಸೋಪು ಇಲ್ಲ. ಇದಕ್ಕೆ ನನ್ನ ಹೃದಯದಲ್ಲಿ ವಿಶೇಷ ಸ್ಥಾನವಿದೆ' ಎಂದು ತಮನ್ನಾ ಭಾಟಿಯಾ ಹೇಳಿದರು.

ಅವರು ನಿಗಮದ ಪ್ರಚಾರ ರಾಯಭಾರಿಯಾಗಿ ನಟಿಸಿರುವ ಹಲವು ಜಾಹೀರಾತುಗಳನ್ನೂ ಮಂಗಳವಾರದ ಕಾರ್ಯಕ್ರಮದಲ್ಲಿ ಅನಾವರಣ ಮಾಡಲಾಯಿತು.

ಈಕ್ವಿಟಿ ಎಂ.ಎಫ್. ಮೀರಿಸಿದ ಚಿನ್ನದ ಇಟಿಎಫ್

ನವದೆಹಲಿ (ಪಿಟಿಐ): ಚಿನ್ನದಲ್ಲಿ ಹಣ ತೊಡಗಿಸುವ ಇಟಿಎಫ್‌ಗಳಲ್ಲಿನ ಹೂಡಿಕೆಯು ಜನವರಿ ತಿಂಗಳಲ್ಲಿ ತೀವ್ರವಾಗಿ ಹೆಚ್ಚಾಗಿದ್ದು, ₹24,040 ಕೋಟಿ ಆಗಿದೆ. ಇದು ಡಿಸೆಂಬರ್ ತಿಂಗಳಿನಲ್ಲಿ ₹11,647 ಕೋಟಿ ಆಗಿತ್ತು.

ಚಿನ್ನದ ಇಟಿಎಫ್‌ಗಳಲ್ಲಿ ಆಗಿರುವ ಹೂಡಿಕೆಯು ಇದೇ ಮೊದಲ ಬಾರಿಗೆ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯ ಮೊತ್ತಕ್ಕಿಂತ ತುಸು ಹೆಚ್ಚಾಗಿದೆ. ಜನವರಿಯಲ್ಲಿ ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಒಟ್ಟು ₹24,028 ಕೋಟಿ ಹೂಡಿಕೆ ಆಗಿದೆ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಚಿನ್ನದ ಇಟಿಎಫ್‌ಗಳ ಮೇಲೆ ಇದುವರೆಗೆ ₹61 ಸಾವಿರ ಕೋಟಿ ಹೂಡಿಕೆ ಆಗಿದೆ. ಜನವರಿ ಅಂತ್ಯಕ್ಕೆ ಈ ಇಟಿಎಫ್‌ಗಳಲ್ಲಿನ ಹೂಡಿಕೆ ಮೌಲ್ಯ ₹1.84 ಲಕ್ಷ ಕೋಟಿ ಆಗಿದೆ.

ಮುಂಬೈ ಧಾರಣೆ (ಶೇಂಗಾ) 10-02-2026	
ಜಾವಾ 70/80(ಹೊಸ)	11400-11500
ಜಾವಾ 80/90(ಹೊಸ)	10700-10800
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9700-9800
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1750 (1750)
ಒಂದು ವಾರದ ಡೆಲಿವರಿ	1745 (1745)
ಪಾಮ್ ವಾರದ ಡೆಲಿವರಿ	1318 (1328)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1530)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,55,900 (1,54,000)
ಬೆಳ್ಳಿ ಕೆ.ಜಿಗೆ	2,58,500 (2,52,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಸುಂಕ ಮರುಪರಿಶೀಲನೆಗೆ ತಂಬಾಕು ಮಂಡಳಿ ಮನವಿ

ನವದೆಹಲಿ (ಪಿಟಿಐ): ಸಿಗರೇಟುಗಳ ಮೇಲಿನ ಎಕ್ಸೈಸ್ ಸುಂಕವನ್ನು ಭಾರಿ ಪ್ರಮಾಣದಲ್ಲಿ ಹೆಚ್ಚಿಸಿರುವುದರಿಂದ ರೈತರು, ಕಾರ್ಮಿಕರ ಮೇಲೆ ಆಗಿರುವ ದುಷ್ಪರಿಣಾಮವನ್ನು ವಿವರಿಸಿ ತಂಬಾಕು ಮಂಡಳಿಯು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ಪತ್ರ ಬರೆದಿದೆ.

ಫೆಬ್ರುವರಿ 1ರಿಂದ ಜಾರಿಗೆ ಬಂದಿರುವ ಎಕ್ಸೈಸ್ ಸುಂಕ ಹೆಚ್ಚಳವು ಸಿಗರೇಟು ಬೆಲೆಯು ಶೇ 60ರಷ್ಟರವರೆಗೆ ಹೆಚ್ಚಾಗುವಂತೆ ಮಾಡಿದೆ.

ಸುಂಕದ ಭಾರಿ ಏರಿಕೆಯು ಅಕ್ರಮ ಸಿಗರೇಟು ವಹಿವಾಟು ಜಾಸ್ತಿಯಾಗುವ ಭೀತಿ ಉಂಟುಮಾಡಿದೆ. ಅನಿಯಂತ್ರಿತ ಸಿಗರೇಟು ಮಾರುಕಟ್ಟೆಯು ಸರ್ಕಾರಗಳ ತೆರಿಗೆ ವರಮಾನವನ್ನು ಕಿತ್ತುಕೊಳ್ಳುತ್ತದೆ, ಕಾನೂನುಬದ್ಧವಾದ ವಹಿವಾಟುಗಳಿಗೆ ಧಕ್ಕೆ ಉಂಟುಮಾಡುತ್ತದೆ, ಸಾರ್ವಜನಿಕರ ಆರೋಗ್ಯಕ್ಕೆ ಅಪಾಯ ಸೃಷ್ಟಿಸುತ್ತದೆ ಎಂದು ಪತ್ರದಲ್ಲಿ ಹೇಳಲಾಗಿದೆ.

'ಉದ್ಯಮದ ತುರ್ತು ಪರಿಸ್ಥಿತಿಯನ್ನು ಪರಿಗಣಿಸಿ, ರೈತ ಸಮುದಾಯದ ಮೇಲಿನ ಗಣನೀಯ ಪರಿಣಾಮವನ್ನು ಗಮನಿಸಿ, ನೀವು ಮಧ್ಯಪ್ರವೇಶ ಮಾಡಬೇಕು ಹಾಗೂ ತಂಬಾಕು ಉತ್ಪನ್ನಗಳ ಮೇಲಿನ ಅತಿಯಾದ ಸುಂಕವನ್ನು ಪರಿಷ್ಕರಿಸಬೇಕು ಎಂದು ಮನವಿ ಮಾಡುತ್ತಿದ್ದೇನೆ' ಎಂದು ತಂಬಾಕು ಮಂಡಳಿಯ ಅಧ್ಯಕ್ಷ ಯಶವಂತ ಕುಮಾರ್ ಚಿದಿಪೋತು ಪತ್ರದಲ್ಲಿ ಹೇಳಿದ್ದಾರೆ.

'ಸಿಗರೇಟುಗಳ ಮೇಲಿನ ಎಕ್ಸೈಸ್ ಸುಂಕವನ್ನು ಹಿಂದೆಂದೂ ಕಾಣದ ಪ್ರಮಾಣದಲ್ಲಿ ಹೆಚ್ಚು ಮಾಡಿರುವುದರಿಂದಾಗಿ ಲಕ್ಷಾಂತರ ರೈತರಿಗೆ, ಕಾರ್ಮಿಕರಿಗೆ ಮತ್ತು ಸಣ್ಣ ಅಂಗಡಿಗಳ ಮಾಲೀಕರಿಗೆ ತೊಂದರೆ ಆಗಿದೆ' ಎಂದು ಅವರು ವಿವರಿಸಿದ್ದಾರೆ.

ತೆರಿಗೆ ಹೆಚ್ಚಳದಿಂದಾಗಿ ರೈತರ ಆದಾಯ ಕಡಿಮೆ ಆಗಬಹುದು ಎಂದು ಅವರು ಕಳವಳ ವ್ಯಕ್ತಪಡಿಸಿದ್ದಾರೆ. ತಂಬಾಕಿನ ಮಾರುಕಟ್ಟೆ ಬೆಲೆ ಕುಸಿಯಬಹುದು, ರೈತರು ಹೊರಬರಲಾಗದಂತಹ ಸಾಲದ ಸುಳಿಗೆ ಸಿಲುಕಬಹುದು ಎಂಬ ಕಳವಳ ವ್ಯಾಪಕವಾಗಿದೆ. 2014ರಲ್ಲಿ ತೆರಿಗೆಯನ್ನು ಶೇ 22ರಷ್ಟು ಹೆಚ್ಚು ಮಾಡಿದ್ದರಿಂದಾಗಿ ತಂಬಾಕಿನ ಬೆಲೆಯು ಕೆ.ಜಿ.ಗೆ ₹20ರಿಂದ ₹30ರವರೆಗೆ ಕಡಿಮೆ ಆಗಿತ್ತು ಎಂದು ಚಿದಿಪೋತು ನೆನಪಿಸಿದ್ದಾರೆ.

ಅಡಿಕೆ ಧಾರಣೆ

ಭದ್ರಾವತಿ					
ಬೆಟ್ಟೆ	27500-27780	ರಾಶಿ	50299-54899	ಕೋಕ	13900-30899
ಚುರು	10000-10000	ತಟ್ಟಿಬೆಟ್ಟೆ	42099-52899	ಹಳೆಚಾಲಿ	38969-50999
ಇತರೆ	17468-53672	**ಶಿರಸಿ**		ಹೊಸಚಾಲಿ	41769-48469
ಸಿಪ್ಪೆಗೋಟು	11000-11000	ಬೆಟ್ಟೆ	41005-52501	ಕೆಂಪುಗೋಟು	24899-39199
ಸಿದ್ದಾಪುರ		ಬಿಳಿಗೋಟು	23596-42123	ರಾಶಿ	49869-60869
ಬಿಳಿಗೋಟು	28700-41890	ಚಾಲಿ	42599-47999	ತಟ್ಟಿಬೆಟ್ಟೆ	38900-51499
ಚಾಲಿ	44699-51350	ಕೆಂಪುಗೋಟು	27551-38099	**ಶಿವಮೊಗ್ಗ**	
ಕೋಕ	22469-34699	ರಾಶಿ	51509-56561	ಸರಕು/ಹಸ	50859-96896
ಹೊಸಚಾಲಿ	38609-46919	**ಯಲ್ಲಾಪುರ**		ಬೆಟ್ಟೆ	52274-66599
ಕೆಂಪುಗೋಟು	31900-37289	ಆಪಿ	62319-64100	ರಾಶಿಇಡಿ	43669-57559
		ಬಿಳಿಗೋಟು	25099-37699	ಗೊರಬಲು	19010-44601

ಬಾಂಗ್ಲಾ: ಹಿಂದೂ ವ್ಯಾಪಾರಿಯ ಹತ್ಯೆ

ಢಾಕಾ (ಪಿಟಿಐ): ಬಾಂಗ್ಲಾದೇಶದ ಮೈಮೆನ್ಸಿಂಗ್‌ನ ಉಪ ಜಿಲ್ಲೆ ತ್ರಿಶಾಲ್ ಪ್ರದೇಶದ ಬೋಗರ್ ಬಜಾರ್‌ನಲ್ಲಿ ಸೋಮವಾರ ತಡರಾತ್ರಿ 62 ವರ್ಷದ ಹಿಂದೂ ವ್ಯಾಪಾರಿಯನ್ನು ಹರಿತವಾದ ಆಯುಧದಿಂದ ಇರಿದು ಕೊಲೆ ಮಾಡಲಾಗಿದೆ.

ಮೃತ ವ್ಯಕ್ತಿಯನ್ನು ಸೌತ್‌ಕಂಡಾ ನಿವಾಸಿ, 'ಭಾಯಿ, ಭಾಯಿ ಎಂಟರ್‌ಪ್ರೈಸಸ್' ಮಾಲೀಕ ಸುಸೇನ್ ಚಂದ್ರ ಸರ್ಕಾರ್ ಎಂದು ಗುರುತಿಸಲಾಗಿದೆ.

'ತಡರಾತ್ರಿ ಸುಸೇನ್ ಚಂದ್ರ ಅವರನ್ನು, ಅವರ ಅಂಗಡಿಯಲ್ಲೇ ಹತ್ಯೆ ಮಾಡಿದ ಆರೋಪಿಗಳು, ಹೊರಗಿನಿಂದ ಬಾಗಿಲು ಹಾಕಿಕೊಂಡು ಹೋಗಿದ್ದರು. ಕುಟುಂಬ ಸದಸ್ಯರು ಸುಸೇನ್‌ಗಾಗಿ ಹುಡುಕಾಟ ನಡೆಸಿದ್ದರು. ಮಂಗಳವಾರ ಬೆಳಿಗ್ಗೆ ಅಂಗಡಿಯ ಬಾಗಿಲು ತೆರೆದಾಗ ಕೊಲೆ ಆಗಿರುವುದು ಗಮನಕ್ಕೆ ಬಂದಿದೆ' ಎಂದು ತ್ರಿಶಾಲ್ ಪೊಲೀಸ್ ಠಾಣಾಧಿಕಾರಿ ಮಹಮದ್ ಫಿರೋಜ್ ಹುಸೇನ್ ತಿಳಿಸಿದ್ದಾರೆ.

'ನಾವು ಹಲವು ವರ್ಷಗಳಿಂದ ಅಕ್ಕಿ ವ್ಯಾಪಾರ ನಡೆಸುತ್ತಿದ್ದೇವೆ. ಯಾರೂ ಶತ್ರುಗಳಿಲ್ಲ. ತಂದೆಯನ್ನು ಕೊಲೆ ಮಾಡಿದ ಆರೋಪಿಗಳು, ಅಂಗಡಿಯಿಂದ ಲಕ್ಷಾಂತರ ರೂಪಾಯಿ ನಗದು ಕಳವು ಮಾಡಿದ್ದಾರೆ' ಎಂದು ಸುಸೇನ್ ಚಂದ್ರ ಅವರ ಪುತ್ರ ಸುಜನ್ ಮಾಧ್ಯಮಕ್ಕೆ ತಿಳಿಸಿದರು.

ಹುದ್ದೆ ತ್ಯಜಿಸಲ್ಲ: ಸ್ಟಾರ್ಮರ್

ಲಂಡನ್ (ಎಎಫ್‌ಪಿ): ಜೆಫ್ರಿ ಎಪ್‌ಸ್ಟೈನ್ ಪ್ರಕರಣದಿಂದ ಇಕ್ಕಟ್ಟಿಗೆ ಸಿಲುಕಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು 'ಹುದ್ದೆ ತೊರೆಯುವುದಿಲ್ಲ' ಎಂದು ಹೇಳಿದ್ದಾರೆ.

ಅಮೆರಿಕದ ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ಜತೆ ನಂಟು ಹೊಂದಿದ್ದ ಪೀಟರ್ ಮ್ಯಾಂಡಲ್ಸನ್ ಅವರನ್ನು ಅಮೆರಿಕಕ್ಕೆ ಬ್ರಿಟನ್‌ನ ರಾಯಭಾರಿಯಾಗಿ ನೇಮಿಸಿದ್ದಕ್ಕೆ ಸ್ಟಾರ್ಮರ್ ಅವರು ಟೀಕೆಗೆ ಗುರಿಯಾಗಿದ್ದಾರೆ.

ಎಪ್‌ಸ್ಟೈನ್ ಜತೆ ನಂಟು ಹೊಂದಿದ್ದನ್ನು ತಿಳಿದಿದ್ದರೂ ಮ್ಯಾಂಡಲ್ಸನ್ ಅವರನ್ನು ನೇಮಿಸಿದ್ದಕ್ಕೆ ಸ್ಟಾರ್ಮರ್ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಬೇಕು ಎಂದು ಲೇಬರ್ ಪಕ್ಷದ ನಾಯಕ ಅನಾಸ್ ಸರ್ವರ್ ಸೋಮವಾರ ಆಗ್ರಹಿಸಿದ್ದರು.

'ನನ್ನ ಜವಾಬ್ದಾರಿಯಿಂದ ಹೊರಬರಲು ಸಿದ್ಧನಿಲ್ಲ' ಎಂದು ಸ್ಟಾರ್ಮರ್ ಅವರು ಲೇಬರ್ ಪಕ್ಷದ ಸಂಸದರ ಸಭೆಯಲ್ಲಿ ಸ್ಪಷ್ಟಪಡಿಸಿದರು. ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಮ್ಯಾಂಡಲ್ಸನ್ ಅವರ ಹೆಸರು ಕೇಳಿಬಂದ ಬೆನ್ನಲ್ಲೇ ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಅವರನ್ನು ರಾಯಭಾರಿ ಹುದ್ದೆಯಿಂದ ವಜಾಗೊಳಿಸಲಾಗಿತ್ತು.

ಆದರೆ ಅಮೆರಿಕ ಸರ್ಕಾರ ಜನವರಿ 30ರಂದು ಬಿಡುಗಡೆ ಮಾಡಿದ ಎಪ್‌ಸ್ಟೈನ್ ದಾಖಲೆಗಳು ಈ ವಿವಾದಕ್ಕೆ ಮರುಜೀವ ನೀಡಿದೆ. ಮ್ಯಾಂಡಲ್ಸನ್ ಅವರು ಈ ಹಿಂದೆ ಸಚಿವರಾಗಿದ್ದಾಗ ಬ್ರಿಟನ್ ಸರ್ಕಾರದ ಗೋಪ್ಯ ಮಾಹಿತಿಗಳನ್ನು ಎಪ್‌ಸ್ಟೈನ್‌ಗೆ ಸೋರಿಕೆ ಮಾಡಿರುವುದು ದಾಖಲೆಗಳಿಂದ ಬಹಿರಂಗವಾಗಿದೆ. 72 ವರ್ಷದ ಮ್ಯಾಂಡಲ್ಸನ್ ವಿರುದ್ಧ ಪೊಲೀಸರು ತನಿಖೆ ಆರಂಭಿಸಿದ್ದರೂ, ಅವರನ್ನು ಇನ್ನೂ ಬಂಧಿಸಿಲ್ಲ.

ಸ್ಟಾರ್ಮರ್ ಅವರು ರಾಜೀನಾಮೆ ನೀಡಿದರೆ ಏಂಜೆಲಾ ರೇಯ್ನರ್ ಅಥವಾ ಗೃಹ ಕಾರ್ಯದರ್ಶಿ ಶಬಾನಾ ಮಹಮೂದ್ ಅವರು ಮುಂದಿನ ಪ್ರಧಾನಿಯಾಗುವರು ಎಂಬ ಊಹಾಪೋಹ ಎದ್ದಿತ್ತು. ಆದರೆ, ಇವರಿಬ್ಬರು ಸ್ಟಾರ್ಮರ್ ಅವರಿಗೆ 'ಪೂರ್ಣ ಬೆಂಬಲ' ನೀಡುತ್ತೇವೆ ಎಂದಿದ್ದಾರೆ.

ಕೃಷಿ ಉತ್ಪನ್ನಕ್ಕೆ ಸುಂಕ ಕಡಿತ?

ಒಂದನೇ ಪುಟದಿಂದ...

ಅಮೆರಿಕದ ಕೈಗಾರಿಕಾ ಸರಕುಗಳ ಮೇಲಿನ ತೆರಿಗೆಯನ್ನೂ ಭಾರತ ಕಡಿತ ಮಾಡಬಹುದು ಎಂದು ಫ್ಯಾಕ್ಟ್ ಶೀಟ್‌ನಲ್ಲಿ ಹೇಳಲಾಗಿದೆ.

'ಬಿಟಿಎ' ಅಂತಿಮಗೊಂಡ ನಂತರ ಭಾರತದ ಕೆಲವು ಸರಕುಗಳು ಸುಂಕ ರಹಿತವಾಗಿ ಅಮೆರಿಕದ ಮಾರುಕಟ್ಟೆ ಹಾಗೂ ಅಮೆರಿಕದ ಕೃಷಿ ಉತ್ಪನ್ನಗಳು ಭಾರತದ ಮಾರುಕಟ್ಟೆ ಪ್ರವೇಶಿಸಲಿವೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವ್ಯಾಪಾರ ಒಪ್ಪಂದ ಅಂತಿಮಗೊಳ್ಳುವ ಮುನ್ನ 'ಹೂಡಿಕೆ, ಸೇವೆ, ಕಾರ್ಮಿಕ ವಲಯ, ತಾಂತ್ರಿಕ ಅಡೆತಡೆ, ಭೌತಿಕ ಆಸ್ತಿ, ಕಸ್ಟಮ್ಸ್, ಸರಕುಗಳ ಸಂಗ್ರಹ, ವ್ಯಾಪಾರ ಅಕ್ರಮ ತಡೆ ಸೇರಿದಂತೆ ಕೆಲವು ವಿಷಯಗಳು ಇತ್ಯರ್ಥವಾಗಬೇಕಿವೆ. ಆ ನಿಟ್ಟಿನಲ್ಲಿ ಉಭಯ ದೇಶಗಳು ಮಾತುಕತೆಯಲ್ಲಿ ತೊಡಗಿದ್ದು, ಕೆಲವೇ ವಾರಗಳಲ್ಲಿ ಒಪ್ಪಂದ ಅಂತಿಮಗೊಳ್ಳಲಿದೆ. ಈ ಒಪ್ಪಂದವು ಉಭಯ ದೇಶಗಳಿಗೆ ದೊಡ್ಡ ಮಟ್ಟದಲ್ಲಿ ಪ್ರಯೋಜನಕಾರಿಯಾಗಲಿದೆ' ಎಂದು ಶ್ವೇತಭವನದ ಪ್ರಕಟಣೆ ತಿಳಿಸಿದೆ.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗರಾಜು, ವಿಶ್ವೇಶ್ವರಯ್ಯ ಲೇಔಟ್, ಬೆಂಗಳೂರು

- **ಪ್ರಶ್ನೆ: ನಾನು ಕಳೆದ 5-6 ವರ್ಷಗಳಿಂದ ಮಾಸಿಕ ಎಸ್‌ಐಪಿ ಮೂಲಕ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡುತ್ತಿದ್ದೇನೆ. ಪ್ರಸ್ತುತ ನನ್ನ ಒಟ್ಟು ಹೂಡಿಕೆ ಮೊತ್ತ ಸುಮಾರು ₹10 ಲಕ್ಷ. ಈ ಹೂಡಿಕೆಗಳಲ್ಲಿನ ಕೆಲವು ಫಂಡ್‌ಗಳು ಲಾಭದಲ್ಲಿದ್ದರೆ, ಕೆಲವು ಫಂಡ್‌ಗಳು ಯಾವುದೇ ದೊಡ್ಡ ಲಾಭ ಅಥವಾ ನಷ್ಟ ತೋರಿಸದೆ ಇವೆ. ಇನ್ನೂ ಕೆಲವು ಫಂಡ್‌ಗಳು ನಷ್ಟದಲ್ಲಿವೆ. ಒಟ್ಟಾರೆ ಪರಿಗಣಿಸಿದರೆ, ನನ್ನ ಹೂಡಿಕೆಗಳಿಂದ ದೊರಕಿರುವ ಸರಾಸರಿ ವಾರ್ಷಿಕ ಲಾಭ ಸುಮಾರು ಶೇ 6ರಷ್ಟು.**
ನಿಯಮಿತ ಎಸ್‌ಐಪಿ ಹೂಡಿಕೆಯಾದರೂ, ದೊರಕುತ್ತಿರುವ ಲಾಭವು ಬ್ಯಾಂಕ್ ನಿಶ್ಚಿತ ಠೇವಣಿ, ಅಂಚೆ ಕಚೇರಿ ಉಳಿತಾಯ ಯೋಜನೆಗಳು ಅಥವಾ ಸರ್ಕಾರಿ ಬಾಂಡ್‌ಗಳಂತಹ ಹೂಡಿಕೆಯಿಂದ ದೊರಕುವ ಅಪಾಯರಹಿತ ಬಡ್ಡಿದರಕ್ಕೆ ಸಮಾನವಾಗಿರುವುದು ನನಗೆ ಆತಂಕ ಉಂಟುಮಾಡುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ, ಮ್ಯೂಚುವಲ್ ಫಂಡ್‌ಗಳಲ್ಲಿ ಪ್ರತಿ ತಿಂಗಳೂ ಹೂಡಿಕೆ ಮಾಡುತ್ತಾ ಮುಂದುವರಿಸುವುದು ಯುಕ್ತವೇ? ಅಥವಾ ಈಗಿರುವ ಹೂಡಿಕೆಯನ್ನು ಸಂಪೂರ್ಣ ಹಿಂಪಡೆದು ಸುರಕ್ಷಿತ ಮತ್ತು ಸ್ಥಿರ ಆದಾಯ ನೀಡುವ ಯೋಜನೆಗಳಲ್ಲಿ ಹೂಡಿಕೆ ಉತ್ತಮವೇ?

ಉತ್ತರ: ಮ್ಯೂಚುವಲ್ ಫಂಡ್ ಎಸ್‌ಐಪಿ ಹೂಡಿಕೆಗಳ ಬಗ್ಗೆ ಈ ರೀತಿಯ ಸಂದೇಹಗಳು ಬಹುತೇಕ ಹೂಡಿಕೆದಾರರಿಗೆ ಸಹಜ. ಕಳೆದ ಕೆಲವು ವರ್ಷಗಳಲ್ಲಿ ಮಾರುಕಟ್ಟೆಯ ಏರಿಳಿತಗಳು, ಕೋವಿಡ್ ನಂತರದ ಅನಿಶ್ಚಿತತೆ, ಜಾಗತಿಕ ಆರ್ಥಿಕ ಪರಿಸ್ಥಿತಿಗಳ ಪ್ರಭಾವ ಇತ್ಯಾದಿಗಳ ಕಾರಣದಿಂದ ಅನೇಕ ಹೂಡಿಕೆಗಳ ಲಾಭ ನಿರೀಕ್ಷಿತ ಮಟ್ಟದಲ್ಲಿ ಕಾಣಿಸದೇ ಇರಬಹುದು. ಇದು ಹೂಡಿಕೆ ಮಾಡಿದ ದಿನದ ಮಾರುಕಟ್ಟೆ ಪರಿಸ್ಥಿತಿ ಹಾಗೂ ಹೂಡಿಕೆ ಮಾಡಿದ ಫಂಡ್ ವರ್ಗ ಯಾವುದು ಎನ್ನುವುದರ ಆಧಾರದ ಮೇಲೆ ನಿರ್ಣಯವಾಗುತ್ತದೆ. ಆದರೆ ನಿಮಗೆ ಕೇವಲ ಬ್ಯಾಂಕ್ ಬಡ್ಡಿಗೆ ಸಮನಾದ ಸರಾಸರಿ ಆದಾಯ ಬಂದಿದೆ ಎನ್ನುವ ಕಾರಣಕ್ಕೆ ಎಸ್‌ಐಪಿ ಹೂಡಿಕೆಯ ಬೇಡವೆಂದು ನಿರ್ಧರಿಸುವುದು ಸರಿಯಲ್ಲ.

ಎಸ್‌ಐಪಿ ಹೂಡಿಕೆಯ ಶಕ್ತಿ ಅದರ ದೀರ್ಘಾವಧಿಯ ದೃಷ್ಟಿಕೋನದಲ್ಲಿದೆ. ನಿಶ್ಚಿತ ಠೇವಣಿ ಅಥವಾ ಸರ್ಕಾರಿ ಯೋಜನೆಗಳು ಸುರಕ್ಷಿತ ಆದಾಯ ನೀಡುತ್ತವೆ ಎಂಬುದು ನಿಜವಾದರೂ, ಅವುಗಳ ಬಡ್ಡಿದರ ದೀರ್ಘಾವಧಿಯಲ್ಲಿ ಹಣದುಬ್ಬರ ಪ್ರಮಾಣವನ್ನು ಮೀರುವಲ್ಲಿ ಬಹುಮಟ್ಟಿಗೆ ವಿಫಲವಾಗುತ್ತವೆ. ಹೂಡಿಕೆದಾರರಿಗಿರುವ ಆರ್ಥಿಕ ವಿಚಾರಗಳ ಅರಿವು ಹಾಗೂ ಅವರ ನಷ್ಟ ಭರಿಸುವ ಆರ್ಥಿಕ ಕ್ಷಮತೆಯ ಆಧಾರದ ಮೇಲೆ ಹೇಳುವುದಾದರೆ, ಮ್ಯೂಚುವಲ್ ಫಂಡ್‌ಗಳು ದೀರ್ಘಾವಧಿಯಲ್ಲಿ ಉತ್ತಮ ಲಾಭ ಸೃಷ್ಟಿಸುವ ಹೂಡಿಕೆ ಮಾಧ್ಯಮ ಎಂಬುದು ಸ್ಪಷ್ಟ.

ಹೂಡಿಕೆದಾರರು ವರ್ಷಗಟ್ಟಲೆ ಒಂದೇ ಫಂಡ್‌ಗಳಲ್ಲಿ ಹೂಡಿಕೆ ಮುಂದುವರಿಸುವುದಕ್ಕಿಂತ, ಪ್ರತಿ ಮೂರು ತಿಂಗಳಿಗೊಮ್ಮೆ ಹೂಡಿಕೆಗಳ ಗುಣಮಟ್ಟ ಪರಿಶೀಲಿಸುವುದು ಅಗತ್ಯ. ನಿರಂತರವಾಗಿ ಕಡಿಮೆ ಲಾಭ ನೀಡುತ್ತಿರುವ ಫಂಡ್‌ಗಳನ್ನು ಬದಲಿಸಿ, ಉತ್ತಮ ಗುಣಮಟ್ಟದ ಹಾಗೂ ನಿಮ್ಮ ಗುರಿಗೆ ಹೊಂದುವ ಫಂಡ್ ಆಯ್ಕೆ ಮುಖ್ಯ. ಇದಕ್ಕೆ ಅನುಭವದ ಕೊರತೆ ಇದ್ದರೆ, ನುರಿತ ಹೂಡಿಕೆ ಸಲಹೆಗಾರರನ್ನು ಸಂಪರ್ಕಿಸಿ.

ಎಸ್‌ಐಪಿ ಮೂಲಕ ಹೂಡಿಕೆ ಮಾಡಿದಾಗ ಮಾರುಕಟ್ಟೆಯ ಏರಿಳಿತಗಳ ಪ್ರಭಾವ ಕಡಿಮೆಯಾಗುತ್ತದೆ. ಇದರಿಂದ ದೀರ್ಘಾವಧಿಯಲ್ಲಿ ಉತ್ತಮ ಸರಾಸರಿ ದರದಲ್ಲಿ ಯೂನಿಟ್‌ಗಳು ದೊರೆಯುತ್ತವೆ. ಆದ್ದರಿಂದ, ಹೂಡಿಕೆಗಳನ್ನು ಸಂಪೂರ್ಣವಾಗಿ ನಿಲ್ಲಿಸುವ ಬದಲು ದೀರ್ಘಾವಧಿ ಹೂಡಿಕೆಯಲ್ಲಿ ಭರವಸೆ ಇರಿಸಿದರೆ, ನಿಶ್ಚಿತ ಠೇವಣಿಗಳಿಗಿಂತ ಉತ್ತಮ ಲಾಭ ದೊರೆಯುವ ಸಾಧ್ಯತೆ ಹೆಚ್ಚು.

ಜಿತೇಂದ್ರ, ಮಂಗಳೂರು

- **ಪ್ರಶ್ನೆ: ನಾನು ಸೀಮಿತ ಆದಾಯ ಹೊಂದಿರುವ ತೆರಿಗೆದಾರ. ನನ್ನ ಆದಾಯವು ಮುಖ್ಯವಾಗಿ ವೇತನ, ಬಡ್ಡಿ ಮತ್ತು ಕೆಲವೊಮ್ಮೆ ಷೇರು ಹಾಗೂ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆ ವ್ಯವಹಾರಗಳಿಂದ ಬಂದಿರುತ್ತದೆ. ನಾನು ಹೊಸ ತೆರಿಗೆ ಪದ್ಧತಿಯನ್ನು ಅನುಸರಿಸುತ್ತಿದ್ದೇನೆ. ಕಳೆದ ಸಾಲಿನ ಬಜೆಟ್ ಪ್ರಕಾರ, ಆರ್ಥಿಕ ವರ್ಷ 2025-26ರಿಂದ ಹೊಸ ತೆರಿಗೆ ವ್ಯವಸ್ಥೆಯಡಿ ₹12 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇಲ್ಲ.**
ಈ ಹಿನ್ನೆಲೆಯಲ್ಲಿ ನನ್ನ ಪ್ರಶ್ನೆ ಏನೆಂದರೆ, ಷೇರುಗಳು ಮತ್ತು ಮ್ಯೂಚುವಲ್ ಫಂಡ್‌ಗಳ ಮಾರಾಟದಿಂದ ಉಂಟಾಗುವ ಬಂಡವಾಳ ವೃದ್ಧಿ ಆದಾಯವೂ ಒಟ್ಟಾರೆ ₹12 ಲಕ್ಷದ ವ್ಯಾಪ್ತಿಗೆ ಒಳಪಡುವುದೇ? ಪ್ರಸ್ತುತ ಅಂದಾಜು ಪ್ರಕಾರ, ಈ ರೀತಿಯ ನನ್ನ ಆದಾಯವು ಸುಮಾರು ₹3 ಲಕ್ಷದಷ್ಟಿದೆ. ಈ ಆದಾಯವೂ ವಿನಾಯಿತಿಯೊಳಗೆ ಇದ್ದರೆ, ತೆರಿಗೆ ಯೋಜನೆಯ ದೃಷ್ಟಿಯಿಂದ ಮಹತ್ವದ್ದಾಗುತ್ತದೆ.

ಉತ್ತರ: ಕಳೆದ ವರ್ಷದ ಬಜೆಟ್‌ನಲ್ಲಿ, ಹೊಸ ತೆರಿಗೆ ಪದ್ಧತಿ ಆಯ್ಕೆ ಮಾಡಿದವರಿಗೆ ಆರ್ಥಿಕ ವರ್ಷ 2025-26ರಿಂದ ₹12 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ ಘೋಷಿಸಲಾಗಿತ್ತು. ಆದರೆ ಈ ವಿನಾಯಿತಿಯ ವ್ಯಾಪ್ತಿ ಎಲ್ಲ ವಿಧದ ಆದಾಯಗಳಿಗೆ ಸಮಾನವಾಗಿ ಅನ್ವಯವಾಗುವುದಿಲ್ಲ ಎಂಬುದನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಆದಾಯ ತೆರಿಗೆ ಕಾಯ್ದೆ-1961ರ ಪ್ರಕಾರ, ವೇತನ, ಬಡ್ಡಿ ಆದಾಯ ಮತ್ತು ಇತರ ಸಾಮಾನ್ಯ ಆದಾಯಗಳು ಸ್ಲ್ಯಾಬ್ ದರಗಳ ಅಡಿ ತೆರಿಗೆಗೆ ಒಳಪಡುತ್ತವೆ. ಈ ಸ್ಲ್ಯಾಬ್ ಆದಾಯಗಳಿಗೆ ಮಾತ್ರವೇ ಸೆಕ್ಷನ್ 115 ಬಿಎಸಿ ಅಡಿಯಲ್ಲಿ ಹೊಸ ತೆರಿಗೆ ವ್ಯವಸ್ಥೆಯ ₹12 ಲಕ್ಷದ ವಿನಾಯಿತಿ ಹಾಗೂ ಸೆಕ್ಷನ್ 87ಎ ಅಡಿಯ ರಿಬೇಟ್ ಅನ್ವಯವಾಗುತ್ತದೆ.

ಷೇರುಗಳು ಮತ್ತು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳ ಮಾರಾಟದಿಂದ ಉಂಟಾಗುವ ಬಂಡವಾಳ ವೃದ್ಧಿಯ ಆದಾಯಕ್ಕೆ ವಿಶೇಷವಾಗಿ ಪ್ರತ್ಯೇಕ ತೆರಿಗೆ ದರ ನಿಗದಿಪಡಿಸಲಾಗಿದೆ. ಈಕ್ವಿಟಿ ಷೇರುಗಳು ಮತ್ತು ಈಕ್ವಿಟಿ ಆಧಾರಿತ ಮ್ಯೂಚುವಲ್ ಫಂಡ್‌ಗಳ ಅಲ್ಪಾವಧಿ ಬಂಡವಾಳ ವೃದ್ಧಿಗೆ ಸೆಕ್ಷನ್ 111ಎ ಅಡಿಯಲ್ಲಿ ಶೇ 20ರ ವಿಶೇಷ ದರದಲ್ಲಿ ತೆರಿಗೆ ವಿಧಿಸಲಾಗುತ್ತದೆ. ಅದೇ ರೀತಿ, ದೀರ್ಘಾವಧಿ ಬಂಡವಾಳ ವೃದ್ಧಿಗೆ ಸೆಕ್ಷನ್ 112ಎ ಅನ್ವಯಿಸುತ್ತದೆ, ವಾರ್ಷಿಕ ₹1.25 ಲಕ್ಷಕ್ಕೂ ಹೆಚ್ಚಿನ ಮೊತ್ತದ ಲಾಭಕ್ಕೆ ಶೇ 12.5ರ ತೆರಿಗೆ ಅನ್ವಯಿಸುತ್ತದೆ.

ಈ ರೀತಿಯ ವಿಶೇಷ ದರದ ಅಡಿ ತೆರಿಗೆಗೆ ಒಳಪಡುವ ಬಂಡವಾಳ ವೃದ್ಧಿ ಆದಾಯವನ್ನು ₹12 ಲಕ್ಷದ ಮೂಲ ವಿನಾಯಿತಿಯೊಳಗೆ ಸೇರಿಸಿ ಸಂಪೂರ್ಣವಾಗಿ ತೆರಿಗೆ ಮುಕ್ತಗೊಳಿಸಲು ಹಾಗೂ ರಿಬೇಟ್ ಪಡೆಯಲು ಅವಕಾಶವಿಲ್ಲ. ತೆರಿಗೆ ಯೋಜನೆಯ ದೃಷ್ಟಿಯಿಂದ, ಈ ವ್ಯತ್ಯಾಸವನ್ನು ಮುಂಚಿತವಾಗಿಯೇ ಪರಿಗಣಿಸುವುದು ಅಗತ್ಯ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮಗಾಂಧಿ ರಸ್ತೆ, ಬೆಂಗಳೂರು-560001. ಇ-ಮೇಲ್: businessdesk@prajavani.co.in



ಫೆ.27ಕ್ಕೆ ಸೂಪರ್ ಹಿಟ್ ತೆರೆಗೆ

ಸಿನಿಮಾಗಳು ಯಶಸ್ವಿಯಾದರೆ 'ಸೂಪರ್ ಹಿಟ್' ಎನ್ನುತ್ತಾರೆ. ಆದರೆ ಆ ಪದವನ್ನೇ ಶೀರ್ಷಿಕೆಯಾಗಿಸಿಕೊಂಡಿರುವ ಚಿತ್ರವೊಂದು ತೆರೆಗೆ ಬರಲು ಸಜ್ಜಾಗಿದೆ. ಬಿಗ್‌ಬಾಸ್ ಖ್ಯಾತಿಯ ಗಿಲ್ಲಿ ನಾಯಕನಾಗಿ ನಟಿಸಿರುವ ಚಿತ್ರ ಫೆಬ್ರುವರಿ 27ರಂದು ತೆರೆಗೆ ಬರಲಿದೆ. ವಿಜಯಾನಂದ್ ಆ್ಯಕ್ಷನ್ ಕಟ್ ಹೇಳಿರುವ ಚಿತ್ರದ ಬಿಡುಗಡೆ ದಿನಾಂಕ ಘೋಷಿಸುವ ವಿಶೇಷ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ.

'ಕಾಮಿಡಿ, ಥ್ರಿಲ್ಲರ್ ಜಾನರ್‌ನ ಸಿನಿಮಾ. ಸಿನಿಮಾವೊಂದು ಬಿಡುಗಡೆಯಾದ ನಂತರ ಸೂಪರ್ ಹಿಟ್ ಆಗುವುದು ವಾಡಿಕೆ. ಆದರೆ, ಈ ಸಿನಿಮಾದ ಶೀರ್ಷಿಕೆಯೇ ಸೂಪರ್ ಹಿಟ್. ರನ್ನಿಂಗ್ ಸಕ್ಸಸ್‌ಫುಲಿ ಎಂಬ ಟ್ಯಾಗ್ ಲೈನ್ ಇದೆ. ಏಕೆ ಈ ಶೀರ್ಷಿಕೆ ಇಡಲಾಗಿದೆ ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು. ಇಡಿ ಸಿನಿಮಾ ಆರಂಭದಿಂದ ಕೊನೆಯವರೆಗೂ ಪ್ರತಿ ಹತ್ತು ನಿಮಿಷಕ್ಕೊಮ್ಮೆ ಪ್ರೇಕ್ಷಕರನ್ನು ಬೆರಗಾಗಿಸುವಂಥ ಅಂಶಗಳು, ತಿರುವುಗಳನ್ನು ಹೊಂದಿದೆ. ಕನ್ನಡ ಚಿತ್ರರಂಗದಲ್ಲೇ ಮೊದಲ ಬಾರಿ ಥ್ರಿಲ್ಲರ್, ಕಾಮಿಡಿ ಜಾನರ್‌ನ ಸಿನಿಮಾ ಯತ್ನಿಸಿದ್ದೇವೆ' ಎಂದರು ನಿರ್ದೇಶಕ.

ಜಿ.ಉಮೇಶ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ಗೌರವ್ ಶೆಟ್ಟಿ ಮತ್ತು ಗಿಲ್ಲಿ ನಟ ನಾಯಕರಾಗಿ ನಟಿಸಿದ್ದಾರೆ. ಶ್ವೇತಾ ನಾಯಕಿಯಾಗಿ ಜೊತೆಯಾಗಿದ್ದಾರೆ. ನಾಗೇಂದ್ರ ಪ್ರಸಾದ್ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಆರ್‌.ಡಿ ನಾಗಾರ್ಜುನ ಛಾಯಾಚಿತ್ರಗ್ರಹಣ, ಶ್ರೀಕಾಂತ್ ಸಂಕಲನ, ವಿ. ನಾಗೇಂದ್ರ ಪ್ರಸಾದ್ ಸಾಹಿತ್ಯ ಮತ್ತು ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಡ್ರ್ಯಾಗನ್ ಮಂಜು, ಸಾಧು ಕೋಕಿಲ, ಸೀನು ಭಾಯ್, ನಾಗವರ್ಧನ್, ಪ್ರಮೋದ್ ಶೆಟ್ಟಿ, ಜೀಜಿ, ಗಿರಿ, ಟೆನಿಸ್ ಕೃಷ್ಣ, ಕರಿಸುಬ್ಬು ಮುಂತಾದವರು ಚಿತ್ರದಲ್ಲಿದ್ದಾರೆ.

ಎವರಿಬಡಿ ವಾಂಟ್ಸ್ ದಿಸ್ ಎಂದ ಹೊಸಬರು

ಬಹುತೇಕ ಹೊಸಬರಿಂದಲೇ 'ಎವರಿಬಡಿ ವಾಂಟ್ಸ್ ದಿಸ್' ಚಿತ್ರದ 'ವಿಭಿನ್ನ ಅಲೆಗಳ' ಎಂಬ ಹಾಡು ಇತ್ತೀಚೆಗಷ್ಟೆ ಬಿಡುಗಡೆಗೊಂಡಿದೆ. ನಹೇಶ್ ಪೋಲ್ ಈ ಚಿತ್ರದ ನಿರ್ದೇಶನದ ಜತೆಗೆ ನಾಯಕನಾಗಿಯೂ ನಟಿಸಿದ್ದಾರೆ.

'ನಮ್ಮ ನಿರ್ಮಾಣ ಸಂಸ್ಥೆಯಿಂದ 2026ರಲ್ಲಿ ಮೂರು ಸಿನಿಮಾಗಳನ್ನು ನಿರ್ಮಾಣ ಮಾಡುವ ಗುರಿ ಹೊಂದಿದ್ದೇವೆ. 'ಎವರಿಬಡಿ ವಾಂಟ್ಸ್ ದಿಸ್' ತೊಂಬತ್ತು ನಿಮಿಷಗಳ ಅವಧಿಯ ಸಿನಿಮಾ. ದುಡ್ಡಿನ ಆಸೆಗಾಗಿ ವಜ್ರ ದರೋಡೆ ಮಾಡಿದಾಗ, ಅದರಿಂದಾಗುವ ಅನಾಹುತಗಳನ್ನು ಕಾಮಿಡಿ ಹಾಗೂ ಥ್ರಿಲ್ಲರ್ ಮಾದರಿಯಲ್ಲಿ ಹೇಳಿದ್ದೇವೆ. ಶೀಘ್ರದಲ್ಲಿಯೇ ಚಿತ್ರ ತೆರೆಗೆ ಬರಲಿದೆ' ಎಂದರು ನಿರ್ದೇಶಕ.

ರ್‍ಯಾಡಿಕಲ್ ಕಾನ್ಸೆಪ್ಟ್ ಸ್ಟುಡಿಯೊ ಬಂಡವಾಳ ಹೂಡಿದೆ. ಚಿತ್ರಕ್ಕೆ ನಿರ್ದೇಶಕರೇ ಸಂಗೀತ ನೀಡಿದ್ದಾರೆ. ಚಿತ್ರದಲ್ಲಿ ಒಟ್ಟು ಆರು ಹಾಡುಗಳಿವೆ. 'ವಿಭಿನ್ನ ಅಲೆಗಳ' ಹಾಡು ಕನ್ನಡ, ಇಂಗ್ಲೀಷ್, ಹಿಂದಿ, ತೆಲುಗು ಮತ್ತು ತಮಿಳು ಭಾಷೆಗಳಲ್ಲಿ ಬಿಡುಗಡೆಗೊಂಡಿದೆ. ಸಾಗರ್ ಮೂರ್ತಿ ಛಾಯಾಚಿತ್ರಗ್ರಹಣವಿದೆ. ಅಕ್ಷರ ಸುರೇಶ್ ನಾಯಕಿ.



ಅಕ್ಷರ ಸುರೇಶ್



ಯಶ್

ಫಾರ್ಸ್‌ನಿಂದ ವಿದೇಶಗಳಲ್ಲಿ 'ಟಾಕ್ಸಿಕ್' ವಿತರಣೆ

ಯುಎಇ ಮೂಲದ ಫಾರ್ಸ್ ಫಿಲ್ಮ್ಸ್ ಯಶ್ ಅಭಿನಯದ 'ಟಾಕ್ಸಿಕ್' ಚಿತ್ರದ ಸಾಗರೋತ್ತರ ವಿತರಣೆ ಹಕ್ಕನ್ನು ದಾಖಲೆ ಮೊತ್ತಕ್ಕೆ ಖರೀದಿಸಿದೆ ಎಂದು ಚಿತ್ರ ನಿರ್ಮಾಣ ಸಂಸ್ಥೆ ಕೆವಿಎನ್ ಪ್ರೊಡಕ್ಷನ್ ಹೇಳಿದೆ.

ಗೀತು ಮೋಹನ್‌ದಾಸ್ ನಿರ್ದೇಶನದ ಚಿತ್ರ ಮಾರ್ಚ್.19ರಂದು ತೆರೆ ಕಾಣಲಿದೆ. ಫಾರ್ಸ್ ಫಿಲ್ಮ್ಸ್ ವಿದೇಶಗಳಲ್ಲಿ 'ಟಾಕ್ಸಿಕ್' ಚಿತ್ರವನ್ನು ಭಾರತೀಯ ಭಾಷೆಗಳಲ್ಲಿ ಬಿಡುಗಡೆ ಮಾಡಲಿದೆ. ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಸಿನಿಮಾ ನಿರ್ಮಾಣಗೊಂಡಿದ್ದು, ಇಂಗ್ಲಿಷ್ ಆವೃತಿಯ ಹಕ್ಕನ್ನು ಕೆವಿಎನ್ ಸಂಸ್ಥೆ ಉಳಿಸಿಕೊಂಡಿದೆ. 'ಈ ಒಪ್ಪಂದದಂತೆ ವಿದೇಶಗಳಲ್ಲಿ ಕನ್ನಡ, ಹಿಂದಿ, ತೆಲುಗು, ತಮಿಳು, ಮಲಯಾಳ ಭಾಷೆಗಳಲ್ಲಿ ಚಿತ್ರ ಬಿಡುಗಡೆಗೆ ₹105 ಕೋಟಿ ಮುಂಗಡ ಪಾವತಿಸಿ ಫಾರ್ಸ್ ಫಿಲ್ಮ್ಸ್ ಹಕ್ಕನ್ನು ಖರೀದಿಸಿದೆ. ಇದು ಭಾರತೀಯ ಚಿತ್ರೋದ್ಯಮದಲ್ಲಿ ಬೃಹತ್ ಮೊತ್ತದ ವಹಿವಾಟು. ಭಾರತದಲ್ಲಿ ಬೇರೆ, ಬೇರೆ ಭಾಷೆಯ ವಿತರಣೆ ಹಕ್ಕನ್ನು ಸ್ಥಳೀಯ ವಿತರಣಾ ಸಂಸ್ಥೆಗಳು ಖರೀದಿಸಿವೆ' ಎಂದು ಕೆವಿಎನ್‌ನ ಸುಪ್ರೀತ್ ಹೇಳಿದ್ದಾರೆ.

ಚಿತ್ರದಲ್ಲಿ ಮೆಲಿಸಾ ಆಗಿ ರುಕ್ಮಿಣಿ ವಸಂತ್ ಕಾಣಿಸಿಕೊಂಡಿದ್ದಾರೆ. ಕಿಯಾರಾ ಅಡ್ವಾಣಿ, ನಯನತಾರಾ, ಹುಮಾ ಖುರೇಷಿ, ತಾರಾ ಸುತಾರಿಯಾ ಕೂಡ ನಟಿಸಿದ್ದಾರೆ.

ಗೋವಾದಲ್ಲಿನ ಡ್ರಗ್ಸ್ ಮಾಫಿಯಾದ ಕಥೆಯನ್ನು ಚಿತ್ರ ಹೊಂದಿದೆ. ಕೆವಿಎನ್ ಸಂಸ್ಥೆ ಬಂಡವಾಳ ಹೂಡಿದೆ. ಯಶ್ ಅವರು ತಮ್ಮ ಮಾನ್‌ಸ್ಟರ್ ಮೈಂಡ್ ನಿರ್ಮಾಣ ಸಂಸ್ಥೆಯ ಮೂಲಕ ಸಹ ನಿರ್ಮಾಣ ಮಾಡಿದ್ದಾರೆ. ರವಿ ಬಸ್ರೂರು ಸಂಗೀತ, ರಾಜೀವ್ ರವಿ ಛಾಯಾಚಿತ್ರಗ್ರಹಣವಿದೆ.

'ಹೃದಯಂ'ನಲ್ಲಿ ಪೃಥ್ವಿ ಶಾಮನೂರು

ಪೃಥ್ವಿ ಶಾಮನೂರು ನಟನೆಯ 'ಹೃದಯಂ' ಚಿತ್ರ ಇತ್ತೀಚೆಗಷ್ಟೇ ಸೆಟ್ಟೇರಿದೆ. ಯುವ ಸಮುದಾಯದ ಪ್ರೇಮಕಥೆ ಹೊಂದಿರುವ ಚಿತ್ರಕ್ಕೆ ರಜತ್ ಸೂರ್ಯವಂಶಿ ಆ್ಯಕ್ಷನ್–ಕಟ್ ಹೇಳುತ್ತಿದ್ದಾರೆ. ಚಿತ್ರದ ಪ್ರಥಮ ದೃಶ್ಯಕ್ಕೆ ನಟ ನವೀನ್ ಶಂಕರ್ ಕ್ಲಾಪ್ ಮಾಡಿ ಶುಭ ಹಾರೈಸಿದರು. ಯೋಗರಾಜ ಭಟ್, ಗೀತಸಾಹಿತಿ ನಾಗೇಂದ್ರ ಪ್ರಸಾದ್ ಕೂಡ ತಂಡಕ್ಕೆ ಸಾಥ್ ನೀಡಿದರು.

ಪೃಥ್ವಿ ಶಾಮನೂರು ಈ ಹಿಂದೆ 'ಪದವಿಪೂರ್ವ', 'ಉಡಾಳ' ಸಿನಿಮಾಗಳಲ್ಲಿ ನಾಯಕನಾಗಿ ನಟಿಸಿದ್ದರು. ಪ್ರಣೀತ್ ಪಿಕ್ಚರ್ಸ್ ಪ್ರೊಡಕ್ಷನ್ಸ್ ಮೂಲಕ ಶ್ರೀದೇವಿ ಎಲ್‌.ಕೆ. ಅವರು ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ.

'ಕಳೆದ ಹನ್ನೆರಡು ವರ್ಷಗಳಿಂದ ನಾನು ನಂದಕಿಶೋರ್ ಜತೆ 'ವಿಕ್ಟರಿ', 'ಅಧ್ಯಕ್ಷ' ಮೊದಲಾದ ಚಿತ್ರಗಳಲ್ಲಿ ಸಹಾಯಕ ನಿರ್ದೇಶಕನಾಗಿ ಕೆಲಸ ಮಾಡಿದ್ದೇನೆ. ನನ್ನ ನಿರ್ದೇಶನದ ಮೊದಲ ಚಿತ್ರವಿದು. ಇದೊಂದು ಮನಸಿಗೆ ಮುದ ನೀಡುವ ಪ್ರೇಮಕಥೆ. ನೈಜ ಘಟನೆಯೊಂದನ್ನಾಧರಿಸಿದ ಚಿತ್ರ. 2000-2006ರ ಸಮಯದಲ್ಲಿ ಕಾಲೇಜೊಂದರಲ್ಲಿ ನಡೆದ ಪ್ರೇಮಕಥೆಯನ್ನು ಈ ಚಿತ್ರದ ಮೂಲಕ ಹೇಳಹೊರಟಿದ್ದೇವೆ. ಆ ಕಾಲದಲ್ಲಿ ಕಾಲೇಜು ವಿದ್ಯಾರ್ಥಿಗಳ ನಡುವೆ ಪ್ರೀತಿ, ಪ್ರೇಮದ ಪ್ರಕರಣಗಳು ಹೇಗೆಲ್ಲ ನಡೆಯುತ್ತಿತ್ತು ಎಂಬುದನ್ನು ಈ ಚಿತ್ರದಲ್ಲಿ ತೋರಿಸುತ್ತಿದ್ದೇವೆ. ಮಾರ್ಚ್ ಮೊದಲ ವಾರದಿಂದ ಬೆಂಗಳೂರು, ಮೈಸೂರು, ಮಂಗಳೂರು, ಮಡಿಕೇರಿ ಹಾಗೂ ಕೇರಳಗಳಲ್ಲಿ ಚಿತ್ರೀಕರಣ ನಡೆಸುವ ಯೋಜನೆಯಿದೆ' ಎಂದರು ನಿರ್ದೇಶಕ.

ಚಿತ್ರದಲ್ಲಿ ಐದು ಹಾಡುಗಳಿದ್ದು ಚೇತನ್ ದಾವ್ಯ ಸಂಗೀತ ನಿರ್ದೇಶನವಿದೆ. ಚಿತ್ರದ ನಾಯಕಿಯಾಗಿ ಆರಾಧನಾ ಭಟ್, ನಾಯಕಿಯ ತಂದೆಯಾಗಿ ರಮೇಶ್ ಇಂದಿರಾ, ನಾಯಕನ ತಂದೆ, ತಾಯಿಯಾಗಿ ರವಿಭಟ್, ಸ್ವಾತಿ ನಟಿಸುತ್ತಿದ್ದಾರೆ. ಸಾಗರ್ ಛಾಯಾಚಿತ್ರಗ್ರಹಣ, ನಾಗೇಂದ್ರ ಪ್ರಸಾದ್, ಪ್ರಮೋದ್ ಮರವಂತೆ, ಧನಂಜಯ್ ಅವರ ಸಾಹಿತ್ಯ ಈ ಚಿತ್ರಕ್ಕಿದೆ.



ಪೃಥ್ವಿ ಶಾಮನೂರು, ಆರಾಧನಾ ಭಟ್

ಬಿರ್ಲಾ ಪದಚ್ಯುತಿ: ವಿಪಕ್ಷಗಳ ನೋಟಿಸ್

ಪಕ್ಷಪಾತ ಹಾಗೂ ಸಾಂವಿಧಾನಿಕ ಹುದ್ದೆಯ ದುರ್ಬಳಕೆ ಆರೋಪ ಲೋಕಸಭೆಯ ಪ್ರಧಾನ ಕಾರ್ಯದರ್ಶಿಗೆ ಸಲ್ಲಿಕೆ

ನವದೆಹಲಿ(ಪಿಟಿಐ): ಲೋಕಸಭಾ ಸ್ಪೀಕರ್ ಸ್ಥಾನದಿಂದ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸಲು ನಿರ್ಣಯ ಕೈಗೊಂಡಿರುವ ವಿರೋಧ ಪಕ್ಷಗಳು ಈ ಕುರಿತ ನೋಟಿಸ್ ಅನ್ನು ಮಂಗಳವಾರ ಸಲ್ಲಿಸಿವೆ.

ಲೋಕಸಭೆಯಲ್ಲಿ ಕಾಂಗ್ರೆಸ್‌ನ ಉಪನಾಯಕ ಗೌರವ್ ಗೊಗೋಯಿ, ಮುಖ್ಯ ಸಚೇತಕ ಕೆ.ಸುರೇಶ್, ಸಚೇತಕ ಮೊಹಮ್ಮದ್ ಜಾವೇದ್ ಅವರನ್ನು ಒಳಗೊಂಡ ನಿಯೋಗವು, ಸಂವಿಧಾನದ 94(ಸಿ) ವಿಧಿಯಡಿ ಈ ನೋಟಿಸ್ ಅನ್ನು ಲೋಕಸಭೆಯ ಪ್ರಧಾನ ಕಾರ್ಯದರ್ಶಿ ಉತ್ಪಲ್ ಕುಮಾರ್ ಸಿಂಗ್ ಅವರಿಗೆ ಸಲ್ಲಿಸಿದರು.

ಕಾಂಗ್ರೆಸ್, ಸಮಾಜವಾದಿ ಪಕ್ಷ, ಡಿಎಂಕೆ, ಆರ್‌ಜೆಡಿ, ಶಿವಸೇನಾ (ಯುಬಿಟಿ), ಎನ್‌ಸಿಪಿ(ಎಸ್‌ಪಿ) ಹಾಗೂ ಎಡಪಕ್ಷಗಳು ಸೇರಿ ವಿಪಕ್ಷಗಳ 120 ಸಂಸದರು ಈ ನೋಟಿಸ್‌ಗೆ ಸಹಿ ಹಾಕಿದ್ದಾರೆ.

ಕೆಲ ಕಾಂಗ್ರೆಸ್ ಸಂಸದರು ಪ್ರಧಾನಿ ನರೇಂದ್ರ ಮೋದಿ ಅವರ ಆಸನದ ಬಳಿ ತೆರಳಿ, 'ಅನಿರೀಕ್ಷಿತ ಕೃತ್ಯ'ವೆಸಗಲು ಮುಂದಾಗಿದ್ದ ಕುರಿತು ಮಾಹಿತಿ ಇತ್ತು. ಈ ಕಾರಣಕ್ಕೆ ಸದನಕ್ಕೆ ಬಾರದಂತೆ ಮೋದಿ ಅವರಿಗೆ ಮನವಿ ಮಾಡಿದ್ದೆ ಎಂಬ ಬಿರ್ಲಾ ಅವರ ಹೇಳಿಕೆಯನ್ನು ನೋಟಿಸ್‌ನಲ್ಲಿ ಉಲ್ಲೇಖಿಸಲಾಗಿದೆ.

'ಕಾಂಗ್ರೆಸ್ ಪಕ್ಷದ ವಿರುದ್ಧ ಬಿರ್ಲಾ ಅವರ ಈ ಆರೋಪಗಳು ಸಂಪೂರ್ಣ ಸುಳ್ಳು. ಸ್ಪೀಕರ್ ಅವರು ಸಂಸದೀಯ ಶಿಷ್ಟಾಚಾರ ಕಾಪಾಡುವುದು ಹಾಗೂ ನಿಯಮಗಳ ಪಾಲನೆಯ ಜವಾಬ್ದಾರಿ ಹೊತ್ತಿರುವ ಕಸ್ಟೋಡಿಯನ್ ಆಗಿದ್ದಾರೆ. ಆದರೆ, ಇಂತಹ ಆರೋಪಗಳನ್ನು ಹೊರಿಸುವುದಕ್ಕೆ ಅವರು ಸದನವನ್ನು ಬಳಸಿಕೊಂಡಿದ್ದಾರೆ' ಎಂದು ನೋಟಿಸ್‌ನಲ್ಲಿ ವಿವರಿಸಲಾಗಿದೆ.

> **ನೋಟಿಸ್‌ಗೆ ಸಹಿ ಹಾಕುವುದಕ್ಕೆ ಯಾವುದೇ ತೊಂದರೆ ಇಲ್ಲ. ಇಂಥ ಕ್ರಮಕ್ಕೂ ಮೊದಲು ವಿಪಕ್ಷಗಳು ಓಂ ಬಿರ್ಲಾ ಅವರನ್ನು ಭೇಟಿ ಮಾಡಿ ತಮ್ಮ ಅಹವಾಲು ಸಲ್ಲಿಸಬೇಕು. ಮೂರು ದಿನಗಳಲ್ಲಿ ಅವರು ಪರಿಹಾರ ನೀಡದಿದ್ದಲ್ಲಿ ಪದಚ್ಯುತಿಗೊಳಿಸುವ ನಿರ್ಣಯ ಮಂಡಿಸಬಹುದು**
>
> **ಅಭಿಷೇಕ ಬ್ಯಾನರ್ಜಿ,**
> ಲೋಕಸಭೆಯಲ್ಲಿ ಟಿಎಂಸಿ ಸದನ ನಾಯಕ



ಓಂ ಬಿರ್ಲಾ

ವಿರೋಧ ಪಕ್ಷಗಳ ಸಂಸದರು ಸಲ್ಲಿಸಿರುವ ನೋಟಿಸ್ ಪರಿಶೀಲಿಸಿ, ಕ್ರಮ ಕೈಗೊಳ್ಳುವಂತೆ ಲೋಕಸಭಾ ಪ್ರಧಾನ ಕಾರ್ಯದರ್ಶಿ ಅವರಿಗೆ ಓಂ ಬಿರ್ಲಾ ಅವರು ನಿರ್ದೇಶನ ನೀಡಿದ್ದಾರೆ.

'ನೋಟಿಸ್‌ನಲ್ಲಿ ದೋಷ': ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂಬಂಧಿಸಿ ಸಲ್ಲಿಸಿದ್ದ ನೋಟಿಸ್‌ನಲ್ಲಿನ ದೋಷವು ಕಾಂಗ್ರೆಸ್ ಸಂಸದರನ್ನು ಮುಜುಗರಕ್ಕೀಡು ಮಾಡಿತು.

ಕಳೆದ ವಾರ ಲೋಕಸಭೆ ಕಲಾಪದ ವೇಳೆಯಲ್ಲಿನ ಕೆಲ ಘಟನೆಗಳನ್ನು ಉಲ್ಲೇಖಿಸುವಾಗ 2025 ಎಂದು ಬರೆಯಲಾಗಿತ್ತು. ಇದು ಗೊತ್ತಾಗುತ್ತಿದ್ದಂತೆಯೇ, ಹೊಸದಾಗಿ ನೋಟಿಸ್ ಸಿದ್ಧಪಡಿಸಿ ಸಲ್ಲಿಸಿದರು.

ಚರ್ಚೆ ಆರಂಭ: ಕಳೆದ ಹತ್ತು ದಿನಗಳಿಂದ ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವೆ ಆರೋಪ– ಪ್ರತ್ಯಾರೋಪಕ್ಕೆ ಸಾಕ್ಷಿಯಾಗಿದ್ದ ಲೋಕಸಭೆಯಲ್ಲಿ ಮಂಗಳವಾರ ಮಧ್ಯಾಹ್ನದ ನಂತರ ಬಜೆಟ್ ಮೇಲಿನ ಚರ್ಚೆ ಆರಂಭಗೊಂಡಿತು.

ಪ್ರಮುಖ ಅಂಶಗಳು

- ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಈ ನೋಟಿಸ್‌ಗೆ ಸಹಿ ಹಾಕಿಲ್ಲ
- 'ಇಂಡಿಯಾ' ಒಕ್ಕೂಟದ ಅಂಗಪಕ್ಷವಾಗಿರುವ ಟಿಎಂಸಿ ಸಂಸದರು ಕೂಡ ನೋಟಿಸ್‌ಗೆ ಸಹಿ ಮಾಡಿಲ್ಲ
- ರಾಜ್ಯಸಭೆಯಲ್ಲಿ ವಿಪಕ್ಷ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆ ಅವರ ಕಚೇರಿಯಲ್ಲಿ ವಿರೋಧ ಪಕ್ಷಗಳ ನಾಯಕರು ಸಭೆ ನಡಸಿ, ನೋಟಿಸ್ ಸಲ್ಲಿಸುವ ಕುರಿತು ನಿರ್ಧಾರ ಕೈಗೊಂಡಿದ್ದರು.



ಸಂಸತ್‌ನ ಬಜೆಟ್ ಅಧಿವೇಶನದ ಅಂಗವಾಗಿ ಲೋಕಸಭೆಯಲ್ಲಿ ಮಂಗಳವಾರ ನಡೆದ ಕಲಾಪದ ವೇಳೆ ವಿರೋಧ ಪಕ್ಷಗಳ ಸಂಸದರು ಪ್ರತಿಭಟಿಸಿದರು ಪಿಟಿಐ ಚಿತ್ರ

ನೋಟಿಸ್‌ನಲ್ಲಿ ಏನಿದೆ?

- ಕಲಾಪ ನಡೆಸುವ ವೇಳೆ ಸ್ಪೀಕರ್ ಓಂ ಬಿರ್ಲಾ ಅವರು ಪಕ್ಷಪಾತದಿಂದ ನಡೆದುಕೊಳ್ಳುತ್ತಿದ್ದಾರೆ ಹಾಗೂ ಸಾಂವಿಧಾನಿಕ ಹುದ್ದೆಯ ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ವಿರೋಧ ಪಕ್ಷಗಳ ನಾಯಕರಿಗೆ ಮಾತನಾಡಲು ಅವರು ಅವಕಾಶ ನೀಡುತ್ತಿಲ್ಲ
- ರಾಷ್ಟ್ರಪತಿಗಳ ಭಾಷಣಕ್ಕೆ ವಂದನಾ ನಿರ್ಣಯ ಮೇಲೆ ನಡೆದ ಚರ್ಚೆ ವೇಳೆ ಫೆಬ್ರುವರಿ 2ರಂದು ಲೋಕಸಭೆಯಲ್ಲಿ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ತಮ್ಮ ಮಾತು ಪೂರ್ಣಗೊಳಿಸುವುದಕ್ಕೆ ಅವಕಾಶ ನೀಡಲಿಲ್ಲ. ರಾಹುಲ್ ಅವರಿಗೆ ಬಹುತೇಕ ಸಂದರ್ಭಗಳಲ್ಲಿ ಮಾತನಾಡಲು ಅವಕಾಶವನ್ನೇ ನೀಡಿಲ್ಲ
- ಫೆಬ್ರುವರಿ 3ರಂದು ವಿಪಕ್ಷಗಳ 8 ಸಂಸದರನ್ನು ಇಡೀ ಬಜೆಟ್ ಅಧಿವೇಶನದಿಂದ ಅಮಾನತುಗೊಳಿಸಲಾಯಿತು. ತಮ್ಮ ಪ್ರಜಾತಾಂತ್ರಿಕ ಹಕ್ಕುಗಳನ್ನು ಚಲಾಯಿಸಿದ್ದಕ್ಕಾಗಿ ಅವರಿಗೆ ಶಿಕ್ಷೆ ವಿಧಿಸಲಾಗಿದೆ
- ಫೆಬ್ರುವರಿ 4ರಂದು ಬಿಜೆಪಿಯ ಸಂಸದ ನಿಶಿಕಾಂತ್ ದುಬೆ ಅವರು ಇಬ್ಬರು ಮಾಜಿ ಪ್ರಧಾನಿಗಳ ವಿರುದ್ಧ ಆಕ್ಷೇಪಾರ್ಹ ಹೇಳಿಕೆಗಳನ್ನು ನೀಡುವುದಕ್ಕೆ ಅವಕಾಶ ನೀಡಲಾಯಿತು. ಸದನದ ಶಿಷ್ಟಾಚಾರ ಎತ್ತಿಹಿಡಿಯುವ ಉದ್ದೇಶದಿಂದ ಒಮ್ಮೆಯೂ ಅವರಿಗೆ ಛೀಮಾರಿ ಹಾಕಲಿಲ್ಲ. ವಿಪಕ್ಷಗಳು ಮನವಿ ಮಾಡಿದರೂ ಅವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳಲಿಲ್ಲ

'ಕಲಾಪದಿಂದ ಬಿರ್ಲಾ ದೂರ'

ತಮ್ಮನ್ನು ಪದಚ್ಯುತಗೊಳಿಸುವ ಕುರಿತು ವಿರೋಧ ಪಕ್ಷಗಳು ಸಲ್ಲಿಸಿರುವ ನೋಟಿಸ್ ವಿಚಾರ ಇತ್ಯರ್ಥವಾಗುವವರೆಗೆ ಲೋಕಸಭಾ ಕಲಾಪ ಮುನ್ನಡೆಸದಿರಲು ಸ್ಪೀಕರ್ ಓಂ ಬಿರ್ಲಾ ನಿರ್ಧರಿಸಿದ್ದಾರೆ. ನೈತಿಕತೆ ಕಾರಣ ನೀಡಿ ಅವರು ಈ ನಿರ್ಧಾರ ಕೈಗೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸ್ಪೀಕರ್ ಅಥವಾ ಡೆಪ್ಯುಟಿ ಸ್ಪೀಕರ್ ಪದಚ್ಯುತಿಗೆ ಸಂಬಂಧಿಸಿ ಸಲ್ಲಿಕೆಯಾದ ನೋಟಿಸ್ ಅನ್ನು ಪರಿಗಣನೆಗೆ ತೆಗೆದುಕೊಂಡಿದ್ದಲ್ಲಿ, ಅವರು ಸದನದ ಅಧ್ಯಕ್ಷತೆ ವಹಿಸುವುದನ್ನು ಸಂವಿಧಾನದ 96ನೇ ವಿಧಿ ನಿರ್ಬಂಧಿಸುತ್ತದೆ.

ಒಂದು ವೇಳೆ, ಪದಚ್ಯುತಿಗೆ ಸಂಬಂಧಿಸಿ ವಿಪಕ್ಷಗಳ ನಿರ್ಣಯ ಕುರಿತು ಲೋಕಸಭೆಯಲ್ಲಿ ಚರ್ಚೆ ನಡೆದಲ್ಲಿ, ತಮ್ಮನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಬಿರ್ಲಾ ಅವರಿಗೆ ಸಾಂವಿಧಾನಿಕ ಹಕ್ಕು ಇದೆ.

'ರಾಹುಲ್, ಕಾಂಗ್ರೆಸ್ ವಿರುದ್ಧ ವಾಗ್ದಂಡನೆ ಸಮಯ ಬಂದಿದೆ'

ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಗೊಳಿಸುವ ನಿರ್ಣಯ ಕುರಿತು ವಿಪಕ್ಷಗಳು ನೋಟಿಸ್ ಸಲ್ಲಿಸಿರುವುದನ್ನು ಖಂಡಿಸಿರುವ ಬಿಜೆಪಿ, 'ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷದ ವಿರುದ್ಧ ವಾಗ್ದಂಡನೆ ವಿಧಿಸುವ ಸಮಯ ಬಂದಿದೆ' ಎಂದು ಹೇಳಿದೆ.

ಈ ಕುರಿತು ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ರಾಷ್ಟ್ರೀಯ ವಕ್ತಾರ ಸಂಬಿತ್ ಪಾತ್ರ, 'ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್‌ನ ಇತರ ಸಂಸದರು ಸದನದಲ್ಲಿ ಹೇಗೆ ವರ್ತಿಸುತ್ತಿದ್ದಾರೆ ಎಂಬುದನ್ನು ಇಡೀ ದೇಶವೇ ಗಮನಿಸುತ್ತಿದೆ' ಎಂದರು.

'ಅಸಹ್ಯಕರ ದೃಶ್ಯಗಳಿಗೆ ಸಾಕ್ಷಿಯಾಗುತ್ತಿತ್ತು'

ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯ ಮೇಲಿನ ಚರ್ಚೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರಿಸಬೇಕಿದ್ದ ದಿನ, ಕಾಂಗ್ರೆಸ್ ಸಂಸದರೊಂದಿಗೆ ಮುಖಾಮುಖಿಯಾಗಲು ಬಿಜೆಪಿ ಸದಸ್ಯರಿಗೆ ಅವಕಾಶ ನೀಡಿದ್ದಲ್ಲಿ, ಬಹಳ ಅಸಹ್ಯಕರ ದೃಶ್ಯಗಳಿಗೆ ಸದನ ಸಾಕ್ಷಿಯಾಗುತ್ತಿತ್ತು ಎಂದು ಕೇಂದ್ರ ಸಚಿವ ಕಿರಣ್ ರಿಜಿಜು ಮಂಗಳವಾರ ಹೇಳಿದ್ದಾರೆ. ರಾಷ್ಟ್ರಪತಿಗಳ ಭಾಷಣದ ವಂದನಾ ನಿರ್ಣಯಕ್ಕೆ ಅವರು ಲೋಕಸಭೆಯಲ್ಲಿ ಉತ್ತರಿಸಿದರು.

ಫೆಬ್ರುವರಿ 4ರಂದು ವಿರೋಧ ಪಕ್ಷದ ಮಹಿಳಾ ಸಂಸದರು ಆಡಳಿತ ಪಕ್ಷದ ಆಸನಗಳತ್ತ ಧಾವಿಸುತ್ತಿದ್ದ ದೃಶ್ಯಗಳಿರುವ ವಿಡಿಯೊ ಕುರಿತು ಪ್ರಸ್ತಾಪಿಸಿದ ಅವರು, 'ವಿಪಕ್ಷಗಳ ಸದಸ್ಯರ ಇಂತಹ ವರ್ತನೆಯನ್ನು ಯಾರಾದರೂ ಒಪ್ಪಿಕೊಳ್ಳುತ್ತಾರೆ' ಎಂದು ಪ್ರಶ್ನಿಸಿದರು.

'ವಿಪಕ್ಷಗಳ ಸಂಸದರೊಂದಿಗೆ ಸಂಘರ್ಷಕ್ಕೆ ಇಳಿಯದಂತೆ ಆಡಳಿತಾರೂಢ ಮೈತ್ರಿಕೂಟದ ಸಂಸದರಿಗೆ ಸ್ಪಷ್ಟ ಸೂಚನೆ ಇತ್ತು. ಸಂಸತ್‌ನ ಘನತೆ ಹಾಗೂ ಪಾವಿತ್ರ್ಯ ಕಾಪಾಡುವುದೇ ನಮ್ಮ ಆದ್ಯತೆ' ಎಂದರು.

ಸ್ಪೀಕರ್ ಪದಚ್ಯುತಿ: ಯಶಸ್ವಿಯಾದ ನಿದರ್ಶನ ಇಲ್ಲ

ನವದೆಹಲಿ(ಪಿಟಿಐ): ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರನ್ನು ಪದಚ್ಯುತಿಗೊಳಿಸುವ ಕುರಿತು ವಿರೋಧ ಪಕ್ಷಗಳು ನೋಟಿಸ್ ನೀಡಿವೆ. ಆದರೆ, ಸಂಸದೀಯ ಇತಿಹಾಸ ಅವಲೋಕಿಸಿದಾಗ, ಈ ಹಿಂದೆ ಇಂತಹ ಯಾವ ಪ್ರಯತ್ನಗಳು ಯಶಸ್ವಿಯಾದ ನಿದರ್ಶನಗಳು ಇಲ್ಲ ಎಂಬುದು ಗೊತ್ತಾಗುತ್ತದೆ.

ಸರಳ ಬಹುಮತದೊಂದಿಗೆ ಸದನ ಠರಾವು ಅನುಮೋದಿಸುವ ಮೂಲಕ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವುದಕ್ಕೆ ಸಂವಿಧಾನದ 94(ಸಿ) ವಿಧಿ ಅವಕಾಶ ನೀಡುತ್ತದೆಯೆಂದು ಲೋಕಸಭೆಯ ಮಾಜಿ ಪ್ರಧಾನ ಕಾರ್ಯದರ್ಶಿ ಪಿ.ಡಿ. ಟಿ.ಆಚಾರಿ ಹೇಳಿದ್ದಾರೆ.


ತಮ್ಮ ನಿಲುವನ್ನು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಸ್ಪೀಕರ್ ಅವರಿಗೆ ಸಂವಿಧಾನದ 96ನೇ ವಿಧಿಯು ಅವಕಾಶ ನೀಡುತ್ತದೆ ಎಂದೂ ಆಚಾರಿ ಹೇಳಿದರು.

ನೆಹರೂ ನೆನೆದ ಕಾಂಗ್ರೆಸ್: ಲೋಕಸಭಾ ಸ್ಪೀಕರ್ ಅವರನ್ನು ಪದಚ್ಯುತಗೊಳಿಸುವುದು ಸೇರಿ ಸಂಸದೀಯ ನಡವಳಿಕೆಗೆ ಸಂಬಂಧಿಸಿ ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರು ನಡೆದುಕೊಳ್ಳುತ್ತಿದ್ದ ರೀತಿಯನ್ನು ಕಾಂಗ್ರೆಸ್ ಪಕ್ಷ ಮಂಗಳವಾರ ಸ್ಮರಿಸಿದೆ.

'1954ರಲ್ಲಿ ಆಗಿನ ಸ್ಪೀಕರ್ ಪದಚ್ಯುತಿ ಕುರಿತ ನೋಟಿಸ್‌ಗೆ ಸಂಬಂಧಿಸಿ ವಿಸ್ತೃತವಾಗಿ ಚರ್ಚೆ ನಡೆಸಲು ವಿಪಕ್ಷಗಳಿಗೆ ಹೆಚ್ಚು ಸಮಯ ನೀಡುವಂತೆ ನೆಹರೂ ಹೇಳಿದ್ದರು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

2.43 ಲಕ್ಷ ಮತದಾರರಿಗೆ ಕೊಕ್

ಅಸ್ಸಾಂನಲ್ಲಿ ನಡೆಸಲಾಗಿದ್ದ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ (ಎಸ್‌ಆರ್) ಪ್ರಕ್ರಿಯೆಗಳು ಬಹುಪಾಲು ಮುಕ್ತಾಯಗೊಂಡಿದ್ದು, ಚುನಾವಣಾ ಆಯೋಗವು ಮಂಗಳವಾರ ಅಂತಿಮ ಮತದಾರರ ಪಟ್ಟಿ ಬಿಡುಗಡೆ ಮಾಡಿದೆ.ಕರಡು ಮತದಾರರ ಪಟ್ಟಿಗಿಂತ ಅಂತಿಮ ಮತದಾರರ ಪಟ್ಟಿಯಲ್ಲಿ 2.43 ಲಕ್ಷ ಮತದಾರನ್ನು ಪಟ್ಟಿಯಿಂದ ಕೈಬಿಡಲಾಗಿದೆ. ಅಂತಿಮ ಪಟ್ಟಿಯ ಕುರಿತು ಆಕ್ಷೇಪಣೆಗಳಿದ್ದಲ್ಲಿ, ಮತದಾರರು ಜಿಲ್ಲಾ ಮ್ಯಾಜಿಸ್ಟ್ರೇಟ್ ಅವರಿಗೆ 15 ದಿನಗಳ ಒಳಗಾಗಿ ಅರ್ಜಿ ಸಲ್ಲಿಸಬಹುದು ಎಂದು ಆಯೋಗ ಹೇಳಿದೆ.



1.35% — 2025ರ ಜನವರಿಯಲ್ಲಿ ಬಿಡುಗಡೆ ಮಾಡಿದ್ದ ಅಂತಿಮ ಮತದಾರರ ಪಟ್ಟಿಗಿಂತ ವಿಶೇಷ ಪರಿಷ್ಕರಣೆ ಬಳಿಕ ಬಿಡುಗಡೆ ಮಾಡಿದ ಕರಡು ಮತದಾರರ ಪಟ್ಟಿಯಲ್ಲಿ ಏರಿಕೆ ಕಂಡ ಮತದಾರರ ಸಂಖ್ಯೆ

0.97% — ವಿಶೇಷ ಪರಿಷ್ಕರಣೆ ಬಳಿಕ ಬಿಡುಗಡೆ ಮಾಡಲಾಗಿದ್ದ ಕರಡು ಮತದಾರರ ಪಟ್ಟಿಗಿಂತ ಅಂತಿಮ ಮತದಾರರ ಪಟ್ಟಿಯಲ್ಲಿ ಕಡಿತಗೊಂಡ ಮತದಾರರ ಸಂಖ್ಯೆ

ಎ.ಐ ವಿಷಯಗಳ ಮೇಲೆ ಕಠಿಣ ನಿಯಮ

ನವದೆಹಲಿ (ಪಿಟಿಐ): ಸಾಮಾಜಿಕ ಜಾಲತಾಣಗಳಲ್ಲಿ ಅಪ್‌ಲೋಡ್ ಮಾಡಲಾಗುವ ಕೃತಕ ಬುದ್ಧಿಮತ್ತೆ (ಎ.ಐ) ಮೂಲಕ ಸೃಜಿಸಿದ ವಿಷಯ ವಸ್ತುಗಳ ನಿಯಂತ್ರಣಕ್ಕೆ ಕೇಂದ್ರವು ಮಂಗಳವಾರ ಕಠಿಣ ಆದೇಶ ಹೊರಡಿಸಿದೆ.

ಕಾನೂನುಬಾಹಿರ ವಿಷಯಗಳಿರುವ ಪೋಸ್ಟ್‌ಗಳನ್ನು ಯಾವುದೇ ಪ್ರಾಧಿಕಾರ ಅಥವಾ ಕೋರ್ಟ್ ಸೂಚಿಸಿದ ಮೂರು ಗಂಟೆಯೊಳಗೆ ತೆಗೆದುಹಾಕಬೇಕು ಎಂದು ಸೂಚಿಸಿದೆ.

ಎ.ಐ ರಚಿತ ವಿಷಯಗಳಿಗೆ ಕಡ್ಡಾಯವಾಗಿ ಲೇಬಲಿಂಗ್ (ಎ.ಐ ಮೂಲಕ ರಚಿಸಿದ ಎಂದು ನಮೂದಿಸಬೇಕು) ಮಾಡಬೇಕು. ಕೃತಕವಾಗಿ ರಚಿಸಲಾದ ವಿಷಯಗಳನ್ನು ಹಂಚುವಾಗಲೂ ಲೇಬಲ್ ಮಾಡಬೇಕು ಎಂದು ನಿಯಮದಲ್ಲಿ ಹೇಳಲಾಗಿದೆ.

ಎ.ಐ ಮೂಲಕ ರಚಿಸಲಾದ ಕಾನೂನುಬಾಹಿರ, ಲೈಂಗಿಕ ಶೋಷಣೆಯ, ಒಪ್ಪಿಗೆಯಿಲ್ಲದ ಅಥವಾ ಸುಳ್ಳು ದಾಖಲೆಗಳು, ಮಕ್ಕಳ ಮೇಲಿನ ದೌರ್ಜನ್ಯ, ಸ್ಫೋಟಕ ಮುಂತಾದ ವಿಷಯವನ್ನು ತಡೆಯಲು ಪ್ಲಾಟ್‌ಫಾರ್ಮ್‌ಗಳು ಸ್ವಯಂಚಾಲಿತ ಸಾಧನಗಳನ್ನು ಅಳವಡಿಸಿಕೊಳ್ಳಬೇಕು ಎಂದು ತಿಳಿಸಿದೆ.

ಪುಸ್ತಕ ವಿವಾದ: 2023ರಲ್ಲಿ ಜನರಲ್ ನರವಣೆ ಮಾಡಿದ್ದ ಪೋಸ್ಟ್ ಉಲ್ಲೇಖ

ಪೆಂಗ್ವಿನ್ ಇಂಡಿಯಾಗೆ ರಾಹುಲ್ ತಿರುಗೇಟು


ನವದೆಹಲಿ(ಪಿಟಿಐ): ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರ ಕೃತಿ 'ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ' ಕುರಿತ ವಿವಾದವು ದಿನಕ್ಕೊಂದು ತಿರುವು ಪಡೆದುಕೊಳ್ಳುತ್ತಿದೆ.

ತಮ್ಮ ಕೃತಿ 'ಈಗ ಲಭ್ಯ' ಎಂಬ ಮಾಹಿತಿಯನ್ನು ಸೇನೆಯ ಮಾಜಿ ಮುಖ್ಯಸ್ಥ ಜನರಲ್ ಎಂ.ಎಂ.ನರವಣೆ ಅವರು 2023ರ ಡಿಸೆಂಬರ್‌ನಲ್ಲಿ ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡಿದ್ದರು ಎಂದು ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಮಂಗಳವಾರ ಹೇಳಿದ್ದಾರೆ.

ಈ ಮೂಲಕ ಅವರು, 'ಜನರಲ್ ನರವಣೆ ಅವರ ಪುಸ್ತಕವನ್ನು ಇನ್ನೂ ಪ್ರಕಟಿಸಿಲ್ಲ' ಎಂಬ ಪ್ರಕಾಶನ ಸಂಸ್ಥೆ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಹೇಳಿಕೆಯನ್ನು ಅಲ್ಲಗಳೆದಿದ್ದಾರೆ.

'ಈ ಕೃತಿಯ ವಿಚಾರದಲ್ಲಿ ನಾನು ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಸಂಸ್ಥೆಗಿಂತ ಜನರಲ್ ನರವಣೆ ಅವರ ಮಾತನ್ನು ನಂಬುತ್ತೇನೆ' ಎಂದೂ ಹೇಳಿದ್ದಾರೆ.

ಸಂಸತ್ ಭವನ ಆವರಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹಲೋ ಸ್ನೇಹಿತರೆ, ನನ್ನ ಪುಸ್ತಕ ಈಗ ಲಭ್ಯ ಇದೆ. ಈ ಲಿಂಕ್‌ಗೆ ಭೇಟಿ ನೀಡಿ. ಜೈ ಹಿಂದ್' ಎಂಬುದಾಗಿ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ (ಆಗಿನ ಟ್ವಿಟರ್) ನರವಣೆ ಅವರು ಮಾಡಿದ್ದ ಪೋಸ್ಟ್ ಅನ್ನು ಓದಿದರು.



> **ಜನರಲ್ ನರವಣೆ ತಮ್ಮ ಕೃತಿಯಲ್ಲಿ ಕೆಲ ವಿಚಾರಗಳನ್ನು ಉಲ್ಲೇಖಿಸಿದ್ದಾರೆ. ಅವುಗಳು ಕೇಂದ್ರ ಸರ್ಕಾರ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರನ್ನು ಪೇಚಿಗೆ ಸಿಲುಕಿಸಲಿವೆ**
>
> **ರಾಹುಲ್ ಗಾಂಧಿ,**
> ಲೋಕಸಭೆಯಲ್ಲಿ ವಿಪಕ್ಷ ನಾಯಕ

'ಇದು ನರವಣೆ ಅವರು ಮಾಡಿರುವ ಪೋಸ್ಟ್. ಒಂದೋ ನರವಣೆ ಅವರು ಸುಳ್ಳು ಹೇಳುತ್ತಿರಬೇಕು ಇಲ್ಲವೇ ಪ್ರಕಾಶನ ಸಂಸ್ಥೆ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಸುಳ್ಳು ಹೇಳುತ್ತಿರಬಹುದು. ಸೇನೆಯ ಮಾಜಿ ಮುಖ್ಯಸ್ಥರು ಸುಳ್ಳು ಹೇಳುವುದಿಲ್ಲ ಎಂಬುದು ನನ್ನ ನಂಬಿಕೆ. ಇಬ್ಬರೂ ಸತ್ಯವನ್ನು ಹೇಳುತ್ತಿರಲಿಕ್ಕಿಲ್ಲ' ಎಂದರು.

'ನರವಣೆ ಅವರ ಪುಸ್ತಕವನ್ನು ಪ್ರಕಟಿಸಿಲ್ಲ ಎಂಬುದಾಗಿ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಹೇಳುತ್ತಿದೆ. ಈ ಪುಸ್ತಕ ಅಮೆಜಾನ್‌ನಲ್ಲಿ ಲಭ್ಯ ಎಂಬುದಾಗಿ ನರವಣೆ ಅವರು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ನೀವು ನರವಣೆ ಬದಲಾಗಿ ಪ್ರಕಾಶನ ಸಂಸ್ಥೆ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾವನ್ನು ನಂಬುತ್ತೀರಾ' ಎಂದು ಸುದ್ದಿಗಾರರನ್ನು ಪ್ರಶ್ನಿಸಿದ ಅವರು, 'ನಾನು ನರವಣೆ ಅವರನ್ನು ನಂಬುತ್ತೇನೆ' ಎಂದು ಪುನರುಚ್ಚರಿಸಿದರು.

ನರವಣೆ ಅವರ ಕೃತಿಯ ಹಸ್ತಪ್ರತಿಗಳು ಡಿಜಿಟಲ್ ಹಾಗೂ ಇತರ ವಿಧಾನಗಳ ಮೂಲಕ ಕಾನೂನು ಬಾಹಿರವಾಗಿ ಹಂಚಿಕೆಯಾಗುತ್ತಿವೆ ಎಂಬ ಆರೋಪಗಳು ಕೇಳಿಬಂದ ಕಾರಣ, ದೆಹಲಿ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು.

ಇದರ ಬೆನ್ನಲ್ಲೇ ಸೋಮವಾರ ಸ್ಪಷ್ಟೀಕರಣ ನೀಡಿದ್ದ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ, ಜನರಲ್ ಎಂ.ಎಂ.ನರವಣೆ ಅವರ ಕೃತಿ 'ಫೋರ್ ಸ್ಟಾರ್ಸ್ ಆಫ್ ಡೆಸ್ಟಿನಿ' ಪ್ರಕಟಣೆಗೆ ಸಂಬಂಧಿಸಿ ಎಲ್ಲ ಹಕ್ಕುಗಳ ತಾನು ಹೊಂದಿದ್ದು, ಈ ಪುಸ್ತಕ ಇನ್ನೂ ಪ್ರಕಟವಾಗಿಲ್ಲ ಎಂದು ಹೇಳಿತ್ತು.

'ಪ್ರಕಟಣೆಗೂ, ಘೋಷಣೆಗೂ ವ್ಯತ್ಯಾಸವಿದೆ'

ನವದೆಹಲಿ(ಪಿಟಿಐ): 'ಎಂ.ಎಂ. ನರವಣೆ ಅವರ ಪುಸ್ತಕವನ್ನು ಈ ವರೆಗೆ ಯಾವುದೇ ರೂಪದಲ್ಲಿ ಸಂಸ್ಥೆ ಪ್ರಕಟಿಸಿಲ್ಲ' ಎಂದು ಪ್ರಕಾಶನ ಸಂಸ್ಥೆ ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ (ಪಿಆರ್‌ಎಚ್‌ಐ) ಮಂಗಳವಾರ ಸ್ಪಷ್ಟಪಡಿಸಿದೆ.

ಪುಸ್ತಕದ ಲಭ್ಯತೆ ಕುರಿತು ನರವಣೆ ಅವರು 2023ರ ಡಿಸೆಂಬರ್‌ನಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ್ದ ಪೋಸ್ಟ್‌ಅನ್ನು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಉಲ್ಲೇಖಿಸಿದ ಬೆನ್ನಲ್ಲೇ, ಪಿಆರ್‌ಎಚ್‌ಐ ಈ ಸ್ಪಷ್ಟನೆ ನೀಡಿದೆ.

ಈ ಕುರಿತು ಹೇಳಿಕೆ ಬಿಡುಗಡೆ ಮಾಡಿರುವ ಸಂಸ್ಥೆ, 'ಪುಸ್ತಕವೊಂದನ್ನು ಪ್ರಕಟಿಸುವ ಯೋಜನೆ ಬಗ್ಗೆ ಮಾಡುವ ಘೋಷಣೆಗೂ ಹಾಗೂ ಮುಂಗಡವಾಗಿ ಅದನ್ನು ಕಾಯ್ದಿರಿಸುವ ಅವಕಾಶದ ಕುರಿತು ಘೋಷಿಸುವುದಕ್ಕೂ ವ್ಯತ್ಯಾಸ ಇದೆ. ಈ ರೀತಿ ಘೋಷಣೆ ಮಾಡಿದಾಕ್ಷಣ ಪುಸ್ತಕವು ಪ್ರಕಟಗೊಂಡಿದೆ ಎಂಬುದಾಗಿ ಅರ್ಥೈಸಬಾರದು' ಎಂದು ಹೇಳಿದೆ.

'ಒಂದು ಪುಸ್ತಕ ಕುರಿತು ಮಾಡುವ ಘೋಷಣೆಯು, ಬರುವ ದಿನಗಳಲ್ಲಿ ಅದನ್ನು ಪ್ರಕಟಿಸಲು ಪ್ರಕಾಶನ ಸಂಸ್ಥೆ ಯೋಜಿಸಿದೆ ಎಂಬುದನ್ನು ಸೂಚಿಸುತ್ತದೆ' ಎಂದು ಹೇಳಿದೆ.

'ಪುಸ್ತಕವೊಂದನ್ನು ಮುಂಗಡವಾಗಿ ಕಾಯ್ದಿರಿಸಲು ಅವಕಾಶ ನೀಡುವ ಪರಿಪಾಟ ಕೂಡ ರೂಢಿಯಲ್ಲಿದೆ. ಪುಸ್ತಕ ಬಿಡುಗಡೆಗೂ ಮುನ್ನವೇ, ಓದುಗರು ಹಾಗೂ ಚಿಲ್ಲರೆ ಮಾರಾಟಗಾರರು ತಮಗೆ ಬೇಕಾಗುವಷ್ಟು ಪ್ರತಿಗಳನ್ನು ಕಾಯ್ದಿರಿಸಲು ಇದರಿಂದ ಸಾಧ್ಯವಾಗಲಿದೆ. ಆದರೆ, ಈ ರೀತಿ ಘೋಷಣೆ ಮಾಡಿದಾಕ್ಷಣ ಪುಸ್ತಕವು ಪ್ರಕಟವಾಗಿದೆ ಅಥವಾ ಖರೀದಿಗೆ ಲಭ್ಯವಿದೆ ಎಂದರ್ಥವಲ್ಲ' ಎಂದೂ ಹೇಳಿದೆ.

ಪೆಂಗ್ವಿನ್ ರ್‍ಯಾಂಡಮ್ ಹೌಸ್ ಇಂಡಿಯಾ ಸ್ಪಷ್ಟೀಕರಣ ನೀಡಿದ ಬೆನ್ನಲ್ಲೇ, ಜನರಲ್ ನರವಣೆ ಕೂಡ ಪ್ರತಿಕ್ರಿಯೆ ನೀಡಿದ್ದಾರೆ. 'ಪುಸ್ತಕ ಕುರಿತಂತೆ ವಾಸ್ತವ ಹೀಗಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಟಿಮ್–ಫಿನ್ ದಾಖಲೆ ಜೊತೆಯಾಟ

ಯುಎಇ ವಿರುದ್ಧ ನ್ಯೂಜಿಲೆಂಡ್‌ಗೆ 10 ವಿಕೆಟ್ ಜಯ • ಹೆನ್ರಿಗೆ ಎರಡು ವಿಕೆಟ್

ಚೆನ್ನೈ (ಪಿಟಿಐ): ನ್ಯೂಜಿಲೆಂಡ್ ತಂಡದ ಆರಂಭ ಆಟಗಾರರಾದ ಟಿಮ್ ಸೀಫರ್ಟ್ (ಔಟಾಗದೇ 89) ಮತ್ತು ಫಿನ್ ಅಲೆನ್ (ಔಟಾಗದೇ 84) ಅವರು ಯುಎಇ ಬೌಲರ್‌ಗಳ ಮೇಲೆ ಸವಾರಿ ನಡೆಸಿದರು. ಇವರಿಬ್ಬರ ನಡುವೆ 175 ರನ್‌ಗಳ ದಾಖಲೆ ಜೊತೆಯಾಟದ ನೆರವಿನಿಂದ ಕಿವೀಸ್ ಪಡೆ ಟಿ20 ವಿಶ್ವಕಪ್ 'ಡಿ' ಗುಂಪಿನ ಪಂದ್ಯದಲ್ಲಿ ಮಂಗಳವಾರ ಯುಎಇ ತಂಡವನ್ನು 10 ವಿಕೆಟ್‌ಗಳಿಂದ ನಿರಾಯಾಸವಾಗಿ ಮಣಿಸಿತು.

ಯುಎಇ ತಂಡ 6 ವಿಕೆಟ್‌ಗೆ 173 ರನ್‌ಗಳ ಗೌರವಾರ್ಹ ಮೊತ್ತ ಗಳಿಸಿತು. ನಾಯಕ ಹಾಗೂ ಆರಂಭ ಆಟಗಾರ ಮುಹಮ್ಮದ್ ವಾಸೀಂ (ಔಟಾಗದೇ 66, 45 ಎಸೆತ) ಮತ್ತು ಮಧ್ಯಮ ಕ್ರಮಾಂಕದ ಆಟಗಾರ ಅಲಿಶಾನ್ ಶರಾಫು (55, 47 ಎಸೆತ) ಅವರು ಅರ್ಧ ಶತಕಗಳನ್ನು ಬಾರಿಸುವುದರೊಂದಿಗೆ ಅರಬ್ ಎಮಿರೇಟರ ತಂಡ ಟೂರ್ನಿ ಇತಿಹಾಸದಲ್ಲೇ ತನ್ನ ಅತ್ಯಧಿಕ ಮೊತ್ತ ದಾಖಲಿಸಿತು.

ಆದರೆ ಈ ಮೊತ್ತ ಮಿಚೆಲ್ ಸ್ಯಾಂಟ್ನರ್ ಪಡೆಗೆ ಸವಾಲೆನಿಸಲಿಲ್ಲ. ಫಿನ್ ಅಲೆನ್ ಮತ್ತು ಸೀಫರ್ಟ್ ಅವರು ಇನ್ನೂ 28 ಎಸೆತಗಳು ಉಳಿದಿರುವಂತೆ (15.2 ಓವರುಗಳಲ್ಲಿ) ಗೆಲುವನ್ನು ಪೂರೈಸಿದರು. ಇದು 'ಗ್ರೂಪ್ ಆಫ್ ಡೆತ್' ಎನಿಸಿದ 'ಡಿ' ಗುಂಪಿನಲ್ಲಿ ನ್ಯೂಜಿಲೆಂಡ್‌ಗೆ ಎರಡನೇ ಗೆಲುವು. ನ್ಯೂಜಿಲೆಂಡ್ ಈ ಪ್ರದರ್ಶನದಿಂದ ಎದುರಾಳಿಗಳಿಗೆ ಎಚ್ಚರಿಕೆಯ ಸಂದೇಶ ರವಾನಿಸಿತು.

ಯುಎಇಯ ಎಡಗೈ ಸ್ಪಿನ್ನರ್ ಹೈದರ್ ಅಲಿ (4-0-27-0) ಮಾತ್ರ ಎದುರಾಳಿ ಬ್ಯಾಟರ್‌ಗಳ ಪರಾಕ್ರಮಕ್ಕೆ ಸ್ವಲ್ಪ ಕಡಿವಾಣ ಹಾಕಿದರು. ಉಳಿದವರು ಓವರೊಂದಕ್ಕೆ 12 + ರನ್ ತೆತ್ತರು.

ಹೈದರ್ ಬೌಲಿಂಗ್‌ನಲ್ಲಿ (11ನೇ ಓವರ್) ಸೀಫರ್ಟ್ ರಿವರ್ಸ್ ಸ್ವೀಪ್ ಮೂಲಕ ಸಿಕ್ಸರ್ ಮತ್ತು ಬೌಂಡರಿ ಗಿಟ್ಟಿಸಿದ್ದು ಆಕರ್ಷಕವಾಗಿತ್ತು. ಸೀಫರ್ಟ್ 12 ಬೌಂಡರಿ, ಮೂರು ಸಿಕ್ಸರ್ ಬಾರಿಸಿದರೆ, ಅಲೆನ್ ಐದು ಬೌಂಡರಿಗಳ ಜೊತೆ ಅಷ್ಟೇ ಸಿಕ್ಸರ್ ಎತ್ತಿದರು.

ಇದಕ್ಕೆ ಮೊದಲು ಟಾಸ್ ಗೆದ್ದು ಬ್ಯಾಟಿಂಗ್ ಮಾಡಲು ನಿರ್ಧರಿಸಿದ ಯುಇಎ ತಂಡ, ಆರ್ಯಾಂಶ್ ಶರ್ಮಾ ಅವರನ್ನು ಬೇಗನೇ ಕಳೆದುಕೊಂಡಿತು. ಅವರು ಜೇಕಬ್ ಡಫಿ ಬೌಲಿಂಗ್‌ನಲ್ಲಿ (ಎರಡನೇ ಓವರ್) ಶಾರ್ಟ್‌ಪಿಚ್ ಎಸೆತವನ್ನು ಪುಲ್ ಮಾಡುವ ಯತ್ನದಲ್ಲಿ ಲಾಂಗ್‌ಲೆಗ್‌ನಲ್ಲಿ ಕ್ಯಾಚಿತ್ತರು.

ವಾಸಿಂ ಮತ್ತು ಶರಾಫು ಎರಡನೇ ವಿಕೆಟ್‌ಗೆ 107 ರನ್ ಸೇರಿಸಿದರು. ಈ ಜೊತೆಯಾಟ ಎದುರಾಳಿಗಳ ವಿಶೇಷ ಪ್ರಯತ್ನದಿಂದ ಕೊನೆಗೊಂಡಿತು. ಸ್ಪಿನ್ನರ್ ಸ್ಯಾಂಟ್ನರ್ ಬೌಲಿಂಗ್‌ನಲ್ಲಿ ಸ್ಲಾಗ್ ಸ್ವೀಪ್ ಯತ್ನದಲ್ಲಿ ಚಾಪ್‌ಮನ್ ಮಿಡ್‌ವಿಕೆಟ್ ಬೌಂಡರಿ ಬಳಿ ಚೆಂಡನ್ನು ಹಿಡಿದು ಮೇಲಕ್ಕೆಸೆದು ಸೀಮಾರೇಖೆ ದಾಟಿದರು. ಆದರೆ ಅವರು ಮೇಲೆಸೆದ ಚೆಂಡನ್ನು ಮಿಚೆಲ್ ಕ್ಯಾಚ್ ಹಿಡಿದರು.

ಯುಎಇ ಕೊನೆಯ ಐದು ಓವರುಗಳಲ್ಲಿ 51 ರನ್ ಗಳಿಸಿತು. ಕೊನೆಯ ಓವರಿನಲ್ಲಿ ಎರಡು ವಿಕೆಟ್‌ಗಳನ್ನು ಕಳೆದುಕೊಂಡಿತು.

ಸಂಕ್ಷಿಪ್ತ ಸ್ಕೋರು: ಯುಎಇ: 20 ಓವರುಗಳಲ್ಲಿ 6ಕ್ಕೆ 173 (ಮುಹಮ್ಮದ್ ವಾಸಿಂ ಔಟಾಗದೇ 66, ಅಲಿಶಾನ್ ಶರಾಫು 55, ಮಯಂಕ್ ಕುಮಾರ್ 21; ಮ್ಯಾಟ್ ಹೆನ್ರಿ 37ಕ್ಕೆ2); ನ್ಯೂಜಿಲೆಂಡ್: 15.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 175 (ಟಿಮ್ ಸೀಫರ್ಟ್ ಔಟಾಗದೇ 89, ಫಿನ್ ಅಲೆನ್ ಔಟಾಗದೇ 84). ಪಂದ್ಯದ ಆಟಗಾರ: ಟಿಮ್ ಸೀಫರ್ಟ್.

ದಾಖಲೆ 175 ರನ್ ಜೊತೆಯಾಟ

ಫಿನ್ ಅಲೆನ್ ಮತ್ತು ಟಿಮ್ ಸೀಫರ್ಟ್ ಮುರಿಯದ ಮೊದಲ ವಿಕೆಟ್‌ಗೆ 175 ರನ್ (92 ಎಸೆತ) ಸೇರಿಸಿದ್ದು, ಟಿ20 ವಿಶ್ವಕಪ್‌ನ ಯಾವುದೇ ವಿಕೆಟ್‌ಗೆ ದಾಖಲೆ ಜೊತೆಯಾಟ ಎನಿಸಿತು. ಈ ಹಿಂದೆ ಅಲೆಕ್ಸ್ ಹೇಲ್ಸ್ ಮತ್ತು ಜೋಸ್ ಬಟ್ಲರ್ ಅವರು ಭಾರತ ವಿರುದ್ಧ ವಿಕೆಟ್ ನಷ್ಟವಿಲ್ಲದೇ 170 ರನ್ ಸೇರಿಸಿದ್ದು ಈವರೆಗಿನ ದಾಖಲೆಯಾಗಿತ್ತು.



ನ್ಯೂಜಿಲೆಂಡ್ ತಂಡದ ಟಿಮ್ ಸೀಫರ್ಟ್ ಮತ್ತು ಫಿನ್ ಅಲೆನ್ ಜೊತೆಯಾಟ ಪಿಟಿಐ ಚಿತ್ರ

ಟಿ20 ವಿಶ್ವಕಪ್: ಪಾಯಿಂಟ್ಸ್ ಪಟ್ಟಿ

	ತಂಡಗಳು	ಪಂದ್ಯಗಳು	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಗುಂಪು ಎ						
1	ಪಾಕಿಸ್ತಾನ	2	2	0	4	0.932
2	ಭಾರತ	1	1	0	2	1.450
3	ನೆದರ್ಲೆಂಡ್ಸ್	2	1	1	2	0.356
4	ನಮೀಬಿಯಾ	1	0	1	0	-1.033
5	ಅಮೆರಿಕ	2	0	2	0	-1.525
ಗುಂಪು ಬಿ						
1	ಜಿಂಬಾಬ್ವೆ	1	1	1	2	2.702
2	ಶ್ರೀಲಂಕಾ	1	1	0	2	1.000
3	ಐರ್ಲೆಂಡ್	1	0	1	0	-1.000
4	ಒಮಾನ್	1	0	1	0	-2.702
5	ಆಸ್ಟ್ರೇಲಿಯಾ	-	-	-	-	-
ಗುಂಪು ಸಿ						
1	ವೆಸ್ಟ್ ಇಂಡೀಸ್	1	1	0	2	1.750
2	ಸ್ಕಾಟ್ಲೆಂಡ್	2	1	1	2	0.950
3	ಇಂಗ್ಲೆಂಡ್	1	1	0	2	0.200
4	ನೇಪಾಳ	1	0	1	0	-0.200
5	ಇಟಲಿ	1	0	1	0	-3.650
ಗುಂಪು ಡಿ						
1	ನ್ಯೂಜಿಲೆಂಡ್	2	2	0	4	1.919
2	ದಕ್ಷಿಣ ಆಫ್ರಿಕಾ	1	1	0	2	2.850
3	ಅಫ್ಗಾನಿಸ್ತಾನ	1	0	1	0	-1.162
4	ಯುಎಇ	1	0	1	0	-2.763
5	ಕೆನಡಾ	1	0	1	0	-2.850

ನೆದರ್ಲೆಂಡ್ಸ್ ಗೆಲುವಿನಲ್ಲಿ 'ಬಾಸ್' ಮಿಂಚು

ನವದೆಹಲಿ (ಪಿಟಿಐ): ಬಾಸ್ ಡಿ ಲೀಡೆ (20ಕ್ಕೆ2 ಮತ್ತು ಔಟಾಗದೇ 72) ಅವರ ಆಲ್‌ರೌಂಡ್ ಆಟದ ನೆರವಿನಿಂದ ನೆದರ್ಲೆಂಡ್ಸ್ ತಂಡವು ಟಿ20 ವಿಶ್ವಕಪ್ 'ಎ' ಗುಂಪಿನ ಪಂದ್ಯದಲ್ಲಿ ನಮೀಬಿಯಾ ತಂಡವನ್ನು ಸೋಲಿಸಿತು. ಆ ಮೂಲಕ ಸೂಪರ್ 8 ಹಂತಕ್ಕೇರುವ ಅವಕಾಶ ಜೀವಂತವಾಗಿ ಉಳಿಸಿತು.

ಮೊದಲ ಪಂದ್ಯದಲ್ಲಿ ಪಾಕಿಸ್ತಾನ ವಿರುದ್ಧ ಮೇಲುಗೈ ಸಾಧಿಸಿ ಕೊನೆಗೆ ನಿರಾಶೆ ಅನುಭವಿಸಿದ ಡಚ್ಚರ ಪಡೆ ಇಲ್ಲಿ ಪ್ರಬುದ್ಧವಾಗಿ ಆಡಿತು. ಶಿಸ್ತುಬದ್ಧ ಬೌಲಿಂಗ್ ಪ್ರದರ್ಶಿಸಿ ನಮೀಬಿಯಾ ತಂಡವನ್ನು 8 ವಿಕೆಟ್‌ಗೆ 156 ರನ್‌ಗಳಿಗೆ ಸೀಮಿತಗೊಳಿಸಿತು. ಇನ್ನೂ 12 ಎಸೆತಗಳಿರುವಂತೆ 3 ವಿಕೆಟ್ ನಷ್ಟದಲ್ಲಿ 157 ರನ್ ಹೊಡೆಯಿತು.

ಇದು ವಿಶ್ವಕಪ್‌ನಲ್ಲಿ ನಮೀಬಿಯಾಕ್ಕೆ ಮೊದಲ ಪಂದ್ಯವಾಗಿದ್ದು, ಅಲ್ಲಲ್ಲಿ ಉತ್ತಮ ಆಟವಾಡಿತು. ದಕ್ಷಿಣ ಆಫ್ರಿಕಾ ವಿರುದ್ಧ 2025ರ ಅಕ್ಟೋಬರ್‌ನಲ್ಲಿ ಕೊನೆಯ ಸಲ ಈ ತಂಡ ಟಿ20 ಪಂದ್ಯ ಆಡಿದ್ದು, ಲಯ ಕಾಣಲು ಸಮಯ ತೆಗೆದುಕೊಂಡಿತು. ಜಾನ್ ಫ್ರಿಲಿಂಕ್ (30) ಮತ್ತು ಯಾನ್ ನಿಕೊಲ್ ಲೋಫ್ಟಿ–ಏಟನ್ (42) ಅವರು ಎರಡನೇ ವಿಕೆಟ್‌ಗೆ 60 ರನ್ ಸೇರಿಸಿದ್ದು ನಮೀಬಿಯಾ ಇನಿಂಗ್ಸ್‌ನಲ್ಲಿ ಉಲ್ಲೇಖನೀಯ ಅಂಶವೆನಿಸಿತು.

ಬಾಸ್ ಡಿ ಲೀಡೆ ಮತ್ತು ಕಾಲಿನ್ ಆ್ಯಕರಮನ್ (32, 28ಎ) ಮೂರನೇ ವಿಕೆಟ್‌ಗೆ 70 ರನ್ ಸೇರಿಸಿ ನೆದರ್ಲೆಂಡ್ಸ್ ತಂಡದ ಗೆಲುವಿನ ಹಾದಿ ಸುಗಮಗೊಳಿಸಿದರು. ಲೀಡೆ 48 ಎಸೆತಗಳಲ್ಲಿ 5 ಬೌಂಡರಿ, ನಾಲ್ಕು ಸಿಕ್ಸರ್‌ಗಳಿದ್ದ 72 ರನ್ ಗಳಿಸಿದರು. ನಾಯಕ ಸ್ಕಾಟ್ ಎಡ್ವರ್ಡ್ಸ್ 18 ರನ್ ಗಳಿಸಿ ಅಜೇಯರಾಗುಳಿದರು.



ಅರ್ಧಶತಕ ಗಳಿಸಿದ ಸಂಭ್ರಮದಲ್ಲಿ ಬಾಸ್ ಡಿ ಲೀಡೆ ಪಿಟಿಐ ಚಿತ್ರ

ಸಂಕ್ಷಿಪ್ತ ಸ್ಕೋರು: ನಮೀಬಿಯಾ: 20 ಓವರುಗಳಲ್ಲಿ 8ಕ್ಕೆ 156 (ಜಾನ್ ಫ್ರಿಲಿಂಕ್ 30, ಯಾನ್ ನಿಕೊಲ್ ಲೋಫ್ಟಿ–ಏಟನ್ 42; ಲೋಗನ್ ವ್ಯಾನ್ ಬೀಕ್ 13ಕ್ಕೆ2, ಬಾಸ್ ಡಿ ಲೀಡೆ 13ಕ್ಕೆ2); ನೆದರ್ಲೆಂಡ್ಸ್: 18 ಓವರುಗಳಲ್ಲಿ 3ಕ್ಕೆ 159 (ಮೈಕೆಲ್ ಲೆವಿಟ್ 28, ಬಾಸ್ ಡಿ ಲೀಡೆ ಔಟಾಗದೇ 72, ಕಾಲಿನ್ ಆ್ಯಕರ್ಮನ್ 32). ಪಂದ್ಯದ ಆಟಗಾರ: ಬಾಸ್ ಡಿ ಲೀಡೆ

ಫರ್ಹಾನ್ ಅರ್ಧಶತಕ: ಅಮೆರಿಕ ತಂಡಕ್ಕೆ ಸೋಲು

ಪಾಕಿಸ್ತಾನಕ್ಕೆ ಎರಡನೇ ಗೆಲುವು

ಕೊಲಂಬೊ (ಪಿಟಿಐ): ಸಾಹಿಬ್‌ಝಾದಾ ಫರ್ಹಾನ್ ಅವರ ಮಿಂಚಿನ ಅರ್ಧಶತಕದ ಬಳಿಕ ಸ್ಪಿನ್ನರ್‌ಗಳ ಕೈಚಳಕದ ನೆರವಿನಿಂದ ಪಾಕಿಸ್ತಾನ ತಂಡವು ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಸತತ ಎರಡನೇ ಗೆಲುವು ದಾಖಲಿಸಿತು.

ಸಿಂಹಳೀಸ್ ಸ್ಪೋರ್ಟ್ಸ್ ಕ್ಲಬ್ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಪಾಕಿಸ್ತಾನ ತಂಡವು 32 ರನ್‌ಗಳಿಂದ ಅಮೆರಿಕ ತಂಡವನ್ನು ಮಣಿಸಿತು. ಈ ಗೆಲುವಿನೊಂದಿಗೆ ಎ ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಅಮೆರಿಕ ತಂಡಕ್ಕೆ ಇದು ಸತತ ಎರಡನೇ ಸೋಲು.

ಆರಂಭಿಕ ಬ್ಯಾಟರ್ ಫರ್ಹಾನ್ (73; 41ಎ, 4x6, 6x5) ಅವರ ಬ್ಯಾಟಿಂಗ್ ಬಲದಿಂದ ಪಾಕ್ ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗಳಿಗೆ 190 ರನ್ ಗಳಿಸಿತು. ಸ್ಪರ್ಧಾತ್ಮಕ ಗುರಿಯನ್ನು ಬೆನ್ನಟ್ಟಿದ ಅಮೆರಿಕ ತಂಡವು 8 ವಿಕೆಟ್‌ಗೆ 158 ರನ್ ಗಳಿಸಿ ಹೋರಾಟವನ್ನು ಮುಗಿಸಿತು. ಕಳೆದ ಆವೃತ್ತಿಯಲ್ಲಿ ಪಾಕ್‌ಗೆ ಆಘಾತ ನೀಡಿದ್ದ ಅಮೆರಿಕ ಈ ಬಾರಿ ಉತ್ತಮ ಹೋರಾಟ ತೋರಿತಾದರೂ ಗೆಲುವಿಗೆ ಸಾಕಾಗಲಿಲ್ಲ.

ಆರಂಭಿಕ ಆಟಗಾರ ಶಯಾನ್ ಜಹಾಂಗೀರ್ (49;34ಎ), ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳಾದ ಶುಭಂ ರಂಜನೆ (51;30ಎ) ಮತ್ತು ಮಿಲಿಂದ್ ಕುಮಾರ್ (29;22) ಹೋರಾಟ ಪಡಿಸಿ ಉಳಿದವರು ನಿರಾಸೆ ಮೂಡಿಸಿದರು. ಪಾಕ್ ಸಂಜಾತ ಜಹಾಂಗೀರ್ ಅರ್ಧಶತಕದ ಹೊಸ್ತಿಲಲ್ಲಿ ಎಡವಿದರು. ಸ್ಪಿನ್ನರ್‌ಗಳಾದ ಉಸ್ಮಾನ್ ತಾರಿಕ್ ಮೂರು ವಿಕೆಟ್, ಶಾದಾಬ್ ಖಾನ್ ಎರಡು ವಿಕೆಟ್ ಗಳಿಸಿ ಅಮೆರಿಕವನ್ನು ಕಟ್ಟಿಹಾಕಲು ನೆರವಾದರು.

ಇದಕ್ಕೂ ಮೊದಲು ಟಾಸ್ ಗೆದ್ದ ಅಮೆರಿಕ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ವೇಗಿ ಶಾಡ್ಲಿ ವ್ಯಾನ್ ಶಾಲ್ಕ್‌ವಿಕ್ (25ಕ್ಕೆ4) ಅವರ ಪರಿಣಾಮಕಾರಿ ದಾಳಿಯ ನಡುವೆಯೂ ಪಾಕ್ ಸ್ಪರ್ಧಾತ್ಮಕ ಮೊತ್ತ ಗಳಿಸಿತು. ಸಯಾಮ್ ಅಯೂಬ್ (19; 17ಎ) ಮತ್ತು ಫರ್ಹಾನ್ ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 54 ರನ್ ಸೇರಿಸಿದರು. ಶಾಡ್ಲಿ ಆರನೇ ಓವರ್‌ನಲ್ಲಿ ಅಯೂಬ್ ವಿಕೆಟ್ ಗಳಿಸಿ, ಜೊತೆಯಾಟ ಮುರಿದರು. ನಾಯಕ ಸಲೀಂ ಆಘಾ (1) ಅವರ ವಿಕೆಟ್ ಕೂಡ ಶಾಡ್ಲಿ ಖಾತೆ ಸೇರಿತು.



ಸಾಹೀಬ್‌ಝಾದಾ ಫರ್ಹಾನ್ ಎಪಿ/ಪಿಟಿಐ ಚಿತ್ರ

ಫರ್ಹಾನ್ ಮತ್ತು ಬಾಬರ್ ಅಜಂ (46; 32ಎ) ಅವರು ಮೂರನೇ ವಿಕೆಟ್ ಜೊತೆಯಾಟದಲ್ಲಿ 81 ರನ್ ಸೇರಿಸಿದರು. ಬಾಬರ್ ಅರ್ಧಶತಕದ ಸನಿಹವಿದ್ದಾಗ ಮೊಹಮ್ಮದ್ ಮೊಹ್ಸಿನ್ ಬೌಲಿಂಗ್‌ನಲ್ಲಿ ಮಿಲಿಂದ್ ಪಡೆದ ಕ್ಯಾಚ್‌ಗೆ ನಿರ್ಗಮಿಸಿದರು. ಕೊನೆಯಲ್ಲಿ ಶಾದಾಬ್ ಖಾನ್ (30; 12ಎ) ಅಬ್ಬರಿಸಿ, ತಂಡದ ಮೊತ್ತವನ್ನು ಇನ್ನೂರರ ಸನಿಹ ಕೊಂಡೊಯ್ದರು.

ಸಂಕ್ಷಿಪ್ತ ಸ್ಕೋರು: ಪಾಕಿಸ್ತಾನ: 20 ಓವರ್‌ಗಳಲ್ಲಿ 9ಕ್ಕೆ190 (ಸಾಹೀಬ್‌ಝಾದಾ ಫರ್ಹಾನ್ 73, ಬಾಬರ್ ಅಜಂ 46, ಶಾದಾಬ್ ಖಾನ್ 30, ಶಾಡ್ಲಿ ವ್ಯಾನ್ ಶಾಲ್ಕ್‌ವಿಕ್ 25ಕ್ಕೆ4) ಅಮೆರಿಕ: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 158 (ಶಯಾನ್ ಜಹಾಂಗೀರ್ 49, ಮಿಲಿಂದ್ ಕುಮಾರ್ 29, ಶುಭಂ ರಂಜನೆ 51; ಉಸ್ಮಾನ್ ತಾರಿಕ್ 27ಕ್ಕೆ 3, ಶಾದಾಬ್ ಖಾನ್ 26ಕ್ಕೆ 2). ಪಂದ್ಯದ ಆಟಗಾರ: ಸಾಹೀಬ್‌ಝಾದಾ ಫರ್ಹಾನ್

ವೇಗದಶಕ್ತಿ ಗೈರುಹಾಜರಿಯಲ್ಲಿ ಆಸ್ಟ್ರೇಲಿಯಾ ಅಭಿಯಾನ

ಮಾರ್ಷ್ ಬಳಗಕ್ಕೆ ಐರ್ಲೆಂಡ್ ಸವಾಲು

ಕೊಲಂಬೊ (ಪಿಟಿಐ): ಪ್ರಮುಖ ಬೌಲರ್‌ಗಳ ಗೈರುಹಾಜರಿಯಲ್ಲಿ ಆಸ್ಟ್ರೇಲಿಯಾ ತಂಡವು ಬುಧವಾರದಿಂದ ಟಿ20 ವಿಶ್ವಕಪ್ ಅಭಿಯಾನವನ್ನು ಆರಂಭಿಸಲಿದೆ. ಮೊದಲ ಪಂದ್ಯದಲ್ಲಿ ಐರ್ಲೆಂಡ್ ತಂಡವನ್ನು ಎದುರಿಸಲಿದೆ.

ಅನುಭವಿ ಮತ್ತು ಮ್ಯಾಚ್ ವಿನ್ನಿಂಗ್ ವೇಗದ ಬೌಲರ್‌ಗಳಾದ ಪ್ಯಾಟ್ ಕಮಿನ್ಸ್, ಮಿಚೆಲ್ ಸ್ಟಾರ್ಕ್ ಮತ್ತು ಜೋಶ್ ಹ್ಯಾಜಲ್‌ವುಡ್ ಅವರು ಆಸ್ಟ್ರೇಲಿಯಾ ತಂಡದಲ್ಲಿ ಕಣಕ್ಕಿಳಿಯುತ್ತಿಲ್ಲ. ಕಮಿನ್ಸ್ ಮತ್ತು ಜೋಷ್ ಅವರು ಗಾಯದಿಂದಾಗಿ ಕಣಕ್ಕಿಳಿಯುತ್ತಿಲ್ಲ. ಎಡಗೈ ವೇಗಿ ಸ್ಟಾರ್ಕ್ ಅವರು ಟಿ20 ಮಾದರಿಯಿಂದ ಈಗಾಗಲೇ ನಿವೃತ್ತಿ ಘೋಷಿಸಿದ್ದಾರೆ.

ಈ ಖ್ಯಾತನಾಮರ ಅನುಪಸ್ಥಿತಿಯಲ್ಲಿ ನೇಥನ್ ಎಲೀಸ್ ಅವರು ಆಸ್ಟ್ರೇಲಿಯಾ ವೇಗದ ವಿಭಾಗದ ಸಾರಥ್ಯ ವಹಿಸುವ ಸಾಧ್ಯತೆ ಇದೆ. ಆದರೆ ಅವರು ಕೂಡ ಈಚೆಗೆ ಸ್ನಾಯುಸೆಳೆತದಿಂದಾಗಿ ಬಿಗ್ ಬ್ಯಾಷ್ ಲೀಗ್ (ಬಿಬಿಎಲ್) ಫೈನಲ್ ಪಂದ್ಯ ತಪ್ಪಿಸಿಕೊಂಡಿದ್ದರು. ತೊಡೆಸಂಧು ಸ್ನಾಯುವಿನ ಗಾಯದಿಂದ ಈಚೆಗೆ ಚೇತರಿಸಿಕೊಂಡಿರುವ ಲೆಗ್‌ಸ್ಪಿನ್ನರ್ ಆ್ಯಡಂ ಜಂಪಾ ಇಲ್ಲಿ ಆಡಲಿದ್ದಾರೆ. ಇದರಿಂದಾಗಿ ನಾಯಕ ಮಿಚೆಲ್ ಮಾರ್ಷ್ ಅವರಿಗೆ ಬೌಲರ್‌ಗಳನ್ನು ಅವರ ಸಾಮರ್ಥ್ಯಕ್ಕೆ ತಕ್ಕಂತೆ ಎಚ್ಚರಿಕೆಯಿಂದ ದುಡಿಸಿಕೊಳ್ಳುವ ಸವಾಲು ಇದೆ.



ಆ್ಯಡಂ ಜಂಪಾ

ಬ್ಯಾಟಿಂಗ್‌ನಲ್ಲಿ ಸ್ವತಃ ಮಾರ್ಷ್, ಟಿಮ್ ಡೇವಿಡ್, ಟ್ರಾವಿಸ್ ಹೆಡ್, ಜೋಶ್ ಇಂಗ್ಲಿಸ್, ಗ್ಲೆನ್ ಮ್ಯಾಕ್ಸ್‌ವೆಲ್ ಹಾಗೂ ಆಲ್‌ರೌಂಡರ್ ಗಳಾದ ಮಾರ್ಕಸ್ ಸ್ಟೋಯಿನಿಸ್, ಕ್ಯಾಮರಾನ್ ಗ್ರೀನ್ ಅವರ ಮೇಲೆ ಹೆಚ್ಚಿನ ಭರವಸೆ ಇದೆ. ಬಹುತೇಕ ಇವರೆಲ್ಲರಿಗೂ ಭಾರತದ ನೆಲದಲ್ಲಿ ಆಡಿದ ಅನುಭವ ಇದೆ.

ಆದರೆ ಅನುಭವಿ ಆಟಗಾರ ಪಾಲ್ ಸ್ಟರ್ಲಿಂಗ್ ನಾಯಕತ್ವದ ಐರ್ಲೆಂಡ್ ತಂಡವು ತಿರುಗೇಟು ನೀಡುವ ಸಾಮರ್ಥ್ಯ ಹೊಂದಿದೆ. ಬ್ಯಾರಿ ಮೆಕಾರ್ತಿ, ಮಾರ್ಕ್ ಅಡೇರ್, ರಾಸ್ ಅಡೇರ್, ಜೋಸ್ ಲಿಟಲ್ ಅವರು ಎದುರಾಳಿಗಳಿಗೆ ಸವಾಲೊಡ್ಡಬಲ್ಲ ಸಮರ್ಥರು. ಈ ಟೂರ್ನಿಯಲ್ಲಿ ಐರ್ಲೆಂಡ್ ತಂಡವು ಈಗಾಗಲೇ ಒಂದು ಪಂದ್ಯ ಆಡಿದ್ದು, ಅದರಲ್ಲಿ ಶ್ರೀಲಂಕಾ ಎದುರು ಪರಾಭವಗೊಂಡಿದೆ. ಆಸ್ಟ್ರೇಲಿಯಾಕ್ಕೆ ಇದು ಮೊದಲ ಪಂದ್ಯ.

ಇಂದಿನ ಪಂದ್ಯ

ದಕ್ಷಿಣ ಆಫ್ರಿಕಾ V/s ಅಫ್ಗಾನಿಸ್ತಾನ
(ಬೆಳಿಗ್ಗೆ 11ರಿಂದ; ಅಹಮದಾಬಾದ್)

ಆಸ್ಟ್ರೇಲಿಯಾ V/s ಐರ್ಲೆಂಡ್
(ಮಧ್ಯಾಹ್ನ 3. ಕೊಲಂಬೊ)

ಇಂಗ್ಲೆಂಡ್ V/s ವೆಸ್ಟ್ ಇಂಡೀಸ್
(ರಾತ್ರಿ7; ಮುಂಬೈ)

ಲೈವ್: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಜಿಯೊಸ್ಟಾರ್

ಆಂಧ್ರ ವಿರುದ್ಧ ಇನಿಂಗ್ಸ್, 90 ರನ್ ಜಯ

ರಣಜಿ ಟ್ರೋಫಿ: ಸೆಮಿಗೆ ಬಂಗಾಳ

ಕಲ್ಯಾಣಿ, ಪಶ್ಚಿಮ ಬಂಗಾಳ (ಪಿಟಿಐ): ಆತಿಥೇಯ ಬಂಗಾಳ ತಂಡವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಮಂಗಳವಾರ ಇಲ್ಲಿ ಮುಕ್ತಾಯವಾದ ಕ್ವಾರ್ಟರ್‌ಫೈನಲ್‌ನಲ್ಲಿ ಬಂಗಾಳ ತಂಡವು ಇನಿಂಗ್ಸ್ ಹಾಗೂ 90 ರನ್‌ಗಳಿಂದ ಆಂಧ್ರದ ಎದುರು ಜಯಿಸಿತು. ನಾಲ್ಕರ ಘಟ್ಟದಲ್ಲಿ ಜಮ್ಮು ಮತ್ತು ಕಾಶ್ಮೀರ ವಿರುದ್ಧ ಆಡಲಿದೆ.

ಅದಕ್ಕುತ್ತರವಾಗಿ ಬಂಗಾಳ ತಂಡವು ಸುದೀಪ್ ಕುಮಾರ್ ಘರಾಮಿ ಅವರು ಗಳಿಸಿದ 299 ರನ್‌ಗಳ ಬಲದಿಂದ 629 ರನ್ ಗಳಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ ಆಂಧ್ರ ತಂಡವು ಶಹಬಾಜ್ ಅಹಮದ್ (72ಕ್ಕೆ4) ಮತ್ತು ಸೂರಜ್ ಸಿಂಧು (42ಕ್ಕೆ2) ಅವರ ದಾಳಿಯ ಮುಂದೆ ಕುಸಿಯಿತು. ಆಂಧ್ರದ ನಿತೀಶ್ ಕುಮಾರ್ ರೆಡ್ಡಿ (90; 144ಎ) ಹತ್ತು ರನ್‌ಗಳಿಂದ ಶತಕ ತಪ್ಪಿಸಿಕೊಂಡರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಆಂಧ್ರ: 88.4 ಓವರ್‌ಗಳಲ್ಲಿ 295. ಬಂಗಾಳ:199.1 ಓವರ್‌ಗಳಲ್ಲಿ 629. ಎರಡನೇ ಇನಿಂಗ್ಸ್: ಆಂಧ್ರ: 72.2 ಓವರ್‌ಗಳಲ್ಲಿ 244 (ನಿತೀಶ್ ಕುಮಾರ್ ರೆಡ್ಡಿ 90, ರಿಕಿ ಭುಯ್ 30, ತ್ರಿಪುರಣಾ ವಿಜಯ್ 46, ನರಸಿಂಹ ರಾಜು 25, ಸೂರಜ್ ಸಿಂಧು ಜೈಸ್ವಾಲ್ 42ಕ್ಕೆ2, ಶಹಬಾಜ್ ಅಹಮದ್ 72ಕ್ಕೆ4) ಫಲಿತಾಂಶ: ಬಂಗಾಳ ತಂಡಕ್ಕೆ ಇನಿಂಗ್ಸ್, 90 ರನ್ ಜಯ.



ಮೊಹಮ್ಮದ್ ಶಮಿ ಮತ್ತು ಶಹಬಾಜ್ ಅಹಮದ್

ಕರ್ನಾಟಕ ತಂಡಕ್ಕೆ ವೈಶಾಖ ವಾಪಸ್

ಬೆಂಗಳೂರು: ಲಖನೌನಲ್ಲಿ ಇದೇ 15ರಿಂದ ನಡೆಯಲಿರುವ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಆಡಲಿರುವ ದೇವದತ್ತ ಪಡಿಕ್ಕಲ್ ನಾಯಕತ್ವದ ಕರ್ನಾಟಕ ತಂಡವನ್ನು ಮಂಗಳವಾರ ಪ್ರಕಟಿಸಲಾಗಿದೆ.

ಸೋಮವಾರ ನಡೆದ ಕ್ವಾರ್ಟರ್ ಫೈನಲ್‌ನಲ್ಲಿ ಮುಂಬೈ ತಂಡವನ್ನು ಅದರ ತವರು ನೆಲದಲ್ಲಿಯೇ ಮಣಿಸಿದ್ದ ತಂಡದಲ್ಲಿ ಒಂದು ಬದಲಾವಣೆ ಮಾಡಲಾಗಿದೆ. ಗಾಯದಿಂದ ಚೇತರಿಸಿಕೊಂಡಿರುವ ವೇಗಿ ವೈಶಾಖ ವಿಜಯ ಕುಮಾರ್ ತಂಡಕ್ಕೆ ವಾಪಸಾಗಿದ್ದಾರೆ. ಎಂ.ವೆಂಕಟೇಶ್ ಅವರನ್ನು ತಂಡದಿಂದ ಕೈಬಿಡಲಾಗಿದೆ. ಭಾರತ ತಂಡದ ಆಟಗಾರರಾದ ಕೆ.ಎಲ್. ರಾಹುಲ್ ಮತ್ತು ಪ್ರಸಿದ್ಧ ಎಂ ಕೃಷ್ಣ ಕೂಡ ಇದ್ದಾರೆ.

ಕರ್ನಾಟಕ ತಂಡವು ನಾಲ್ಕರ ಘಟ್ಟದಲ್ಲಿ ಉತ್ತರಾಖಂಡವನ್ನು ಎದುರಿಸಲಿದೆ. ಉತ್ತರಾಖಂಡಕ್ಕೆ ಡೆಹ್ರಾಡೂನ್ ತವರು ಕ್ರೀಡಾಂಗಣವಾಗಿದೆ. ಆದರೆ ಕಾರಣಾಂತರಗಳಿಂದ ಪಂದ್ಯವನ್ನು ಲಖನೌನ ಏಕನಾ ಕ್ರೀಡಾಂಗಣದಲ್ಲಿ ಆಯೋಜಿಸಲಾಗುತ್ತಿದೆ.



ದೇವದತ್ತ ಪಡಿಕ್ಕಲ್

ಸೆಮಿಫೈನಲ್ ಪಂದ್ಯಗಳು	
ಉತ್ತರಾಖಂಡ	ಕರ್ನಾಟಕ
(ತಾಣ:ಲಖನೌ)	
ಬಂಗಾಳ	ಜಮ್ಮು ಕಾಶ್ಮೀರ
(ತಾಣ:ಕಲ್ಯಾಣಿ)	
ದಿನಾಂಕ: ಫೆ.15ರಿಂದ 19	

ತಂಡ: ದೇವದತ್ತ ಪಡಿಕ್ಕಲ್ (ನಾಯಕ), ಮಯಂಕ್ ಅಗರವಾಲ್, ಕೆ.ಎಲ್. ರಾಹುಲ್, ಅನೀಶ್ ಕೆ.ವಿ., ಕರುಣ್ ನಾಯರ್, ಆರ್. ಸ್ಮರಣ್, ಶ್ರೇಯಸ್ ಗೋಪಾಲ್, ಕೃತಿಕ್ ಕೃಷ್ಣ (ವಿಕೆಟ್‌ಕೀಪರ್), ವಿದ್ವತ್ ಕಾವೇರಪ್ಪ, ವಿದ್ಯಾಧರ್ ಪಾಟೀಲ, ಪ್ರಸಿದ್ಧ ಎಂ ಕೃಷ್ಣ, ಮೊಹ್ಸಿನ್ ಖಾನ್, ಶಿಖರ್ ಶೆಟ್ಟಿ, ಕೆ.ಎಲ್. ಶ್ರೀಜಿತ್, ವೈಶಾಖ ವಿಜಯಕುಮಾರ್. ಕೋಚ್: ಯರೇಗೌಡ ಕೆ.

ಅಭ್ಯಾಸಕ್ಕೆ ಬರದ ಅಭಿಷೇಕ್ ಶರ್ಮಾ

ನವದೆಹಲಿ (ಪಿಟಿಐ): ಭಾರತ ತಂಡದ ಆರಂಭಿಕ ಆಟಗಾರ ಅಭಿಷೇಕ್ ಶರ್ಮಾ ಅವರು ಹೊಟ್ಟೆನೋವಿನಿಂದ ಬಳಲುತ್ತಿದ್ದಾರೆ. ಅದರಿಂದಾಗಿ ಮಂಗಳವಾರವೂ ಅವರು ನೆಟ್ಸ್ ಅಭ್ಯಾಸದಲ್ಲಿ ಪಾಲ್ಗೊಳ್ಳಲಿಲ್ಲ. ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಪೂರ್ಣ ಫಿಟ್ ಆಗಿದ್ದು ಬಹಳ ಹೊತ್ತು ಬೌಲಿಂಗ್ ಮಾಡಿದರು.



ಗುರುವಾರ ನಡೆಯಲಿರುವ ನಮಿಬಿಯಾ ಎದುರಿನ ಪಂದ್ಯದಲ್ಲಿ ಶರ್ಮಾ ಆಡುವುದರ ಕುರಿತು ಸ್ಪಷ್ಟವಾಗಿಲ್ಲ.

'ವಾಷಿಂಗ್ಟನ್ ನಿನ್ನೆ (ಸೋಮವಾರ) ತಂಡಕ್ಕೆ ಸೇರಿಕೊಂಡಿದ್ದಾರೆ. ಅವರು ಅಭ್ಯಾಸದಲ್ಲಿದ್ದಾರೆ. ಆದರೆ ಅಭಿ ಅವರ ಹೊಟ್ಟೆನೋವು ಪೂರ್ಣ ಶಮನವಾಗಿಲ್ಲ. ಅವರಿಗೆ ಚೇತರಿಸಿಕೊಳ್ಳಲು ಇನ್ನಷ್ಟು ಸಮಯ ಬೇಕಿದೆ' ಎಂದು ಸಹಾಯಕ ಕೋಚ್ ರಯನ್ ಟೆನ್ ಡಾಷೆ ತಿಳಿಸಿದ್ದಾರೆ.

ಆರ್‌ಸಿಬಿ ಆಟಗಾರ್ತಿಯರಿಗೆ ಉಡುಗೊರೆ

ಬೆಂಗಳೂರು: ಮಹಿಳಾ ಪ್ರೀಮಿಯರ್ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ್ತಿಯರಿಗೆ 'ಚೇತಕ್ ಸಿ25' ಅನ್ನು ಉಡುಗೊರೆ ನೀಡುವುದಾಗಿ ಬಜಾಜ್ ಆಟೊ ಲಿಮಿಟೆಡ್ ಘೋಷಿಸಿದೆ.

'ಡಬ್ಲ್ಯುಪಿಎಲ್ ಗೆದ್ದ ಆರ್‌ಸಿಬಿ ತಂಡಕ್ಕೆ ಅಭಿನಂದನೆಗಳು. ಈ ವಿಜಯವನ್ನು ಸಂಭ್ರಮಿಸಲು ಆಟಗಾರ್ತಿಯರಿಗೆ ಚೇತಕ್ ಸಿ25 ಅನ್ನು ಉಡುಗೊರೆಯಾಗಿ ನೀಡುತ್ತಿದ್ದೇವೆ' ಎಂದು ಬಜಾಜ್ ಆಟೊ ಲಿಮಿಟೆಡ್‌ನ ಮಾರ್ಕೆಟಿಂಗ್ ಅಧ್ಯಕ್ಷ ಸುಮಿತ್ ನಾರಂಗ್ ಹೇಳಿದ್ದಾರೆ.

ಏಷ್ಯನ್ ಶೂಟಿಂಗ್: ಆಕೃತಿಗೆ ಬೆಳ್ಳಿ

ನವದೆಹಲಿ (ಪಿಟಿಐ): ಭಾರತದ ಆಕೃತಿ ದಹಿಯಾ ಮತ್ತು ಅಂಜುಮ್ ಮೌದ್ಗಿಲ್ ಅವರು ಏಷ್ಯನ್ ಶೂಟಿಂಗ್ ಚಾಂಪಿಯನ್‌ಷಿಪ್‌ನ ಮಹಿಳೆಯರ 50 ಮೀ. ರೈಫಲ್ 3 ಪೊಸಿಷನ್ಸ್ ಸ್ಪರ್ಧೆಯಲ್ಲಿ ಮಂಗಳವಾರ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದುಕೊಂಡರು.

ಕಜಾಕಸ್ತಾನದ ಸೋಫಿಯಾ ಶುಲ್ಘೆಂಕೊ ಅವರು ಕರ್ನಿ ಸಿಂಗ್ ರೇಂಜ್‌ನಲ್ಲಿ ಚಿನ್ನ ಗೆಲ್ಲುವ ಮೊದಲು ನೂತನ ವಿಶ್ವದಾಖಲೆ ಸ್ಥಾಪಿಸಿದರು.

35 ಗುರಿಯತ್ನಗಳಿರುವ ಫೈನಲ್‌ನಲ್ಲಿ ಸೋಫಿಯಾ 358.2 ಸ್ಕೋರ್ ದಾಖಲಿಸಿದರು. ಅವರಿಗಿಂತ ನಾಲ್ಕು ಪಾಯಿಂಟ್ ಹಿಂದೆಬಿದ್ದ ಆಕೃತಿ (354) ಬೆಳ್ಳಿ ಗೆದ್ದರು. ಮೂರನೇ ಸ್ಥಾನ ಪಡೆದ ಅಂಜುಮ್ 340.4 ಸ್ಕೋರ್ ದಾಖಲಿಸಿದರು.

ಸೋಫಿಯಾ ಈ ಹಾದಿಯಲ್ಲಿ ಇನ್ನೂ ಮೂರು– ವಿಶ್ವ ಜೂನಿಯರ್, ಏಷ್ಯನ್ ಮತ್ತು ಏಷ್ಯನ್ ಜೂನಿಯರ್– ದಾಖಲೆಗಳನ್ನು ಸ್ಥಾಪಿಸಿದರು.

ಜೂನಿಯರ್ ಮಹಿಳೆಯರ 3ಪಿ ಫೈನಲ್‌ನಲ್ಲಿ ಭಾರತದ ಪ್ರಾಚಿ ಗಾಯಕವಾಡ್ 353.4 ಸ್ಕೋರ್‌ನೊಡನೆ ವಿಜೇತರಾದರು. ಕಜಾಕಸ್ತಾನದ 14 ವರ್ಷ ವಯಸ್ಸಿನ ಪ್ರತಿಭೆ ತೊಮಿರಿಸ್ ಅಮನೋವಾ 351.4 ಸ್ಕೋರ್‌ನೊಡನೆ ಬೆಳ್ಳಿ ಮತ್ತು ಕರ್ನಾಟಕದ ಅನುಷ್ಕಾ ತೋಕೂರ್ (341.1) ಕಂಚಿನ ಪಕದ ಗೆದ್ದರು. ಮಹಾರಾಷ್ಟ್ರದ ಪ್ರಾಚಿ, ಅನುಷ್ಕಾ ಮತ್ತು ಹೆಝೆಲ್ ಅವರಿದ್ದ ಭಾರತ ತಂಡ ಒಟ್ಟು 1748 ಪಾಯಿಂಟ್‌ಗಳೊಡನೆ ಟೀಮ್ ಚಿನ್ನ ಸಹ ಗೆದ್ದಿತು. ಮಹಿಳೆಯರ ರೈಫಲ್ 3ಪಿ ತಂಡ ಸ್ಪರ್ಧೆಯಲ್ಲಿ ಕಜಾಕಸ್ಥಾನ ತಂಡ, ಆತಿಥೇಯ ತಂಡವನ್ನು 4 ಪಾಯಿಂಟ್‌ಗಳಿಂದ ಹಿಂದೆಹಾಕಿ ಚಿನ್ನ ಗೆದ್ದಿತು. ಕಜಾಕ್ ತಂಡ ಒಟ್ಟು 1760 ಪಾಯಿಂಟ್ಸ್ ಕಲೆಹಾಕಿತು.

ಭಾರತ ಒಟ್ಟು 39 ಚಿನ್ನ, 15 ಬೆಳ್ಳಿ ಮತ್ತು 12 ಕಂಚಿನ ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಇತರ ತಂಡಗಳಿಗಿಂತ ಬಹೂ ಮುಂದಿದೆ.

ಕರ್ನಾಟಕ ತಂಡಕ್ಕೆ ಹ್ಯಾಟ್ರಿಕ್ ಗೆಲುವು

ಬೆಂಗಳೂರು: ಬಿ.ಜಿ. ತೇಜಸ್ವಿನಿ ಮತ್ತು ಸಹನಾ ಎಸ್. ಪವಾರ್ ಅವರ ಪರಿಣಾಮಕಾರಿ ಬೌಲಿಂಗ್ ದಾಳಿಯ ನೆರವಿನಿಂದ ಕರ್ನಾಟಕ ತಂಡವು ಸೀನಿಯರ್ ಮಹಿಳಾ ಏಕದಿನ ಟ್ರೋಫಿ ಟೂರ್ನಿಯಲ್ಲಿ ಹ್ಯಾಟ್ರಿಕ್ ಗೆಲುವು ಸಾಧಿಸಿತು.

ರಾಜ್‌ಕೋಟ್‌ನ ನಿರಂಜನ್ ಶಾ ಕ್ರೀಡಾಂಗಣದಲ್ಲಿ ಮಂಗಳವಾರ ನಡೆದ ಪಂದ್ಯದಲ್ಲಿ ಮಧ್ಯಪ್ರದೇಶ ತಂಡವನ್ನು ಏಳು ವಿಕೆಟ್‌ಗಳಿಂದ ಮಣಿಸಿತು. ಎಲೀಟ್ ಎ ಗುಂಪಿನಲ್ಲಿ ಕರ್ನಾಟಕ ತಂಡವು 12 ಅಂಕಗಳೊಂದಿಗೆ ಗುಂಪಿನಲ್ಲಿ ಅಗ್ರಸ್ಥಾನದಲ್ಲಿದೆ.

ಟಾಸ್ ಸೋತು ಫೀಲ್ಡಿಂಗ್‌ಗೆ ಇಳಿದ ಕರ್ನಾಟಕದ ತೇಜಸ್ವಿನಿ (7ಕ್ಕೆ 3) ಮತ್ತು ಸಹನಾ (7ಕ್ಕೆ 3) ಅವರು ಮಧ್ಯಪ್ರದೇಶದ ಬ್ಯಾಟಿಂಗ್ ಬೆನ್ನೆಲುಬನ್ನು ಮುರಿದರು. 29.2 ಓವರ್‌ಗಳಲ್ಲಿ ಕೇವಲ 84 ರನ್‌ಗಳಿಗೆ ಕುಸಿಯಿತು.

ಗುರಿ ಬೆನ್ನಟ್ಟಿದ ಕರ್ನಾಟಕ ತಂಡವು ನಾಯಕಿ ಎಸ್. ಶುಭಾ (36;28ಎ) ಅವರ ಬ್ಯಾಟಿಂಗ್ ನೆರವಿನಿಂದ 16.1 ಓವರ್‌ಗಳಲ್ಲಿ ಗೆಲುವಿನ ನಗೆ ಬೀರಿತು. ಕರ್ನಾಟಕ ಇದೇ 12ರಂದು ಒಡಿಶಾ ತಂಡವನ್ನು ಎದುರಿಸಲಿದೆ.

ಅಂತರ ವಿ.ವಿ ಮಹಿಳಾ ಬ್ಯಾಸ್ಕೆಟ್‌ಬಾಲ್: ಜೈನ್ ತಂಡ ಶುಭಾರಂಭ

ಬೆಂಗಳೂರು: ಅಹಾನಾ ಮತ್ತು ಧಾರಾ ಅವರ ಆಟದ ನೆರವಿನಿಂದ ಆತಿಥೇಯ ಜೈನ್ ವಿಶ್ವವಿದ್ಯಾಲಯ ತಂಡವು ಮಂಗಳವಾರ ಆರಂಭಗೊಂಡ ಅಖಿಲ ಭಾರತ ಅಂತರ ವಿಶ್ವವಿದ್ಯಾಲಯ ಮಹಿಳಾ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಶುಭಾರಂಭ ಮಾಡಿತು.

ಕನಕಪುರ ರಸ್ತೆಯಲ್ಲಿರುವ ಜೈನ್ ವಿ.ವಿಯ ಗ್ಲೋಬಲ್ ಕ್ಯಾಂಪಸ್‌ನಲ್ಲಿ ನಡೆಯುತ್ತಿರುವ ಟೂರ್ನಿಯ ಮೊದಲ ಪಂದ್ಯದಲ್ಲಿ ಜೈನ್ ತಂಡವು 89–47ರಿಂದ ಡಿಎವಿವಿ ಇಂದೋರ್ ತಂಡವನ್ನು ಮಣಿಸಿತು. ಅಹಾನಾ ಮತ್ತು ಧಾರಾ ಕ್ರಮವಾಗಿ 14 ಮತ್ತು 13 ಅಂಕ ಗಳಿಸಿದರು. ಮಧ್ಯಂತರದ ವೇಳೆ ಜೈನ್ 52–23 ಮುನ್ನಡೆ ಸಾಧಿಸಿತ್ತು. ಬೆಂಗಳೂರಿನ ಕ್ರೈಸ್ಟ್ ವಿ.ವಿ ತಂಡವು 71–70ರಿಂದ ಎಲ್‌ಎನ್‌ಐಪಿಇ ವಿ.ವಿ ತಂಡವನ್ನು ಮಣಿಸಿತು. ಶೋಮಿರಾ ಬಿದಾಯೆ (26), ಆಧ್ಯಾ ಸ್ವಾಮಿ (11) ಕ್ರೈಸ್ಟ್ ಗೆಲುವಿನಲ್ಲಿ ಮಿಂಚಿದರು. ವಿರಾಮದ ವೇಳೆಗೆ ಕ್ರೈಸ್ಟ್ 27–33ರಿಂದ ಹಿನ್ನಡೆಯಲ್ಲಿತ್ತು.

ಫಲಿತಾಂಶಗಳು: ಜೈನ್ ವಿ.ವಿ 89–47ರಿಂದ ಡಿಎವಿವಿ ಇಂದೋರ್ ವಿರುದ್ಧ; ಕ್ರೈಸ್ಟ್ ವಿ.ವಿ 71–70ರಿಂದ ಗ್ವಾಲಿಯರ್‌ನ ಎಲ್‌ಎನ್‌ಐಪಿಇ ವಿ.ವಿ ವಿರುದ್ಧ; ರಾಜಸ್ಥಾನ ವಿ.ವಿ 64–21ರಿಂದ ಎಂಬಿಎಸ್‌ಪಿಎಸ್‌ಯು ಪಟಿಯಾಲ ವಿರುದ್ಧ; ಪಂಜಾಬ್ ವಿ.ವಿ 73–62ರಿಂದ ಉತ್ತರಾಖಂಡದ ಎಲ್‌ಟಿಎಂ ವಿ.ವಿ ವಿರುದ್ಧ; ಚೆನ್ನೈ ಎಸ್‌ಆರ್‌ಎಂ ವಿ.ವಿ 76–55ರಿಂದ ಛತ್ತೀಸಗಢ ಹೇಮಚಂದ್ ವಿ.ವಿ ವಿರುದ್ಧ ಗೆಲುವು ಸಾಧಿಸಿದವು.

ಪ್ರೊ ಲೀಗ್ ಹಾಕಿ: ಹರ್ಮನ್‌ಪ್ರೀತ್ ಪಡೆಗೆ ಬೆಲ್ಜಿಯಂ ಎದುರಾಳಿ

ಭಾರತ ತಂಡಕ್ಕೆ ಶುಭಾರಂಭದ ವಿಶ್ವಾಸ

ರೂರ್ಕೆಲಾ (ಪಿಟಿಐ): ಭಾರತ ಪುರುಷರ ಹಾಕಿ ತಂಡ 2025ರ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಎಂಟನೇ ಸ್ಥಾನ ಗಳಿಸಿ ನಿರಾಸೆ ಮೂಡಿಸಿತ್ತು. ಬುಧವಾರ ಆರಂಭವಾಗುವ ಈ ಋತುವಿನ ಪ್ರೊ ಲೀಗ್‌ನ ಮೊದಲ ಪಂದ್ಯದಲ್ಲಿ ಆತಿಥೇಯ ಭಾರತ ತಂಡ ಉತ್ತಮ ಪ್ರದರ್ಶನದ ನಿರೀಕ್ಷೆಯಲ್ಲಿದೆ.

ಬುಧವಾರ ಪ್ರಬಲ ಬೆಲ್ಜಿಯಂ ತಂಡವನ್ನು ಎದುರಿಸುವ ಮೂಲಕ ಭಾರತ ತಂಡ ಅಭಿಯಾನ ಆರಂಭಿಸಲಿದೆ. ಆತಿಥೇಯರು ಮರುದಿನ ಅರ್ಜೆಂಟೀನಾ ತಂಡದ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಶನಿವಾರ ಬೆಲ್ಜಿಯಂ ತಂಡದ ವಿರುದ್ಧ ಮರುಪಂದ್ಯ ಆಡಲಿರುವ ಭಾರತ ತಂಡವು, ಭಾನುವಾರ ಅರ್ಜೆಂಟೀನಾ ತಂಡವನ್ನು ಮತ್ತೊಮ್ಮೆ ಎದುರಿಸಲಿದೆ.

ಅನುಭವಿ ಮತ್ತು ಉದಯೋನ್ಮುಖ ಆಟಗಾರರ ಹದವಾದ ಮಿಶ್ರಣ ಹೊಂದಿರುವ ಭಾರತ ತಂಡವು, ಪ್ರಬಲ ಎದುರಾಳಿಗಳ ವಿರುದ್ಧ ತವರಿನಂಗಳದಲ್ಲಿ ಆಡುವ ಪರಿಸ್ಥಿತಿಯ ಲಾಭ ಪಡೆಯಲು ಯೋಚನೆಯಲ್ಲಿದೆ.



ಭಾರತದ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್

ಭಾರತ ಈ ಬಾರಿಯ ಲೀಗ್‌ನಲ್ಲಿ ಆಡಲು ಕಾತರದಿಂದ ಕಾಯುತ್ತಿದ್ದರೆ, ಅರ್ಜೆಂಟೀನಾ ಮತ್ತು ಬೆಲ್ಜಿಯಂ– ಈ ಎರಡೂ ತಂಡಗಳು ಈಗಾಗಲೇ ಕೆಲವು ಪಂದ್ಯಗಳನ್ನು ಆಡಿದ್ದು ಉತ್ತಮ ಆರಂಭ ಮಾಡಿವೆ.

ಅರ್ಜೆಂಟೀನಾ ನಾಲ್ಕು ಪಂದ್ಯಗಳನ್ನು ಆಡಿದ್ದು 11 ಅಂಕಗಳೊಡನೆ ಎರಡನೇ ಸ್ಥಾನದಲ್ಲಿದೆ. ಮೂರು ಪಂದ್ಯಗಳನ್ನು ನಿಗದಿ ಅವಧಿಯಲ್ಲಿ ಗೆದ್ದು, ಒಂದನ್ನು ಶೂಟೌಟ್‌ನಲ್ಲಿ ಜಯಿಸಿದೆ.

ಬೆಲ್ಜಿಯಂ ಸಹ ನಾಲ್ಕು ಪಂದ್ಯಗಳನ್ನು ಆಡಿದ್ದು, 10 ಅಂಕಗಳೊಂದಿಗೆ ಮೂರನೇ ಸ್ಥಾನದಲ್ಲಿದೆ. ಮೂರು ಪಂದ್ಯಗಳನ್ನು ಗೆದ್ದು, ಒಂದನ್ನು ಶೂಟೌಟ್‌ನಲ್ಲಿ ಸೋತಿದೆ.

ಇತಿಹಾಸ ಗಮನಿಸಿದರೆ, ಭಾರತ ವಿರುದ್ಧ ಈವರೆಗಿನ ಮುಖಾಮುಖಿಯಲ್ಲಿ ಬೆಲ್ಜಿಯಂ ಮೇಲುಗೈ ಸಾಧಿಸಿದೆ. 2013 ರಿಂದ ಈಚೆಗೆ ಉಭಯ ತಂಡಗಳು 35 ಸಲ ಮುಖಾಮುಖಿಯಾಗಿದ್ದು, ಯುರೋಪಿನ ತಂಡ 22 ಸಲ, ಭಾರತ 11 ಸಲ ಗೆದ್ದಿವೆ. ಎರಡು ಪಂದ್ಯಗಳು ಡ್ರಾ ಆಗಿವೆ.

ಅರ್ಜೆಂಟೀನಾ ವಿರುದ್ಧ ಭಾರತದ ದಾಖಲೆ ಉತ್ತಮವಾಗಿದೆ. 2013ರ ನಂತರ ಆಡಿರುವ 19 ಪಂದ್ಯಗಳಲ್ಲಿ 10ರಲ್ಲಿ ಗೆದ್ದಿದೆ. ಅರ್ಜೆಂಟೀನಾ ಏಳರಲ್ಲಿ ವಿಜಯಿಯಾಗಿದೆ.

'ಯುವ ಆಟಗಾರರಾದ ಅಮನದೀಪ್ ಲಾಕ್ರಾ, ಮನ್ಮೀತ್ ಸಿಂಗ್, ರೋಷನ್ ಕುಜೂರ್ ಅವರು ತಂಡದಲ್ಲಿ ಅವಕಾಶ ಪಡೆದಿರುವುದು ಸಂತಸ ಮೂಡಿಸಿದೆ. ಇತ್ತೀಚೆಗೆ ನಡೆದ ಹೀರೊ ಹಾಕಿ ಇಂಡಿಯಾ ಲೀಗ್‌ನಲ್ಲಿ ಈ ಆಟಗಾರರು ಅಮೋಘವಾಗಿ ಆಡಿದ್ದು, ತಮ್ಮಲ್ಲಿರುವ ಸಾಮರ್ಥ್ಯದ ಪರಿಚಯ ನೀಡಿದ್ದಾರೆ' ಎಂದು ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಹೇಳಿದರು.

'ಅಂತರರಾಷ್ಟ್ರೀಯ ಮಟ್ಟದಲ್ಲಿ ಛಾಪು ಮೂಡಿಸಲು ಅವರಿಗೆ ಇದು ಸಕಾಲ. ಅವರೆಲ್ಲಾ ಅವಕಾಶ ಬಳಸಿಕೊಳ್ಳುವ ವಿಶ್ವಾಸವಿದೆ' ಎಂದರು.